ಕರ್ನಾಟಕದ ಏಕೀಕರಣ ಚಳವಳಿ – ತುಳುನಾಡಿನ ಕೊಡುಗೆ

ಪ್ರೊ. ತುಕಾರಾಮ್ ಪೂಜಾರಿ

೫೦
ಕರ್ನಾಟಕ
KARNATAKA

ಸುವರ್ಣ ಕರ್ನಾಟಕ ಯೋಜನೆಯ ಪ್ರಕಟಣೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು

ಕರ್ನಾಟಕದ ಏಕೀಕರಣ ಚಳವಳಿ - ತುಳುನಾಡಿನ ಕೊಡುಗೆ

ಪ್ರೊ. ತುಕಾರಾಮ್ ಪೂಜಾರಿ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 3.

ದೂರವಾಣಿ / ಫ್ಯಾಕ್ಸ್ : 0824- 2459389

Email: tuluacademy@yahoo.co.in

ಮುದ್ರಣ	:	2008
ಪುಟಗಳು	:	84
ಬೆಲೆ	:	50/-
ಹಕ್ಕುಗಳು	:	ಅಕಾಡೆಮಿ
ಪ್ರಧಾನ ಸಂಪಾದಕರು	:	**ಯಮ್. ಕೆ. ಸೀತಾರಾಮ್ ಕುಲಾಲ್** ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.
ಪ್ರಕಾಶಕರು	:	ಎಸ್.ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಲಾಲ್‌ಬಾಗ್, ಮಂಗಳೂರು - 3 ದೂರವಾಣಿ / ಫ್ಯಾಕ್ಸ್ : 0824 - 2459389 Email: tuluacademy@yahoo.co.in
ಮುದ್ರಣ	:	ಪವನ್ ಗ್ರಾಫಿಕ್ಸ್ ಎನ್. ಡಿ. ಕಾಂಪ್ಲೆಕ್ಸ್, ಕುದ್ರೋಳಿ ಮಂಗಳೂರು -3, M : 9242885743.

ಅಧ್ಯಕ್ಷರ ಮಾತು

ಕರ್ನಾಟಕ ರಾಜ್ಯವು 2006 ನವೆಂಬರ್‌ನಿಂದ 2007 ನವೆಂಬರ್‌ವರೆಗೆ ಸುವರ್ಣ ಕರ್ನಾಟಕ ವರ್ಷವನ್ನು ಆಚರಿಸಿತು. ಈ ಸಂದರ್ಭದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು "ಕರ್ನಾಟಕ ಏಕೀಕರಣ ಚಳವಳಿ ತುಳುನಾಡಿನ ಕೊಡುಗೆ"ಯ ಬಗ್ಗೆ ಸುಮಾರು 75 ರಿಂದ 80 ಪುಟದೊಳಗಿನ ಹೊತ್ತಗೆಯನ್ನು ಬರೆಯಿಸಿ ಹೊರತರುವ ಯೋಜನೆಯನ್ನು ಹಮ್ಮಿಕೊಂಡಿತು. ಆದರೆ ಈ ವಿಚಾರದ ಕುರಿತು ಬರೆಯಲು ಸಾಕಷ್ಟು ಅನುಭವ ಹಾಗೂ ಜ್ಞಾನ ಹೊಂದಿದವರು ಬೇಕೆಂದಾಗ ನಮ್ಮ ಗಮನಕ್ಕೆ ಬಂದವರು ಪ್ರೊ. ತುಕರಾಂ ಪೂಜಾರಿಯವರು. ಇವರು ಬಂಟ್ವಾಳ ಎಸ್.ವಿ.ಎಸ್. ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದು, 'ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ' ನಡೆಸುತ್ತಿದ್ದು, ಅಲ್ಲೊಂದು ತುಳು ಸಂಸ್ಕೃತಿಗೆ ಸಂಬಂಧಿಸಿದ ಪರಿಕರಗಳನ್ನು ಸಂಗ್ರಹಿಸಿ, ತನ್ನದೇ ಆದ ಖರ್ಚಿನಲ್ಲಿ ಹೊಸ ನಿವೇಶನದಲ್ಲಿ ಹಲವಾರು ಕಟ್ಟಡಗಳನ್ನು ನಿರ್ಮಿಸಿ ರಚನಾತ್ಮಕ ಕಾರ್ಯ ನಡೆಸುತ್ತಿದ್ದಾರೆ.

ಕರ್ನಾಟಕ ಏಕೀಕರಣದ ಚಳುವಳಿಯ ಬಗ್ಗೆ ಆಳವಾದ ಅಭ್ಯಾಸ ನಡೆಸಿ 1890 ರಿಂದ ಕರ್ನಾಟಕ ಏಕೀಕರಣಕ್ಕೆ ಜೀವ ತುಂಬಿದವರ ಬಗ್ಗೆ ಬರೆದ್ದುದು ಮಾತ್ರವಲ್ಲ, ಕರ್ನಾಟಕ

ಏಕೀಕರಣ ಚಳವಳಿಗೆ ದುಡಿದ ಮಹನೀಯರ ತ್ಯಾಗ ಮನೋಭಾವವನ್ನು ಸವಿವರವಾಗಿ ನೀಡಿದ್ದಾರೆ. ತುಳುನಾಡಿನ ಕೊಡುಗೆಯನ್ನು ನವೀರುನವಿರಾಗಿ ಬಿಡಿಸಿ ಹೇಳಿದ್ದಾರೆ.

ಸುಮಾರು 75 ರಿಂದ 80 ಪುಟದೊಳಗೆ ಅವರು ಸಂಪಾದಿಸಿದ ಅನುಭವದ ವಿವರಗಳನ್ನು ಎಳೆಎಳೆಯಾಗಿ ಬಿಡಿಸಿದಾಗ, ಎಲ್ಲಿಯೂ ಅತಿಶಯೋಕ್ತಿಗೆ ವಿಷಯಗಳನ್ನು ಕೊಂಡು ಹೋಗದೆ, ಉತ್ತಮ ಕೊಡುಗೆಯಾಗಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಗೆ ಹಸ್ತಪ್ರತಿಯನ್ನು ನೀಡಿದ್ದಾರೆ. ಹಸ್ತಪ್ರತಿ ಅಚ್ಚಿನ ಪ್ರತಿಯಾಗಿದೆ. ನಿಮ್ಮೆಲ್ಲರ ತಿಳುವಳಿಕೆಗೆ ಪಠ್ಯಪುಸ್ತಕವಾಗಿದೆ.

ಇದನ್ನು ರಚಿಸಿದ ಪ್ರೊ. ತುಕರಾಂ ಪೂಜಾರಿಯವರಿಗೂ ಅಚ್ಚು ಮಾಡಿದ ಪವನ್ ಗ್ರಾಫಿಕ್ಸ್ ಅವರಿಗೂ ಕೃತಜ್ಞತೆಗಳು.

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು

ಲೇಖಕರ ಮಾತು

ಎರಡು ಸಹಸ್ರಕ್ಕೂ ಮಿಕ್ಕ ಇತಿಹಾಸ ಹಾಗೂ ಹಿನ್ನೆಲೆಯನ್ನು ಹೊಂದಿರುವ ಭಾಷೆ ಕನ್ನಡ. ಹೆಸರಾಂತ ರಾಜ ಮನೆತನಗಳ ಆಡಳಿತದ ಅಡಿಯಲ್ಲಿ ಬೌಗೋಳಿಕವಾಗಿ ಹಿಗ್ಗಿ ಕುಗ್ಗಿ ಅನೇಕ ಏರು ಪೇರುಗಳನ್ನು ಕಂಡ ನಾಡು ಬ್ರಿಟಿಷರ ಆಳ್ವಿಕೆಯಲ್ಲಿ ಮತ್ತು ಭಾರತಕ್ಕೆ ಸ್ವಾತಂತ್ರ್ಯ ಲಭಿಸುವ ಮುನ್ನ ಕರ್ನಾಟಕವು ಇಪ್ಪತ್ತು ಸಣ್ಣ ಪುಟ್ಟ ಆಡಳಿತಗಳಲ್ಲಿ ಹರಿದು ಹಂಚಿ ಹೋಗಿತ್ತು. ಬ್ರಿಟಿಷರು ಮಾಡಿದ ಪ್ರಾಂತೀಕರಣ ಯಾವುದೇ ವ್ಯವಸ್ಥೆಗೆ ಒಳಪಟ್ಟಿರಲಿಲ್ಲ ಇದು ಕೇವಲ ಆಡಳಿತಾತ್ಮಕವಾದ ಹಾಗೂ ತಮ್ಮ ಅನುಕೂಲಕ್ಕಾಗಿ ರೂಪಿಸಿದುದಾಗಿತ್ತು.

ಮುಂದೆ ರಾಷ್ಟ್ರೀಯ ಪ್ರಜ್ಞೆ ಬೆಳೆದಂತೆ ಪ್ರಾಂತ್ಯ ರಚನೆಯ ಕುರಿತ ಧ್ವನಿಯು ಮೊಳಗತೊಡಗಿತು. ಸ್ವಾತಂತ್ರ್ಯದ ಬೆನ್ನಲ್ಲೇ ಈ ಧ್ವನಿ ಪೂರ್ಣ ಸ್ವರೂಪವನ್ನು ಪಡೆಯಿತು. ಈ ಸಂದರ್ಭದಲ್ಲಿ ಪ್ರತ್ಯೇಕ ಭಾಷಾವಾರು ಪ್ರಾಂತ್ಯ ರಚನೆಗೆ ಪೂರಕವಾಗಿ ಎಲ್ಲಾ ಅಂಶಗಳು ತುಳುವರ ಪರವಾಗಿತ್ತು ಎಂಬುದು ನಿರ್ವಿವಾದ, ಪ್ರತ್ಯೇಕ ತುಳು ರಾಜ್ಯದ ಕಲ್ಪನೆಯ ಕನಸು ಹೊತ್ತು ಧೀಮಂತಿಕೆಯಿಂದ ಹೋರಾಡಲನುವಾದ ಎಸ್. ಯು. ಪಣಿಯಾಡಿಯವರ ಸಾಹಸಗಾಥೆ ಜನಜನಿತ. ಆದರೆ ವಿಶಾಲ ಮನೋಭಾವದ ತುಳುವರು ತಮ್ಮ

ಆಶೋತ್ತರಗಳನ್ನು ಬದಿಗೊತ್ತಿ ಕರ್ನಾಟಕದ ಏಕೀಕರಣಕ್ಕಾಗಿ ದುಡಿದುದು ಅಷ್ಟೇ ಸತ್ಯ. ಒಂದರ್ಥದಲ್ಲಿ ತುಳುವರ ತ್ಯಾಗವೂ ಹೌದು.

ತುಳು ಅಕಾಡೆಮಿ ಹಮ್ಮಿಕೊಂಡ ತುಳು ಮಹನೀಯರಿಗೆ ಅಭಿನಂದನೆ ಹಾಗೂ ಉಪನ್ಯಾಸ ಮಾಲೆ ಒಂದು ಉತ್ತಮ ಯೋಜನೆಯೇ ಸರಿ. ಈ ಯೋಜನೆಯ ಅಡಿಯಲ್ಲಿ 'ಕರ್ನಾಟಕದ ಏಕೀಕರಣದ ಚಳವಳಿ - ತುಳುವರ ಕೊಡುಗೆ' ಎಂಬ ವಿಚಾರದ ಮೇಲೆ ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವ ಆಚರಣೆಯ ಈ ಸುಸಂದರ್ಭದಲ್ಲಿ ಉಪನ್ಯಾಸ ಒಂದನ್ನು ನೀಡಲು ಅಕಾಡೆಮಿ ಅವಕಾಶ ನೀಡಿತ್ತು. ಮುಂದೆ ಈ ಉಪನ್ಯಾಸವನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಭದ್ರಾವತಿ, ಮುಂಬಾಯಿ ಹಾಗೂ ಪೂನಾದಲ್ಲೂ ಏರ್ಪಡಿಸಿತ್ತು. ಅನಂತರ ಅಕಾಡೆಮಿಯ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಸೀತಾರಾಮ್ ಕುಲಾಲರು ಈ ನನ್ನೀ ಉಪನ್ಯಾಸವನ್ನು ಒಂದು ಕಿರು ಗ್ರಂಥ ರೂಪದಲ್ಲಿ ಅಚ್ಚುಹಾಕುವ ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಇದಕ್ಕೆ ನಾನು ಒಪ್ಪಿಕೊಂಡೆನಾದರೂ ನನ್ನ ವೈಯಕ್ತಿಕ ಸಮಸ್ಯೆ, ಒತ್ತಡಗಳಿಂದಾಗಿ ಸಕಾಲದಲ್ಲಿ ಸ್ಪಂದಿಸಲು ಸಾಧ್ಯವಾಗಲಿಲ್ಲ ಎಂಬ ನೋವು ನನಗಿದೆ. ಇದೊಂದು ಬಾರೀ ಪರಿಶ್ರಮದಿಂದ ಸಿದ್ಧವಾದ ಸಂಶೋದನಾ ಕೃತಿಯಲ್ಲ. ವಿಷಯ ಸಾಮಾನ್ಯ ಓದುಗರಿಗೂ ತಲುಪಬೇಕೆಂಬ ದೃಷ್ಟಿ ಇಟ್ಟುಕೊಂಡು ರಚಿತವಾದ ಒಂದು ಸರಳ ವಾದ ಕೃತಿ. ಇದು ಕರ್ನಾಟಕ ಏಕೀಕರಣಕ್ಕೆ ತುಳುವರ ಕೊಡುಗೆಯ ಕುರಿತು ಒಂದು ತೋರ್ಬೆರಳು ಅಷ್ಟೆ.

ಈ ಒಂದು ಕೃತಿ ರಚನೆಗೆ ಅವಕಾಶವನ್ನು ನೀಡಿ ಹೆಚ್ಚಿನ ಆಸಕ್ತಿ ವಹಿಸಿ ಪ್ರಕಟಿಸಿದ ಅಕಾಡೆಮಿ ಅಧ್ಯಕ್ಷರಿಗೆ, ಎಲ್ಲಾ ಸದಸ್ಯರಿಗೆ ಹಾಗೂ ಈ ಸಂಧರ್ಭದಲ್ಲಿ ಸಹಕರಿಸಿದ ಸಹಧರ್ಮಿಣಿ ಶ್ರೀಮತಿ ಆಶಾಲತಾ ಸುವರ್ಣ ಮತ್ತು ಕುಮಾರಿ ವಿಸ್ಮಿತಾರಿಗೂ ಕೃತಜ್ಞತೆಗಳು.

ಪಯಸ್ವಿನಿ
ಜೋಡುಮಾರ್ಗ
ಬಂಟ್ವಾಳ
15-01-2008

ಪ್ರೊ. ತುಕಾರಾಮ್ ಪೂಜಾರಿ

ಕರ್ನಾಟಕದ ಏಕೀಕರಣ ಚಳವಳಿ – ತುಳುನಾಡಿನ ಕೊಡುಗೆ

2000 ವರ್ಷಕ್ಕೂ ಮಿಕ್ಕ ಇತಿಹಾಸವಿರುವ ಕನ್ನಡ ಭಾಷೆ, ಕನ್ನಡ ಸಾಹಿತ್ಯ ಅನನ್ಯ ಮತ್ತು ಅನುಕರಣೀಯ. ಶಾತವಾಹನರಿಂದ ತೊಡಗಿ ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು ಮೊದಲಾದ ಹೆಸರಾಂತ ರಾಜ ಮನೆತನಗಳನ್ನು ದಾಟಿ ಮೈಸೂರಿನ ಅರಸರವೆಗೆ ಈ ಪರಂಪರೆ ಹರಡಿದೆ. ಚಿಕ್ಕಪುಟ್ಟ ಹಲವು ದೇಶೀಯ ಸಂಸ್ಥಾನಗಳಲ್ಲದೆ, ಮುಂಬಯಿ, ಮದ್ರಾಸು, ಹೈದರಾಬಾದು ಪ್ರದೇಶಗಳಲ್ಲಿಯೂ ಕನ್ನಡ ಭೂಭಾಗ ಹರಡಿಕೊಂಡಿತ್ತು. ಬ್ರಿಟಿಷರ ಆಳ್ವಿಕೆಯಲ್ಲಿ ಮತ್ತು ಭಾರತಕ್ಕೆ ಸ್ವಾತಂತ್ರ್ಯ ಲಭಿಸುವ ಮುನ್ನ ಕರ್ನಾಟಕವು 20 ಸಣ್ಣ ಪುಟ್ಟ ಆಡಳಿತಗಳಲ್ಲಿ ಹರಿದು ಹಂಚಿ ಹೋಗಿತ್ತು. ಹೀಗೆ ಹರಿದು ಹಂಚಿ ಹೋಗಿದ್ದ ಅನೇಕ ಆಡಳಿತಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದರು. ಮರಾಠಿ ರಾಜ್ಯಗಳ ಕನ್ನಡ ಸಂಸ್ಥಾನಗಳಲ್ಲಿ ಕನ್ನಡಿಗರ ಮೇಲೆ ಮರಾಠಿಯನ್ನು ಬಲವಂತವಾಗಿ ಹೇರಲಾಯಿತು. ಹೈದರಾಬಾದ ಕರ್ನಾಟಕದಲ್ಲಿ ಕನ್ನಡಿಗರು ಉರ್ದುವನ್ನು ಕಲಿಯಬೇಕಾಯಿತು. ಬ್ರಿಟಿಷರ ಒಡೆದು ಆಳುವ ನೀತಿಯಿಂದಾಗಿ ಕನ್ನಡಿಗರು ಪರಕೀಯರಂತೆ ಬದುಕಬೇಕಾಯಿತು. ಬೇರೊಂದು ಭಾಷೆ, ಸಂಸ್ಕೃತಿಯನ್ನು ಬಲವಂತವಾಗಿ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಇತ್ತು. ಇದು ಕನ್ನಡಿಗರ ಹೃದಯವನ್ನು ಘಾಸಿಗೊಳಿಸಿತು. ಈ ಕಾರಣಗಳಿಂದ ಕರ್ನಾಟಕದ ಪ್ರಗತಿ ಕುಂಠಿತವಾಗಿತ್ತು. ಆದ್ದರಿಂದ ಕನ್ನಡ ಮಾತನಾಡುವ ಜನರೆಲ್ಲರೂ ಒಂದೇ ಆಡಳಿತಕ್ಕೆ ಬರಬೇಕೆಂದು ಸಮಸ್ತ ಕನ್ನಡಿಗರ ಆಶಯವಾಗಿತ್ತು.

ಅಲ್ಲದೆ ಬ್ರಿಟಿಷರು ಮಾಡಿದಂತ ಪ್ರಾಂತೀಕರಣವು ಯಾವುದೇ ವ್ಯವಸ್ಥೆಗೆ ಒಳಪಟ್ಟಿರಲಿಲ್ಲ. ಅದಕ್ಕೆ ಭೌಗೋಳಿಕವಾದ, ಜನಾಂಗೀಯವಾದ ಅಥವಾ ಭಾಷಿಕವಾದ ತತ್ವದ ಆಧಾರವಿರಲಿಲ್ಲ. ಕೇವಲ ಆಡಳಿತಾತ್ಮಕವಾದ ಅನುಕೂಲಕ್ಕಾಗಿ ಹಾಗೂ ತಮ್ಮ ಆರ್ಥಿಕ ಹಾಗೂ ರಕ್ಷಣೆಯ ಕಾರಣಗಳಿಂದಾಗಿ ಈ ರೀತಿ ಮಾಡಲಾಗಿತ್ತೆನ್ನಬಹುದು.

ರಾಜ್ಯವೆನ್ನುವುದು ಅನೇಕ ಭೌತಿಕ ಸಂಸ್ಕೃತಿ, ಅಭೌತಿಕ ಸಂಸ್ಕೃತಿಗಳ ಮಹಾ ಸಂಗಮ. ಹೀಗಾಗಿ ಒಂದೇ ರಾಜಕೀಯ ಆಡಳಿತೆಯಡಿ ಜನಸಾಮಾನ್ಯರ ಆಡಳಿತೆಯನ್ನು, ಶಿಕ್ಷಣ ಸಂಸ್ಕೃತಿಗಳನ್ನೂ ರೂಪಿಸುವಂತಿರಬೇಕು. 1898ರಲ್ಲಿ ಆಡಳಿತ ವಿಕೇಂದ್ರಿಕರಣಕ್ಕೆ ಸಂಬಂಧಿಸಿದಂತೆ ರಾಯಲ್ ಕಮೀಷನ್ ಎದುರು ಲೋಕಮಾನ್ಯ ತಿಲಕರು ಸಾಕ್ಷ್ಯ ನೀಡುತ್ತಾ ಪ್ರಾಂತ್ಯಗಳು ಕೇಂದ್ರಾಡಳಿತದ ಅಧೀನವಾಗಿರಬೇಕು. ಮತ್ತು ಭಾಷಿಕ ಹಾಗೂ ವಾಂಶಿಕ ಸಂಬಂಧಗಳನ್ನು ಗಣನೆಗೆ ತೆಗೆದುಕೊಂಡು ಪ್ರಾಂತ್ಯಗಳ ಪುನರ್ ರಚನೆಯಾಗುವುದು ಅವಶ್ಯಕವೆಂದು ಹೇಳಿದರು. ಬ್ರಿಟಿಷ್ ಸರಕಾರ ಯಾರ ಮನವಿ, ವಿರೋಧ ಮತ್ತು ಸಾಕ್ಷ್ಯಗಳನ್ನು ಗಮನಿಸದೆ 1905 ಆಗಸ್ಟ್ 16ರಂದು ಬಂಗಾಲವನ್ನು ವಿಭಜಿಸಿತು. ಆದರೆ 1912ರಲ್ಲಿ ಬಂಗಾಲ ವಿಭಜನೆ ರದ್ದಾಯಿತು. 1918ರ ಮೌಂಟ್‌ಫೋರ್ಡ್ ವರದಿಯು ಆವರೆಗಿನ ಬ್ರಿಟಿಷರ ಆಡಳಿತ ವ್ಯಾಪ್ತಿಯ ಭಾರತದ ಆಡಳಿತ ವಿಭಾಗಗಳು ಅಸಮರ್ಪಕ ಮತ್ತು ಜನತೆಯ ಹಿತವನ್ನನುಸರಿಸಿಲ್ಲ ಎಂದು ಸ್ಪಷ್ಟಪಡಿಸಿತು. ಭಾರತದಲ್ಲಿ ದ್ವಿರಾಜ್ಯ ಪದ್ಧತಿಯ ಬಗೆಗೆ ಅಧ್ಯಯನ ಮಾಡಿದ್ದ ಲಿಯೋನೆಲ್ ಕರ್ಟಿಸ್ ಅವರ ಅಭಿಪ್ರಾಯಗಳೂ ಮೌಂಟ್‌ಫೋರ್ಡ್ ವರದಿಯನ್ನು ಸಮರ್ಥಿಸುವಂತೆಯೇ ಇದ್ದವು. **"ಭಾಷೆ, ಜನಾಂಗ ಮತ್ತು ಧರ್ಮದ ಘಟಕಗಳೂ ಮುಖ್ಯವಾದ ಅಂಶಗಳೇ, ಹಾಗೂ ಭಾಷೆ ಎಲ್ಲಕ್ಕಿಂತ ಮುಖ್ಯವಾದ ಅಂಶ".**

ಭಾರತದಲ್ಲಿ ಭಾರತೀಯರ ಹಕ್ಕು ಬಾಧ್ಯತೆಗಳಿಗಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ಆರಂಭವಾದಾಗಲೇ ಭಾಷಿಕ ಪ್ರಜ್ಞೆಯೂ ಮೂಡಿದ್ದೂ ಸಹಜವೇ ಆಗಿತ್ತು. ತಮ್ಮ ಅನುಕೂಲಕ್ಕಾಗಿ ಬ್ರಿಟಿಷ್ ಅಧಿಕಾರಿಗಳು ಜನತೆಗೆ ಪ್ರಿಯವಾದ ಮತ್ತು ಸಂವಹನಕ್ಕೆ ಅತ್ಯವಶ್ಯಕವಾದ ಭಾಷೆಯನ್ನು ತಮ್ಮ ಚದುರಂಗದ ಕಾಯಿಗಳನ್ನಾಗಿ ಮಾಡಿಕೊಂಡಾಗ ಜನ ಅದನ್ನು ವಿರೋಧಿಸಿದರು, ತಿರಸ್ಕರಿಸಿದರು. ತಾರತಮ್ಯವನ್ನು ಅನುಭವಿಸಿ ಕಂಗಾಲಾಗಿದ್ದ

ಕನ್ನಡಿಗರು ತಮಗೊಂದು ಪ್ರತ್ಯೇಕವಾದ ಪ್ರಾಂತ್ಯ ಬೇಕೆಂದು ಕೇಳಲು ಅನುವಾಯಿತು. ಕರ್ನಾಟಕದ ಉತ್ತರ ಭಾಗಗಳಲ್ಲೂ ವಿಶೇಷವಾಗಿ ಮುಂಬಯಿ ಅಧಿಪತ್ಯಕ್ಕೆ ಸೇರಿದ ಭಾಗಗಳ ಜನತೆಗೆ ಕಳೆದುಹೋಗಿರುವ ತಮ್ಮ ಭಾಷಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಅರಿವಾಯಿತು. ಸರ್. ವಾಲ್ಟನ್ ಎಲಿಯಟ್, ರಸೆಲ್, ವಿರೂಪಾಕ್ಷ ಹೂಲಿ, ಡೆಪ್ಯೂಟಿ ಚೆನ್ನಬಸಪ್ಪ ಮುಂತಾದ ಅಧಿಕಾರಿಗಳ ಪ್ರಯತ್ನದಿಂದಾಗಿ ಮರೆಯಾಗುತ್ತಿದ್ದ ಕನ್ನಡ ಶಿಕ್ಷಣ ಜಾಗೃತಗೊಂಡಿತು. ಅವರು ಪಟ್ಟು ಹಿಡಿದಿದ್ದರಿಂದಲೇ ಕನ್ನಡ ಶಾಲೆಗಳು ಆರಂಭವಾದವು.

ದೇಶದಲ್ಲಿ ಕಂಡುಬಂದ ಸಾಂಸ್ಕೃತಿಕ ಪುನರುಜ್ಜೀವನದ ಫಲವಾಗಿ ಪ್ರಾಂತೀಯ ಭಾಷೆಗಳ ಬೆಳವಣಿಗೆಗೆ ಪ್ರೋತ್ಸಾಹ ದೊರಕಿತಲ್ಲದೆ, ಸಾಂಸ್ಕೃತಿಕವಾದ ಅಖಂಡತೆಯ ಬಗ್ಗೆಯೂ ಒತ್ತು ನೀಡಿತು. ತಿಲಕ್ ಮತ್ತು ಗಾಂಧೀಜಿಯವರು ರಾಷ್ಟ್ರ ಪ್ರಜ್ಞೆಯ ಉದಯದಲ್ಲೂ ದೇಶೀಯ ಭಾಷೆಗಳ ಪ್ರಾಮುಖ್ಯತೆಯನ್ನು ಮನಗಂಡರು. ಭಾರತ ರಾಷ್ಟ್ರೀಯ ಕಾಂಗ್ರೆಸ್ 1920ರ ತನ್ನ ನಾಗಪುರ ಅಧಿವೇಶನದಲ್ಲಿ ಭಾಷಾವಾರು ಆಧಾರದ ಮೇಲೆ ಪ್ರಾಂತೀಯ ಸಮಿತಿಗಳನ್ನು ರಚಿಸಲು ತೀರ್ಮಾನಿಸಿತು. ಮೋತಿಲಾಲ್ ನೆಹರೂ ಸಮಿತಿಯೂ ಈ ಪ್ರಶ್ನೆಯನ್ನು ಪರಿಗಣಿಸಿತಲ್ಲದೆ ಭಾಷೀಯ ಅಂಶಕ್ಕೆ ಪ್ರಥಮ ಆದ್ಯತೆಯನ್ನು ನೀಡಿತು.

ಹತ್ತೊಂಬತ್ತನೇ ಶತಮಾನಾಂತ್ಯದ ವೇಳೆಗೆ ರಾಷ್ಟ್ರೀಯ ಪ್ರಜ್ಞೆ ಬೆಳೆದಂತೆ ಬ್ರಿಟಿಷ್ ಧೋರಣೆಗಳಿಗೆ ಅತೀವ ವಿರೋಧ ಬೆಳೆಯತೊಡಗಿತು. ಇದರೊಂದಿಗೆ ಭಾಷಾವಾರು ಪ್ರಾಂತ್ಯದ ರಚನೆಯ ಕುರಿತು ಚಳುವಳಿಯು ಹೊಸರೂಪ ಪಡೆಯತೊಡಗಿತು. 1858ರ ವೇಳೆಗೆ ಡೆಪ್ಯೂಟಿ ಚೆನ್ನ ಬಸಪ್ಪನವರು ಇಂತಹ ಚಳುವಳಿಯನ್ನು ಉತ್ತರ ಕರ್ನಾಟಕದಲ್ಲಿ ಪ್ರಾರಂಭಿಸಿದರು. ಪರೋಕ್ಷವಾಗಿ ಬ್ರಿಟಿಷ್ ಆಡಳಿತ ಭಾರತೀಯರಿಗೆ ವರವೇ ಸರಿ. ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆ ತೀವ್ರವಾಗಿ ಬೆಳೆಯುವಲ್ಲಿ ಅವರೇ ಕಾರಣೀಭೂತರೆನ್ನಲು ಅಡ್ಡಿಯಿಲ್ಲ. ೧೮೫೩ರಲ್ಲೇ ಭಾಷಾವಾರು ಪ್ರಾಂತ್ಯ ರಚನೆಯ ಸೂಚನೆಯನ್ನು ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ನೀಡಿದವನೇ ಸಂಸದ ಜಾನ್ ಬ್ರೈಟ್. ಆದರೆ ಇದು ವ್ಯರ್ಥ ಪ್ರಯತ್ನವಾಗಿದ್ದರೂ ಮುಂದೆ ಈ ತೆರನಾದ ಚಳುವಳಿ 1874-76 ಸುಮಾರಿಗೆ ಬಂಗಾಳ, ಅಸ್ಸಾಂ ಮತ್ತು ಒರಿಸ್ಸಾದಲ್ಲಿ ಪ್ರಾರಂಭವಾಗಿ, ಇದರಿಂದ ಕನ್ನಡಿಗರಿಗೂ ಪ್ರೇರಣೆ ದೊರೆಯಿತು.

ಕರ್ನಾಟಕ ವಿದ್ಯಾವರ್ಧಕ ಸಂಘ (1890)

ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಧಾರವಾಡದಲ್ಲಿ ರಾ.ಹಾ. ದೇಶಪಾಂಡೆಯವರು ಸ್ಥಾಪಿಸಿದರು. ಕನ್ನಡಿಗರು ತಮ್ಮ ಸಂಸ್ಕೃತಿಯ ಬಗ್ಗೆ ಅಭಿರುಚಿಯನ್ನು ತಾಳುವಂತೆ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ಸಂಘ ಸ್ಥಾಪನೆಯಾಯಿತು. ಕನ್ನಡ ಭಾಷೆ ಮತ್ತು ಕಲೆಯ ಅಭಿವೃದ್ಧಿ ಹಾಗೂ ಕರ್ನಾಟಕದ ಸ್ವಯತ್ತೆ ಪಡೆಯುವಲ್ಲಿ ಈ ಸಂಸ್ಥೆಯ ಹೋರಾಟದ ಪಾತ್ರ ಪ್ರಮುಖವಾದುದು. ಬೆನಗಲ್ ರಾಮರಾಯರು, ರಾ.ಹಾ.ದೇಶಪಾಂಡೆಯವರು, ಅಲೂರು ವೆಂಕಟರಾಯರು ಈ ಮುಖೇನ ಕರ್ನಾಟಕದ ಏಕೀಕರಣ ಕಹಳೆಯನ್ನು ಊದಿದರು. ಪ್ರತಿಭಾವಂತ ಬರಹಗಾರರು, ಚಿಂತಕರು, ಪತ್ರಕೋದ್ಯಮಿಯು ಆದ ಬೆನಗಲ್ ರಾಮರಾಯರು ಕನ್ನಡದ ಸುವಾಸಿನಿ ಮಾಸ ಪತ್ರಿಕೆಯಲ್ಲಿ ಕನ್ನಡ ನಾಡು ನುಡಿ ಕುರಿತು ಲೇಖನ ಹಾಗೂ ಸಂಪಾದಕೀಯ ಬರೆಯ ತೊಡಗಿದರು.

ವಾಗ್ಭೂಷಣವೆಂಬ ನಿಯತಕಾಲಿಕೆಯನ್ನು ಸಂಘ ಪ್ರಕಟಿಸಿತು. ಈ ಪತ್ರಿಕೆಯು ಭಾಷಾವಾರು ಪ್ರಾಂತ್ಯ ರಚನೆಯ ಕುರಿತು ಚರ್ಚಿಸಲು ಮುಂದೆ ವೇದಿಕೆಯಾಗಿ ಪರಿಣಮಿಸಿತು. ಭಾಷಾವಾರು ಪ್ರಾಂತ್ಯ ರಚನೆಯ ಚಳುವಳಿ ತೀವ್ರಗೊಳ್ಳುವಲ್ಲಿ 1905 ಬಂಗಾಳ ವಿಭಜನೆ ಮಹತ್ತರ ಪಾತ್ರ ವಹಿಸಿದುದೇನೋ ನಿಜ. ಆದರೆ 1903 ಸುಮಾರಿಗೆ ಕರ್ನಾಟಕದ ಏಕೀಕರಣ ಕುರಿತಂತೆ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಹಲವು ಸಭೆಗಳು ನಡೆದಿದ್ದು ವೆಂಕಟರಾಯರು ಮದರಾಸು ಹಾಗೂ ಉತ್ತರ ಕರ್ನಾಟಕದ ಕನ್ನಡಿಗರನ್ನು ಏಕೀಕರಣಗೊಳಿಸುವ ಬಗ್ಗೆ ಪ್ರಸ್ತಾಪ ಮಾಡಿದರು. ಬೆನೆಗಲ್ ರಾಮರಾಯರು ಧಾರವಾಡದಲ್ಲಿ ಈ ಕುರಿತಂತೆ ಸ್ಫೂರ್ತಿದಾಯಕ ಭಾಷಣ ಮಾಡುವುದರೊಂದಿಗೆ ಸುದ್ಧಿಯಾದರು. ಕ್ರಮೇಣ ಸಂಘದ ಚಟುವಟಿಕೆ ಕ್ಷೀಣಿಸಲು ಮುಂದೆ ಆಲೂರು ವೆಂಕಟರಾಯರೇ ಇದರ ಜವಾಬ್ದಾರಿ ಹೊರಬೇಕಾಯಿತು. ವಾಗ್ಭೂಷಣದ ಸಂಪಾದಕತ್ವವೂ ಅವರ ಪಾಲಿಗೆ ಬಂತು. ತಮ್ಮ ಪರಂಪರೆಯ ಬಗ್ಗೆ ಕನ್ನಡಿಗರಲ್ಲಿ ಅಭಿಮಾನ ತುಂಬಿ ಅವರಲ್ಲಿ ಪ್ರಜ್ಞೆ ಮೂಡಿಸುವುದು ಅವರ ಮುಂದಿದ್ದ ಒಂದು ದೊಡ್ಡ ಸವಾಲೇ ಸರಿ.

ಹಂಪಿ ಹಾಗೂ ಆನೆಗೊಂದಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆ ಅವರಲ್ಲಿ ಅಭಿಮಾನ ಮೂಡಿಸಿ ಕರ್ನಾಟಕದ ಇತರ ಇಂತಹ

ನಿವೇಶನಗಳಿಗೆ ಭೇಟಿನೀಡಲು ಪ್ರೇರಣೆಯಾಯಿತು. ಪರಿಣಾಮವಾಗಿ '**ಕರ್ನಾಟಕ ಗತ ವೈಭವ**'ದ ರಚನೆಗೆ ನಾಂದಿಯಾಯಿತು. ದೇಶಾಭಿಮಾನವನ್ನು ಹುಟ್ಟಿಸುವಲ್ಲಿ ಹಲವು ಮಂದಿ ಕವಿಗಳು, ಸಾಹಿತಿಗಳು ರಚಿಸಿದ ದೇಶಭಕ್ತಿಗೀತೆಗಳು, ಸಾಹಿತ್ಯಗಳು ಪ್ರಮುಖ ಪಾತ್ರ ವಹಿಸಿವೆ. ಅದರಲ್ಲೂ ಹುಯಿಲಗೋಳ ನಾರಾಯಣರಾಯರು ಬರೆದ **ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು** ಕನ್ನಡಿಗರ ಹೃದಯ ಕದವನ್ನು ತಟ್ಟಿತು.

ಕನ್ನಡಿಗರಲ್ಲಿ ಇತಿಹಾಸ ಹಾಗೂ ಐತಿಹಾಸಿಕ ಪ್ರಜ್ಞೆ ಮೂಡಿಸುವಲ್ಲಿ ಆಲೂರು ವೆಂಕಟರಾಯರು ತೆಗೆದುಕೊಂಡ ಶ್ರಮ ಅನನ್ಯವಾದುದು. 1904 ರಲ್ಲಿ "ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ" ಯನ್ನು ಸ್ಥಾಪಿಸಿ ಮಂಡಳಿಯ ನಿಯತಕಾಲಿಕೆಯಾದ "ಪ್ರಾಚೀನ ಇತಿಹಾಸ"ದ ಮೂಲಕ ಐತಿಹಾಸಿಕ ಮಹತ್ವವುಳ್ಳ ಅನೇಕ ಸ್ಥಳಗಳ ಬಗ್ಗೆ ಲೇಖನಗಳನ್ನು ಬರೆದು ಪ್ರಕಟಿಸಿದರು. ಹಲವು ಉತ್ಖನನ ಕಾರ್ಯಗಳನ್ನು ಕೈಗೊಂಡು ಪುರಾತತ್ವ ಇಲಾಖೆಯ ಈ ಕಾರ್ಯದಲ್ಲಿ ಕೈ ಜೋಡಿಸಿದರೆನ್ನಬಹುದು.

ಕನ್ನಡ ಸಾಹಿತ್ಯ ಪರಿಷತ್ತು :

1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡುದುದು ಏಕೀಕರಣ ಇತಿಹಾಸದ ಒಂದು ಮೈಲಿಗಲ್ಲು. ಮೈಸೂರಿನ ಮಹಾರಾಜರ ಕೃಪಾಶ್ರಯಲ್ಲಿ ನಡೆದ ಮೊದಲ ಸಮ್ಮೇಳನ ನಿಜಕ್ಕೂ ಒಂದು ಮಹತ್ವದ ವಿಚಾರ. ಕನ್ನಡದ ಕಲಿಗಳೆಲ್ಲಾ ಒಂದೆಡೆ ಸೇರಿ ಮೊದಲ ಬಾರಿಗೆ ಕರ್ನಾಟಕದ ಏಕೀಕರಣದ ಕುರಿತು ಚರ್ಚಿಸಲು ಅವಕಾಶವಾಯಿತು. ಏಕೀಕರಣದ ಉದ್ದೇಶವಿರಿಸಿಕೊಂಡು ಜನ್ಮ ತಾಳಿದ ಮತ್ತೊಂದು ಮಹಾ ಸಂಸ್ಥೆ **ಕರ್ನಾಟಕ ಸಭಾ**. 1916 ರಲ್ಲಿ ಜನ್ಮ ತಾಳಿದ ಇದರ ಆದ್ಯ ಪ್ರವರ್ತಕರಲ್ಲಿಮೊದಲಿಗೆ ಕೇಳಿ ಬರುವ ಹೆಸರು ಆಲೂರ ವೆಂಕಟರಾಯರದ್ದೇ.

ಕಾಂಗ್ರೆಸ್ ಮತ್ತು ಭಾಷಾವಾರು ಪ್ರಾಂತ್ಯ ರಚನೆ

ನಾಗಪುರ ಅಧಿವೇಶನ

ಸಾಹಿತ್ಯದ ಮೂಲಕ ಕನ್ನಡ ಪ್ರಜ್ಞೆಯನ್ನು ಬೆಳೆಸಲು ಪ್ರಾರಂಭವಾದ ಚಳುವಳಿಯು ಏಕೀಕರಣದ ಸಮಸ್ಯೆಗೆ ಈಗ ರಾಜಕೀಯ ಪರಿಹಾರವನ್ನು ಕಂಡುಕೊಳ್ಳುವ ಕಾಲ ಸನ್ನಿಹಿತವಾಯಿತು. ಅಧಿಕಾರಿ ವರ್ಗಕ್ಕೆ ನೆನಪೋಲೆ ಹಾಗೂ ಮನವಿ ಪತ್ರಗಳನ್ನು

ಅರ್ಪಿಸುವುದು ನಿತ್ಯದ ಕೆಲಸವಾಯಿತು. ಕರ್ನಾಟಕದ ಹೋಮ್ ರೂಲ್ ಲೀಗ್‌ನ ಘಟಕ ಇದಕ್ಕೆ ಮತ್ತಷ್ಟು ಹೊಸ ಚೈತನ್ಯವನ್ನು ತುಂಬಿತು. ಈ ಸಂದರ್ಭದಲ್ಲಿ ಆಲೂರು ವೆಂಕಟರಾಯರ ನೇತೃತ್ವದ ತಂಡ ಕೈಗೊಂಡ ಪ್ರಚಾರ ಪ್ರವಾಸ ಸಾರ್ವಜನಿಕರಲ್ಲಿ ಹೊಸ ಪ್ರಜ್ಞೆ ಮೂಡಿಸುವಲ್ಲಿ ಯಶಸ್ವಿಯಾಯಿತು. ಪರಿಣಾಮವಾಗಿ ಕರ್ನಾಟಕದ ಏಕೀಕರಣಕ್ಕಾಗಿ ಸರ್. ಮೊಂಟೆಗ್ಯೂ ಅವರಿಗೆ ಬೇರೆ ಬೇರೆ ಭಾಗಗಳಿಂದ ಬಂದ ನೆನಪೋಲೆಗಳನ್ನು ಅರ್ಪಿಸಲಾಯಿತು. 1920ರಲ್ಲಿ ಮಾಜಿ ದಿವಾನರಾದ ವಿ.ವಿ.ಮಾಧವರಾವ್ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಪ್ರಾಂತೀಯ ಸಮ್ಮೇಳನವನ್ನು ಧಾರವಾಡದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ನೆಲವನ್ನು ಒಂದುಗೂಡಿಸುವ ಹಾಗೂ ಪ್ರಾಂತ್ಯ ರಚನೆ ಚಳುವಳಿಯಲ್ಲಿ ಎಲ್ಲರೂ ಒಗ್ಗೂಡಬೇಕು ಎಂದು ಪ್ರೇಕ್ಷಕ ವರ್ಗವನ್ನು ಆಗ್ರಹಪಡಿಸಿದರು. ಮುಂದಿನ ಪ್ರಮುಖ ಬೆಳವಣಿಗೆಯೆಂದರೆ ಭಾಷಾವಾರು ರಾಜ್ಯಗಳ ಪರವಾಗಿದ್ದ ರಾಷ್ಟ್ರೀಯ ಕಾಂಗ್ರೆಸ್ ಈ ಬೇಡಿಕೆಯನ್ನುಮನ್ನಿಸಿತು. ಹಾಗಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಸ್ತಿತ್ವಕ್ಕೆ ಬರುವಂತಾಯಿತು. ಅದರ ಕೇಂದ್ರ ಕಛೇರಿ ಗದಗದಲ್ಲಿ ಸ್ಥಾಪನೆಗೊಂಡು ಈ ಕಾರ್ಯಕ್ಕೆ ಹೆಚ್ಚಿನ ಚಾಲನೆ ದೊರೆಯಲು ಅನನುಕೂಲವಾಯಿತು.

ಎರಡನೇ ರಾಜಕೀಯ ಸಮ್ಮೇಳನವು ಸರೋಜಿನಿ ನಾಯ್ಡುರವರ ಅಧ್ಯಕ್ಷತೆಯಲ್ಲಿ 1922ರಲ್ಲಿ ಮಂಗಳೂರಿನಲ್ಲಿ ನಡೆಯಿತು. ಅನಂತರ ಗೋಕರ್ಣದಲ್ಲಿ ಜರಗಿತು. ಧ್ವಜ ಸತ್ಯಾಗ್ರಹವು ಅತ್ಯಂತ ಯಶಸ್ವಿಯಾಯಿತು. ಬೆಳಗಾವಿ ಮೊದಲ ಸಮ್ಮೇಳನ ಸಂದರ್ಭದಲ್ಲಿ ಮನವಿಗೆ ಸ್ಪಂದಿಸಿ ಕನ್ನಡ ಮಾತನಾಡುವ ಜನರಿಗೊಂದು ಪ್ರತ್ಯೇಕ ಕಾಂಗ್ರೆಸ್ ವಲಯವನ್ನು ಸ್ಥಾಪಿಸುವ ನಿರ್ಧಾರ 1924ರ ಬೆಳಗಾಂನಲ್ಲಿ ತೆಗೆದುಕೊಳ್ಳಲಾಗಿ ಮುಂಬಯಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಚನೆಯಾಯಿತು.

ಕನ್ನಡಿಗರಿರುವ ಕೊಡಗು, ಹೈದರಾಬಾದ್ ಕರ್ನಾಟಕ, ಕನ್ನಡ ನಾಡಿನ ದೇಶೀಯ ಸಂಸ್ಥಾನಗಳು ಅದರ ವ್ಯಾಪ್ತಿಗೆ ಒಳಪಟ್ಟವು. ಆದರೆ ಮೈಸೂರು ಸಂಸ್ಥಾನ ಇದರಲ್ಲಿ ಸೇರಲಿಲ್ಲ. 1921ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಕರ್ನಾಟಕ ರಾಜ್ಯದ ಬೇಡಿಕೆಯನ್ನು ಎ.ಬಿ. ಲಟ್ಟೆ ಮತ್ತು ಉಡುಪಿ ರಾಮರಾಯರು ಮಂಡಿಸಿದರು. ಆದರೆ ಬ್ರಿಟಿಷ್ ಸರಕಾರ ಇದಕ್ಕೆ ಯಾವುದೇ ಮಾನ್ಯತೆಯನ್ನು ನೀಡಲಿಲ್ಲ. 1929ರಲ್ಲಿ ಖ್ಯಾತ ಪತ್ರಕರ್ತರು ಆಗಿದ್ದ

ಬೆನೆಗಲ್ ಶಿವರಾಯರು ಮತ್ತೊಮ್ಮೆ ನಿರ್ಣಯ ಮಂಡಿಸಿದರು. ಈ ಸಂದರ್ಭದಲ್ಲಿ ಇದಕ್ಕೆ ಇವರ ಸದಸ್ಯರ ಅದ್ದೂರಿ ಬೆಂಬಲ ದೊರೆಯಿತು. ಕರ್ನಾಟಕ ರಾಜ್ಯದ ಏಕೀಕರಣಕ್ಕಾಗಿ "ಏಕೀಕರಣ ಪರಿಷತ್ತು" ತನ್ನ ಹೋರಾಟವನ್ನು ನಿರಂತರ ಮುಂದುವರಿಸಿತು. ಇಲ್ಲಿ ಯಾವುದೇ ತಾರತಮ್ಯವಿಲ್ಲದೆ ರಾಜಕಾರಣಿಗಳು, ಸಾಹಿತಿಗಳು ವಾಣಿಜ್ಯೋದ್ಯಮಿಗಳು ತಮ್ಮ ಪೂರ್ಣಬೆಂಬಲ ನೀಡಿದರು.

1924ರಲ್ಲಿ ನಡೆದ ಬೆಳಗಾವಿ ಅಧಿವೇಶನದ ಅತ್ಯಂತ ಮುಖ್ಯವಾದ ಫಲಿತಾಂಶವೆಂದರೆ ಮೊದಲನೇ ಕರ್ನಾಟಕ ಏಕೀಕರಣ ಸಮಾವೇಶವನ್ನು ನಡೆಸಿ ಕರ್ನಾಟಕ ಏಕೀಕರಣ ಸಭಾವನ್ನು ಸ್ಥಾಪಿಸಿದುದು. ಈ ಏಕೀಕರಣ ಸಭೆಯು ಮುಂದೆ ಶ್ಲಾಘನೀಯವಾದ ಕೆಲಸಗಳನ್ನು ಮಾಡಿತು.

ಮೋತಿಲಾಲ್ ನೆಹರೂ ಸಮಿತಿ 1928

ಕರ್ನಾಟಕದ ಏಕೀಕರಣ ಚಳುವಳಿಯು ಈಗ ಹೊಸ ಹುರುಪಿನಿಂದ ಹೊಸ ಭರವಸೆಯಿಂದ ಮುಂದುವರಿಯುತ್ತಿದ್ದರೆ, 1928ರಲ್ಲಿ ಸರ್ವ ಪಕ್ಷಗಳ ಸಮ್ಮೇಳನ ಮೋತಿಲಾಲ್ ನೆಹರೂ ಸಮಿತಿಯನ್ನು ನೇಮಕ ಮಾಡುವ ವೇಳೆಗೆ ಸುಸಂಘಟಿತವಾಗಿದ್ದು ವಿಶಾಲವಾದ ತಳಹದಿಯನ್ನು ಹೊಂದಿತ್ತು.

ಈ ಸಮಿತಿಯಲ್ಲಿ ಸುಭಾಷ್ ಚಂದ್ರಾ ಬೋಸ್, ಸರ್. ತೇಜ್ ಬಹದ್ದೂರ್ ಶಾಹಿದ್ ಖುರೇಷಿ, ಸರ್ ಆಲಿ ಇಮಾವತ್ ಮೊದಲಾದವರು ಇದರ ಸದಸ್ಯರಾಗಿದ್ದರು. ಕರ್ನಾಟಕ ಏಕೀಕರಣ ಸಂಘ ಹಾಗೂ ಪ್ರದೇಶ ಕಾಂಗ್ರೆಸ್ ಸಮಿತಿಗಳೆರಡು ಕೂಡಿ ಈ ಸಮಿತಿ ಮುಂದೆ ತಮ್ಮ ಬೇಡಿಕೆಯನ್ನಿಟ್ಟವು. ಆ ಸಮಿತಿ ಕರ್ನಾಟಕದ ಏಕೀಕರಣವನ್ನು ಸಮ್ಮತಿಸಿತು. ಅನಂತರ ಬ್ರಿಟಿಷ್ ಸರಕಾರಕ್ಕೆ ಬೇಡಿಕೆ ಸಲ್ಲಿಸಲು ಮುಂದಿನ ಕಾಂಗ್ರೆಸ್ ಅಧಿವೇಶನದಲ್ಲಿ ಅದನ್ನು ಅಂಗೀಕರಿಸಿತು.

1931ರಲ್ಲಿ ನಡೆದ ದುಂಡು ಮೇಜಿನ ಸಮ್ಮೇಳನದಲ್ಲಿ ಬೆನಗಲ್ ರಾಮರಾಯರು, ಮಿರ್ಜಾ ಇಸ್ಮಾಯಿಲ್ ಮುಂತಾದವರು ಕರ್ನಾಟಕ ಏಕೀಕರಣದ ಬಗ್ಗೆ ಸಾಕಷ್ಟು ಚರ್ಚಿಸಿ ಬ್ರಿಟಿಷ್ ಸರಕಾರದ ಗಮನ ಸೆಳೆದರು. ಅನಂತರದ ದಿನಗಳಲ್ಲಿ ಕರ್ನಾಟಕದ ಏಕೀಕರಣ

ಯತ್ನದಲ್ಲಿ ಪ್ರವಾಸ ಕೈಗೊಂಡು ಜನಜಾಗೃತಿ ಮೂಡಿಸುವಲ್ಲಿ ಪ್ರಮುಖರಾದವರೆಂದರೆ ಬೇಂದ್ರೆ, ಶಂಭಾ ಜೋಷಿ, ಬೆಟಗೇರಿ ಕೃಷ್ಣ ಶರ್ಮ ಶ್ರೀ ರಂಗ, ವಿನಾಯಕ ಗೋಕಾಕ್, ಪಂಜೆ ಮಂಗೇಶರಾಯರು, ಗೋವಿಂದ ಪೈಗಳು, ಶಿವರಾಮ ಕಾರಂತರು, ಡಿ.ವಿ. ಗುಂಡಪ್ಪ ಕುವೆಂಪು, ಗೋರೂರು ರಾಮಸ್ವಾಮಿ ಅಯ್ಯಂಗಾರ್ ಮುಂತಾದವರು. ಭಾರತಕ್ಕೆ ಬಂದ ಸೈಮನ್ ಕಮೀಷನ್ ಕರ್ನಾಟಕದ ಏಕೀಕರಣ ನಿರ್ಮಾಣದ ಬೇಡಿಕೆಯನ್ನು ಮನ್ನಿಸುವುದಾಗಿ ಭರವಸೆ ನೀಡಿತು. ಬ್ರಿಟಿಷ್ ಭಾರತ ಪ್ರಾಂತ್ಯಗಳಲ್ಲಿ ಏಕೀಕರಣಕ್ಕಾಗಿ ಚಳುವಳಿ ತೀವ್ರವಾಗುತ್ತಿದ್ದರೆ, ದೇಶೀಯ ಸಂಸ್ಥಾನಗಳಲ್ಲಿನ ಪ್ರತಿಕ್ರಿಯೆ ತೀರಾ ನಿರಾಶದಾಯಕವಾಗಿತ್ತು. ಮೈಸೂರಿನ ಮನವೊಲಿಸಲು ಸತತ ಪ್ರಯತ್ನಗಳಾದುವಾದರೂ ಸುಲಭವಾಗಿ ಅವರು ಚಳುವಳಿ ಕಡೆ ವಾಲಲಿಲ್ಲವೆಂಬುದು ಗಮನಿಸಬೇಕಾದ ಸಂಗತಿ. ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮೈಸೂರು ಸಂಸ್ಥಾನ ಹಾಗೂ ಇತರ ಸಂಸ್ಥಾನಗಳು ಬಹಳಷ್ಟು ಮುಂದುವರಿದಿದ್ದು ಎಲ್ಲಾ ಕ್ಷೇತ್ರದಲ್ಲಿ ಬಹಳಷ್ಟು ಹಿಂದುಳಿದಿದ್ದ ಬ್ರಿಟಿಷ್ ಪ್ರಾಂತ್ಯದೊಂದಿಗೆ ಸೇರ್ಪಡೆಗೊಂಡರೆ ಸಮಸ್ಯೆಯೇ ಹೊರತು ತಮಗೆ ಹೆಚ್ಚಿನ ಲಾಭಾವೇನು ಇಲ್ಲವೆಂಬ ಉಪೇಕ್ಷೆ ಏಕೀಕರಣ ಕಾರ್ಯಕ್ಕೆ ಒಂದು ತೊಡಕು ಅಥವಾ ಸವಾಲೇ ಆಯಿತೆನ್ನಬಹುದು. ಅಲ್ಲದೆ ಸ್ವಾತಂತ್ರ್ಯ ಚಳುವಳಿಯು ಇಲ್ಲಿ ಆಳವಾಗಿ ಬೇರು ಬಿಟ್ಟಿರಲಿಲ್ಲ. ಆದರೆ ಸಾಹಿತಿಗಳು ಹಾಗೂ ಪತ್ರಿಕಾ ರಂಗ ಏಕೀಕರಣದ ಪರವಾಗಿದ್ದು ಕಂಡು ಬಂದಿತು. ಅಲ್ಲದೆ ಚಳವಳಿಗೆ ಪ್ರತಿಸ್ಪಂದಿಸದೆ ದೀರ್ಘಕಾಲದವರೆಗೆ ವಿಮುಖವಾಗಿರುವುದು ಕೂಡಾ ಮೈಸೂರಿನವರಿಗೆ ಸಾಧ್ಯವಾಗಲಿಲ್ಲ. 1937ರ ಕಲ್ಕತ್ತಾ ಅಧಿವೇಶನದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಭಾಷಾವಾರು ಪ್ರಾಂತ್ಯಗಳ ಪರವಾಗಿದ್ದು ಸ್ಪಷ್ಟವಾಗಿ ಗೋಚರಿಸಲಾರಂಭಿಸಿತು. ಈ ನಡುವೆ ಜವಾಬ್ದಾರಿ ಸರ್ಕಾರಕ್ಕಾಗಿ ಮೈಸೂರಿನವರ ಬೇಡಿಕೆ ಪರಾಕಾಷ್ಠೆ ಮುಟ್ಟಿತು. ಚಳವಳಿಯನ್ನು ಹತ್ತಿಕ್ಕಲು ದಮನಕಾರಿ ಕ್ರಮಗಳನ್ನು ಕೈಗೊಳ್ಳಲು ಸರಕಾರ ನಿರ್ಧರಿಸಿತು. ಆದರೆ ಬ್ರಿಟಿಷ್ ಕರ್ನಾಟಕ ಅಥವಾ ದೇಶೀಯ ಸಂಸ್ಥಾನದ ಭಾಗಗಳಿಂದ ಕೇಳಿ ಬಂದ ಕೂಗಿಗೆ ಓಗೊಡಲು ಬ್ರಿಟಿಷರು ಸಿದ್ಧರಿರಲಿಲ್ಲ. ಅಲ್ಲದೆ ಎರಡನೇ ಮಹಾಯುದ್ಧ ಪ್ರಾರಂಭವಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸಚಿವ ಸಂಪುಟ ರಾಜೀನಾಮೆ ನೀಡಿತು. ಕ್ವಿಟ್ ಇಂಡಿಯಾ ಚಳುವಳಿಯ ಪ್ರಾರಂಭದೊದಿಗೆ ರಾಜಕೀಯ ಚಟುವಟಿಕೆ ಹೆಚ್ಚಿತು. ಆದರೂ ಏಕೀಕರಣದ ಚಳುವಳಿ ಹಿನ್ನೆಡೆ ಕೇವಲ

ತಾತ್ಕಾಲಿಕವಾದುದು. ಮುಖ್ಯಮಂತ್ರಿ ಬಿ.ಜಿ. ಖೇರ್ ಅವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ಹತ್ತನೇ ಏಕೀಕರಣದ ಸಮಾವೇಷ ನಡೆಯಿತು. ವಲ್ಲಭಬಾಯಿ ಪಟೇಲರು ಸಮಾವೇಶವನ್ನು ಉದ್ಘಾಟಿಸಿದರು. ಮುಂದೆ 1947 ರಲ್ಲಿ ದಾವಣಗೆರೆಯಲ್ಲಿ ಏಕೀಕರಣ ಸಮಾವೇಶ ನಡೆಯಿತು. ವಾಸ್ತವವಾಗಿ ಮೈಸೂರು ರಾಜ್ಯದಲ್ಲಿ ಮೊದಲ ಬಾರಿಗೆ ಸಮಾವೇಶವೊಂದನ್ನು ಆಯೋಜಿಸಲಾಗಿತ್ತು. ಆದಷ್ಟು ಶೀಘ್ರವಾಗಿ ಕರ್ನಾಟಕದ ಬೇಡಿಕೆಯನ್ನು ಈಡೇರಿಸಬೇಕೆಂದು ಸಮಾವೇಶದಲ್ಲಿ ಶಾಸನ ಮಂಡಳಿಯನ್ನು ಮನವಿ ಮಾಡಿಕೊಳ್ಳಲಾಯಿತು. ಈ ವಿಚಾರದ ಕುರಿತು ಹೆಚ್ಚುವರಿ ಕೆಲಸ ಕಾರ್ಯಗಳು ನಡೆಯಬೇಕಾಗಿದ್ದು ಇತ್ತ ಗಮನ ಸೆಳೆಯುವ ಸಲುವಾಗಿ ಎಂ. ಎ. ಪಾಟೀಲ್, ಎಸ್. ನಿಜಲಿಂಗಪ್ಪ ಹಾಗೂ ಕೆ.ಬಿ. ಜಿನರಾಜ ಹೆಗ್ಡೆ ಇವರನ್ನೊಳಗೊಂಡ ಮೂರು ಮಂದಿಯ ಸಮಿತಿಯನ್ನು ನೇಮಕ ಮಾಡಲಾಯಿತು. ಈಗ ಮೈಸೂರು ಪ್ರಾಂತ್ಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮೈಸೂರಿನಲ್ಲಿ ಜವಾಬ್ದಾರಿ ಸರಕಾರವನ್ನು ಹೊಂದಿದ ನಂತರವೇ ಅಖಂಡ ಕರ್ನಾಟಕದಲ್ಲಿ ಮೈಸೂರನ್ನು ಸೇರ್ಪಡೆ ಮಾಡಿಕೊಳ್ಳುವುದಾಗಿ ನಿರ್ಧರಿಸಲಾಯಿತು. ಈ ಕುರಿತಂತೆ ಪರ ವಿರೋಧ ಚರ್ಚೆಯಿಂದ ಬಹಳ ಗೊಂದಲವೇ ಉಂಟಾಗಿತ್ತು.

ಸ್ವಾತಂತ್ರ್ಯ ನಂತರ ರಾಜ್ಯಗಳ ಪುನರ್ ವಿಂಗಡನೆಯ ಬಗ್ಗೆ ವಿಷದವಾಗಿ ಚರ್ಚಿಸಿ ಶಿಫಾರಸ್ಸುಗಳೊಡನೆ ಒಂದು ವರದಿ ಸಲ್ಲಿಸಬೇಕೆಂದು 1948 ರಲ್ಲಿ ಧರ್ ಸಮಿತಿಯನ್ನು ನೇಮಿಸಲಾಯಿತು. ಆದರೆ ಈ ಸಮಿತಿ ಭಾಷಾವಾರು ಪ್ರಾಂತ್ಯಗಳ ರಚನೆ ರಾಷ್ಟ್ರದ ಐಕ್ಯತೆಗೆ ಭಂಗತರಬಹುದೆಂಬ ಶಂಕೆಯನ್ನು ವ್ಯಕ್ತಪಡಿಸಿತು. ಧರ್ ಸಮಿತಿಯ ವರದಿಯನ್ನು ವ್ಯಾಪಕವಾಗಿ ಖಂಡಿಸಲಾಯಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವರದಿಯನ್ನು ತಿರಸ್ಕರಿಸಿತು.

ವಿರೋಧ ತೀವ್ರ ಸ್ವರೂಪವನ್ನು ಪಡೆಯುತ್ತಿದಂತೆಯೇ ಸರಕಾರ ಈ ಸಮಸ್ಯೆಯನ್ನು ಪರಿಹರಿಸಲು ಜವಾಹರ್ ಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯನವರನ್ನು ಒಳಗೊಂಡ ಮೂರು ಜನರ ಸಮಿತಿಯನ್ನು ರಚಿಸಿತು. ಜೆ.ವಿ.ಪಿ. ಸಮಿತಿಯು ಭಾಷಿಕ ಆಧಾರದ ಮೇಲೆ ವಿಂಗಡಿಸುವುದರ ವಿರುದ್ಧ ಎಚ್ಚರಿಸಿತು. ಬೇರೆ ರಾಜ್ಯಗಳ ಬೇಡಿಕೆಗಳನ್ನು ತಿರಸ್ಕರಿಸಿ ಸಮಿತಿಯು ಆಂದ್ರದ ರಚನೆಯನ್ನು ಒಪ್ಪಿಕೊಂಡಿತು.

ಸಮಿತಿಯ ಸೂಚನೆಯು ಆಂಧ್ರಕ್ಕೆ ವಿನಃ ಉಳಿದ ಎಲ್ಲಾ ಪ್ರಾಂತ್ಯಗಳಿಗೂ ಅಸಮಾಧಾನವನ್ನು ತಂದಿತು. ಅಂತೂ ತನ್ನ ಚುನಾವನಾ ಪ್ರಣಾಳಿಕೆಯಲ್ಲಿ ಭಾಷಾವಾರು ಪ್ರಾಂತ್ಯದ ವಿಷಯವನ್ನು ಕಾಂಗ್ರೆಸ್ ವಿಶೇಷವಾಗಿ ಬಿಂಬಿಸಿತ್ತಾದರೂ ನಂತರದಲ್ಲಿ ಸ್ವತಂತ್ರ ಭಾರತದ ವಿವಿಧ ಸಮಸ್ಯೆಗಳ ಒತ್ತಡದಿಂದಾಗಿ ಈ ವಿಚಾರದ ಕುರಿತಂತೆ ಹೆಚ್ಚಿನ ಗಮನ ಕೊಡುವುದು ಅದರಿಂದ ಸಾಧ್ಯವಾಗದೇ ಹೋಯಿತು. ಮೈಸೂರಿನ ಒಂದು ವರ್ಗದ ಜನರಂತೂ ಈ ಹಿಂದೆ ತಿಳಿಸಿರುವಂತೆ ಏಕೀಕೃತ ಕರ್ನಾಟಕದ ಕಲ್ಪನೆಯಿಂದ ದೂರವೇ ಉಳಿದಿದ್ದರು ಎಂಬುವುದು ಅಷ್ಟೇ ಸತ್ಯ. ಈಗಾಗಲೇ ಮಾದರಿ ರಾಜ್ಯವೆಂದು ಹೆಸರು ಪಡೆದಿರುವ ಮೈಸೂರು ಎಲ್ಲಾ ರಂಗದಲ್ಲೂ ಬಹಳ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿತ್ತು. ಇತರ ಪ್ರದೇಶಗಳೊಂದಿಗೆ ಮೈಸೂರನ್ನು ವಿಲೀನಗೊಳಿಸುವುದರಿಂದ ಆರ್ಥಿಕವಾಗಿ ಮುಗ್ಗಟ್ಟು ಉಂಟಾಗಬಹುದೆಂಬ ಭೀತಿಯು ಹಲವರನ್ನು ಕಾಡುತಿತ್ತು. ಬೊಂಬಾಯಿ, ಮದರಾಸು ಹಾಗೂ ಹೈದರಾಬಾದ್ ಕರ್ನಾಟಕ ಪ್ರಾಂತ್ಯಗಳು ಹಾಗೂ ಅಲ್ಲಿನ ಜನರು ಹಿಂದುಳಿದವರಾಗಿದ್ದು, ಅಂತಹ ಪ್ರದೇಶಗಳೊಡನೆ ವಿಲೀನವಾಗುವುದರಿಂದ ಮೈಸೂರು ಒಂದು ದಶಕದ ಹಿನ್ನೆಡೆ ಸಾಧಿಸುವ ಪ್ರಮೇಯ ಉಂಟಾಗಬಹುದೆಂದು ದಿಗಿಲುಗೊಂಡಿದ್ದರು. ಮುಂದೆ ಪ್ರಸ್ತಾಪಿತ ರಾಜ್ಯದಲ್ಲಿ ಲಿಂಗಾಯುತರು ಮೇಲುಗೈ ಸಾಧಿಸುವರೆಂಬ ಮತ್ತೊಂದು ಭಯವು ಅವರಲ್ಲಿತ್ತು.

ಭಾಷಾವಾರು ಪ್ರಾಂತ್ಯ ರಚನೆಗೆ ಹೆಚ್ಚಿನ ಚಾಲನೆ ಸಿಕ್ಕಿದುದು 1953ರಲ್ಲಿ ಆಂಧ್ರದ ಪೊಟ್ಟಿ ಶ್ರೀ.ರಾಮುಲು ಪ್ರತ್ಯೇಕ ಆಂದ್ರ ರಚನೆಗಾಗಿ ಉಪವಾಸ ಕೈಗೊಂಡು ಮರಣ ಹೊಂದುವುರೊಂದಿಗೆ ಪರಿಣಾಮವಾಗಿ ಪ್ರತ್ಯೇಕ ಆಂದ್ರ ಪ್ರದೇಶ ಅಸ್ತಿತ್ವಕ್ಕೆ ಬಂದಿತು. 1953ರಲ್ಲಿ ಹೈದರಾಬಾದಿನ ನಾನಲ್ ನಗರ ಬಡಾವಣೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನವು ಆಂದ್ರ ರಚನೆಗೆ ಸಮ್ಮತಿಸಿತು. ಆದರೆ ಇತರ ಪ್ರಾಂತ್ಯ ರಚನೆಯ ಅಗತ್ಯವನ್ನು ಅಲ್ಲಗಲೆಯಿತು. ದೊಡ್ಡ ಮೇಟಿ ಅಂಧಾನಪ್ಪ, ಶಂಕರ ಗೌಡ ಪಟೇಲರು ಏಕೀಕರಣ ಸಾಧನೆಗಾಗಿ ತಮ್ಮ ಜೀವವನ್ನೇ ಮುಡಿಪಾಗಿಟ್ಟು ಅಮರಣಾಂತ ಉಪವಾಸ ಆರಂಭಿಸಿದರು.

ಈ ಬೆಳವಣಿಗೆಗಳ ಬಗ್ಗೆ ಕೇಂದ್ರವು ದಿವ್ಯ ನಿರ್ಲಕ್ಷ್ಯ ತಾಳಿದ ಪರಿಣಾಮವಾಗಿ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪನವರು 1953 ಎಪ್ರಿಲ್‌ನಲ್ಲಿ ನೆಹರೂರವರನ್ನು ಭೇಟಿಯಾದರು. ಇಲ್ಲಿ ನಡೆದ ಘಟನಾವಳಿಗಳ ಬಗ್ಗೆ ಪ್ರಧಾನಿಯವರ ಗಮನ ಸೆಳೆದ ನಾಯಕರು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುವುದರ ಬಗ್ಗೆಯೂ ಮನವರಿಕೆ ಮಾಡಿದುದರಿಂದ ಸಮಸ್ಯೆಗೆ ಶೀಘ್ರ ಪರಿಹಾರದ ಅಗತ್ಯತೆಯನ್ನು ಮನಗಂಡರು. ಪುನರ್ ವಿಂಗಡನೆಯ ಕುರಿತು ಚರ್ಚಿಸಲು ಒಂದು ಸಮಿತಿಯನ್ನು ರಚಿಸುವುದಾಗಿ ಭರವಸೆಯನ್ನು ನೀಡಿದರು. ಪರಿಣಾಮವಾಗಿ 1953 ಡಿಸೆಂಬರ್ 22ರಂದು ರಾಜ್ಯಗಳ ಪುನರ್ ರಚನಾ ಸಮಿತಿಯನ್ನು ನೇಮಕ ಮಾಡಲಾಯಿತು. ಪ್ರಾಂತ್ಯ ರಚನೆಯ ಸಮಸ್ಯೆಯನ್ನು “ವಸ್ತು ನಿಷ್ಠವಾಗಿ ಹಾಗೂ ನಿಷ್ಪಕ್ಷಪಾತವಾಗಿ” ಕೈಗೆತ್ತಿಕೊಳ್ಳುವ ಜವಾಬ್ದಾರಿ ಸಮಿತಿಯ ಮೇಲಿತ್ತು. ಫಜಲ್ ಆಲಿಯವರು ಅಧ್ಯಕ್ಷರಾಗಿರುವ ಈ ಸಮಿತಿಯಲ್ಲಿ ಹೃದಯನಾಥ್ ಕುಂಜ್ರು ಹಾಗೂ ಕೆ. ಎಂ. ಫಣಿಕರ್‌ರವರು ಸದಸ್ಯರಾಗಿದ್ದರು. ಸುದೀರ್ಘ ಅಧ್ಯಯನ ಹಾಗೂ ಪರಿಶೀಲನೆಯ ನಂತರ ಸಮಿತಿ ತನ್ನ ವರದಿ ಸಿದ್ಧಪಡಿಸಿತು.

ಈ ವರದಿಯ ಆದೇಶದಂತೆ ಕೆಲವೊಂದು ತಿದ್ದುಪಡಿಗಳೊಂದಿಗೆ ಏಕೀಕರಣಗೊಂಡ ವಿಶಾಲ ಮೈಸೂರು ರಾಜ್ಯ 1956 ನವಂಬರ್ 1ರಂದು ಅಸ್ತಿತ್ವಕ್ಕೆ ಬಂತು. ಆ ಮೂಲಕ ಕನ್ನಡಿಗರು ಒಂದು ರಾಜ್ಯದಲ್ಲಿ ಕೂಡಿಕೊಳ್ಳುವಂತಾದುದು ಎಲ್ಲರಿಗೂ ಸಂತಸ ತಂದ ವಿಚಾರವಾಗಿತ್ತು. ಆದರೆ ಮೈಸೂರು ಪ್ರಾಂತ್ಯದ ಜನತೆಯನ್ನು ಒಲೈಸಲೋ ಎಂಬಂತೆ ಏಕೀಕೃತ ಕರ್ನಾಟಕಕ್ಕೆ ಮೈಸೂರು ರಾಜ್ಯವೆಂದು ನಾಮಕರಣ ಮಾಡಿರುವುದಂತೂ ಕನ್ನಡ ಕುಲಪುರೋಹಿತರಾದ ಆಲೂರು ವೆಂಕಟರಾಯರಿಗೆ ಅಪಾರ ನೋವುಂಟು ಮಾಡಿತ್ತು. ಅದರ ಹೆಸರು ಇತ್ತೀಚಿನವರೆಗೂ ಮೈಸೂರು ರಾಜ್ಯ ಎಂದೇ ಇದ್ದಿತು. ಇಲ್ಲಿನ ಜನರ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಈ ನಾಡಿಗೆ ಕರ್ನಾಟಕ ಎಂಬ ನಾಮಕರಣದ ಕುರಿತಂತೆ ದೀರ್ಘವಾದ ವಾದ ವಿವಾದಗಳೇ ನಡೆದವು. 1956ರಲ್ಲೇ ಶ್ರೀ ನಿಜಲಿಂಗಪ್ಪನವರ ಮುಖ್ಯ ಮಂತ್ರಿತ್ವದಲ್ಲಿ ಆರಂಭವಾದ ಕರ್ನಾಟಕ ಎಂಬ ನಾಮಕರಣದ ಪ್ರಯತ್ನ ಶ್ರೀ ವೀರೇಂದ್ರ ಪಾಟೀಲರ ಶ್ರಮದಿಂದಾಗಿ, 1973ನೇ ನವೆಂಬರ ಒಂದರಂದು ಅಂದಿನ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಕಾಲದಲ್ಲಿ ನೆರವೇರಿತು.

ಏಕೀಕರಣ ಮತ್ತು ತುಳುವರು :

ಕರ್ನಾಟಕದ ಏಕೀಕರಣದ ಇತಿಹಾಸವು ಸ್ವಾತಂತ್ರ್ಯ ಹೋರಾಟದಷ್ಟೇ ಮಹತ್ವಪೂರ್ಣವೂ, ಸಾಹಸಮಯವೂ ಆಗಿದೆ. ಕನ್ನಡಿಗರ ನಿರಂತರವಾದ ಹೋರಾಟದ ಫಲವಾಗಿ ಈ ಕಾರ್ಯವು ಕೊನೆಗೂ ಫಲದಾಯಕವಾಗಿ ಪೂರ್ಣಗೊಂಡಿತು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕರ್ನಾಟಕ ಕೇವಲ ಕನ್ನಡಿಗರ ನಾಡೆಂದೇ ಹೇಳಲಾಗದು. ಇಲ್ಲಿ ಬೇರೆ ಬೇರೆ ಭಾಷೆಯ, ಸಂಸ್ಕೃತಿಯ, ಧರ್ಮದ ಜನರು ಸೇರಿದ್ದಾರೆ. ಮುಖ್ಯವಾಗಿ ತುಳುವರು, ಕೊಡವರು, ಕನ್ನಡಾಂಬೆಯ ಸುಪುತ್ರರೇ ಸರಿ. ಆದರೆ ಅವರ ಮಾತೃ ಭಾಷೆ ಕನ್ನಡವಲ್ಲ. ತುಳುವರಿಗಂತೂ ಹೆತ್ತಬ್ಬೆ ತುಳುವಳಾದರೆ ಸಾಕಿ ಸಲಹುವವಳು ಕನ್ನಡಾಂಬೆ. ತುಳು ಪಂಚ ದ್ರಾವಿಡ ಭಾಷೆಗಳಲ್ಲಿ ಒಂದು. ಕನ್ನಡ, ಮಲಯಾಳಂ, ತೆಲುಗು ಹಾಗೂ ತಮಿಳಿನಂತೆ ತುಳು ಸತ್ವಯುತ ಹಾಗೂ ಪ್ರಬುದ್ಧವಾದ ಭಾಷೆ. ತುಳುನಾಡು ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಭಾಷಿಕವಾಗಿ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದ ನಾಡು. ಇತಿಹಾಸ ಕಾಲದಿಂದಲೇ ದೇಶ ವಿದೇಶಿಯರ ಆಕರ್ಷಣೆಯ ಕೇಂದ್ರವಾಗಿ, ಸಕಲ ಕಲೆಯ ಬೀಡಾಗಿ, ಸಾಗರೋತ್ತರ ವ್ಯಾಪಾರ ವಹಿವಾಟಿನ ನೆಲೆಯಾಗಿ ಬೆಳೆದ ನಾಡು. ರಾಜಕೀಯವಾಗಿ ಆಲೂಪರು, ಹೊಯ್ಸಳರು, ವಿಜಯನಗರದ ರಾಯರು, ಕೆಳದಿಯ ನಾಯಕರು, ಟಿಪ್ಪು - ಹೈದರ್ ಹಾಗೂ ಬ್ರಿಟಿಷರೇ ಮುಂತಾದ ರಾಜಕೀಯ ವ್ಯವಸ್ಥೆಯಡಿಯಲ್ಲಿ ಅನೇಕ ಏರುಪೇರನ್ನು ಕಂಡರೂ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿರುವುದು ಇಲ್ಲಿಯ ವಿಶೇಷ. ಇಂತಿರುವಲ್ಲಿ ತುಳುನಾಡಿಗೆ ಅದರದ್ದೇ ಆದ ಪ್ರತ್ಯೇಕವಾದ ಅಸ್ತಿತ್ವವಿತ್ತೆಂಬುದನ್ನು ಅಲ್ಲಗಳೆಯಲಾಗದು. ಯಾಕೆ ಈ ವಿಚಾರಗಳನ್ನು ಉಲ್ಲೇಖಿಸಬೇಕೆಂದರೆ ತುಳುವರು ಮನಸ್ಸು ಮಾಡುತ್ತಿದ್ದರೆ, ಬಾಷಾವಾರು ವಿಭಜನೆಯ ಸಂದರ್ಭದಲ್ಲಿ ಪ್ರತ್ಯೇಕ ತುಳುರಾಜ್ಯದ ರಚನೆಗಾಗಿ ಹೋರಾಡುತ್ತಿದ್ದರೆ, ನಿರಂತರ ಪ್ರಯತ್ನ ನಡೆಸುತ್ತಿದ್ದರೆ ಈ ಕನಸು ಅಸಾಧ್ಯವಾದುದಾಗುತ್ತಿರಲಿಲ್ಲ. ಈ ಆಶಯಕ್ಕೆ ಪೂರಕವಾಗಿ ನೆಹರೂ ಕಮಿಟಿಯ ವರದಿಯ ಕೆಲವು ಸಾಲುಗಳನ್ನು ಗಮನಿಸಿದಾಗ ಈ ವಿಚಾರವನ್ನು

ಯಾರೂ ಹುರುಳಿಲ್ಲದ್ದೆಂದು ಸಾರಾ ಸಗಟಾವಾಗಿ ಅಲ್ಲಗಳೆಯಲಾರರು.

"The mere fact that people living in a particular area feel that they are a unit and a desire to develop their culture, is an important consideration even though there may be no sufficient historical or cultural justification for their demand".

ಹೀಗಿರುವಾಗ ಪ್ರತ್ಯೇಕ ರಾಜ್ಯ ರಚನೆಗೆ ಬೇಕಾದ ಪೂರಕ ಅಂಶಗಳು ಈ ವರದಿಯಲ್ಲಿ ಒಳಗೊಂಡಿತ್ತೆಂಬುದರಲ್ಲಿ ಎರಡು ಮಾತಿಲ್ಲ/ ಪಣಿಯಾಡಿಯವರು 1928ರಲ್ಲಿ ತುಳುವ ಮಹಾಸಭೆ ಸ್ಥಾಪನೆ ಮಾಡಿರುವುದು ಕಾಕತಾಳೀಯವೆನ್ನಬೇಕು. ಪ್ರತ್ಯೇಕ ತುಳು ರಾಜ್ಯದ ಬೇಡಿಕೆಯಲ್ಲಿ ಇದೊಂದು ಪ್ರಾರಂಭಿಕ ಹಂತವಾಗುವ ಎಲ್ಲಾ ಅಂಶಗಳನ್ನೊಳಗೊಂಡಿತ್ತು. ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಸಭಾ, ಕರ್ನಾಟಕ ಏಕೀಕರಣ ಸಭಾ ಹಂತ ಹಂತವಾಗಿ ಬೆನಗಲ್ ರಾಮರಾಯರ, ಅಲೂರು ವೆಂಕಟರಾಯರಂತಹ ಪ್ರಮುಖರ ನೇತೃತ್ವದಲ್ಲಿ ಬೆಳವಣಿಗೆಯನ್ನು ಕಂಡು ಕರ್ನಾಟಕ ಏಕೀಕರಣ ಕೈಗೂಡಿದ ಹಾಗೆಯೇ ತುಳುವ ಮಹಾಸಭೆಯು ಈ ದಿಸೆಯಲ್ಲಿ ಕಾರ್ಯ ಪ್ರವೃತವಾಯಿತು. ಶ್ರೀ ಎಸ್. ಯು. ಪಣಿಯಾಡಿಯವರ ನೇತೃತ್ವದಲ್ಲಿ ಪೊಳಲಿ ಶೀನಪ್ಪ ಹೆಗಡೆ, ನಾರಾಯಣ ಕಿಲ್ಲೆ ಇವರೆಲ್ಲರ ಸಹಕಾರದೊಂದಿಗೆ . ತುಳು ರಾಜ್ಯ ರಚನೆಗೆ ಪೂರಕವಾದ ವಾತಾವರಣ ನಿರ್ಮಾಣವಾಗುವುದರಲ್ಲಿ ಸಂದೇಹವಿರಲಿಲ್ಲ. ಹಂಪಿ, ಪಟ್ಟದಕಲ್ಲು ಮುಂತಾದ ಐತಿಹಾಸಿಕ ನಿವೇಶನಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಸಾಂಸ್ಕೃತಿಕ ವೈಭವವನ್ನು ಕಂಡು ಬೆರಗಾದ ಆಲೂರು ವೆಂಕಟರಾಯರು **'ಕರ್ನಾಟಕ ಗತ ವೈಭವ'**ದಂತಹ ಕೃತಿ ರಚನೆಗೆ ಕಾರಣರಾದರು. ಈ ಮೂಲಕ ಸಹಸ್ರ ಕನ್ನಡಿಗರಲ್ಲಿ ಕನ್ನಡ ಜಾಗೃತಿ ಮೂಡಿಸಿ ಕನ್ನಡಾಭಿಮಾನ ಬೆಳೆಸಿದರು.

ಅಂತೆಯೇ ತುಳುನಾಡಿನಲ್ಲಿ ನಾಡು ನುಡಿಯ ಬಗ್ಗೆ, ಐತಿಹಾಸಿಕ ಪರಂಪರೆ ಬಗ್ಗೆ ತುಳುವರಲ್ಲಿ ಅಭಿಮಾನ ಉಕ್ಕುವಂತೆ ಮಾಡುವ ಕೆಲಸ ನಡೆದಿತ್ತು. ಇದು ಕಾಕತಾಳೀಯವಾದರೂ ಸಮಯೋಚಿತವಾಗಿತ್ತು. ದ.ಕ. ಜಿಲ್ಲೆಯ ಇತಿಹಾಸ ಹಾಗೂ ಸಾಂಸ್ಕೃತಿಕ ವೈಭವವನ್ನು ಗಣಪತಿ ರಾವ್ ಐಗಳ್‌ರವರು ೧೯೨೩ ರಲ್ಲಿ "ದಕ್ಷಿಣ ಕನ್ನಡ

ಜಿಲ್ಲೆಯ ಪ್ರಾಚೀನ ಇತಿಹಾಸ"ವೆಂಬ ಬೃಹತ್ ಗ್ರಂಥದಲ್ಲಿ ಮೊತ್ತಮೊದಲ ಬಾರಿಗೆ ಸೆರೆ ಹಿಡಿದು, ಈ ಪ್ರದೇಶದ ಇತಿಹಾಸ ಪಿತಾಮಹ ಎನಿಸಿಕೊಂಡರು. ಇಲ್ಲಿನ ರಾಜಮನೆತನಗಳ, ಆಳರಸರ, ಬಲ್ಲಾಳರ ಇತಿಹಾಸ, ಬೀಡು ಮಾಡಗಳ ಸಾಂಸ್ಕೃತಿಕ ವೈಭವ, ಸಂಧಿ ಪಾಡ್ದನಗಳ ಮಹತ್ವ ತುಳುವರ ಕಣ್ಣು ತೆರೆಸಿತು.

ಅಂತರಾಷ್ಟ್ರೀಯ ಖ್ಯಾತಿಯ ಡಾ. ಭಾಸ್ಕರಾನಂದ ಸಾಲೆತ್ತೂರರು **"ಎನ್‌ಷಿಯಂಟ್ ಕರ್ನಾಟಕ ಹಿಸ್ಟ್ರಿ ಆಫ್ ತುಳುವಾಸ್"** ಕೃತಿ ರಚಿಸಿ ಜಾನಪದ ಅಧ್ಯಯನಕ್ಕೆ ಹೊಸತೊಂದು ಆಯಾಮವನ್ನು ಹಾಕಿಕೊಟ್ಟರು. ತುಳುವ ಸಂಸ್ಕೃತಿಯ ಮಹತ್ವವನ್ನು ಎತ್ತಿ ಹಿಡಿದರು. ಈ ಎಲ್ಲಾ ಕೆಲಸಗಳು ವಿದ್ವತ್ ವಲಯದಲ್ಲಿ ವಿದ್ಯುತ್ ಸಂಚಾರವನ್ನುಂಟು ಮಾಡಿತ್ತು.

ಬಿ. ಮೋಹನಪ್ಪ ತಿಂಗಳಾಯರು ೨೮.೩.೧೯೨೯ರಂದು ಪಣಿಯಾಡಿಯವರಿಗೆ ಬರೆದ ಪತ್ರದಲ್ಲಿ ತುಳುನಾಡಿನ ಭೌಗೋಳಿಕ ವರ್ಣನೆಯನ್ನೊಳಗೊಂಡ ಒಂದು ರಾಷ್ಟ್ರಗೀತೆ ರಚಿಸಿರುವುದಾಗಿ ತಿಳಿಸಿರುವುದು ಇಲ್ಲಿ ಉಲ್ಲೇಖಾರ್ಹ.

ಎನ್. ಎ. ಶೀನಪ್ಪ ಹೆಗ್ಗಡೆ ಹಾಗೂ ಎನ್ ಎಸ್ ಕಿಲ್ಲೆಯವರ ಸಾಹಿತ್ಯಿಕ ಕೊಡುಗೆಯು ಸ್ಮರಣೀಯ. ಪಣಿಯಾಡಿಯವರು ತುಳು ಭಾಷೆಯ ಹಾಗೂ ತುಳುವರ ಸೇವೆಗೆ ಸ್ಫೂರ್ತಿ ನೀಡಿದವರೆಂದು ಶೀನಪ್ಪ ಹೆಗ್ಗಡೆಯವರು ಸದಾ ನೆನೆಯುತಿದ್ದರು.

ಬನ್ನಂಜೆ ರಾಮಾಚಾರ್ಯರು ತಮ್ಮ ನೆನಪಿನಾಳದಿಂದ ಮಾತನಾಡುತ್ತಾ "ಭಾಷೆಯ ಆಧಾರದಲ್ಲಿ ಪ್ರಾಂತ್ಯ ರಚನೆ ಮಾಡುವ ವಿಚಾರಕ್ಕೆ ಅವರ ಪೂರ್ಣ ಸಹಮತವಿತ್ತು. ತುಳುನಾಡು ಒಂದು ಪ್ರತ್ಯೇಕ ರಾಜ್ಯವಾಗಬೇಕೆಂಬ ಸ್ಪಷ್ಟ ನಿಲುವನ್ನು ಹೊಂದಿ ವಾದಿಸುವವರಾಗಿರುತ್ತಾರೆ" ಎಂದು ಪಣಿಯಾಡಿಯವರ ಕುರಿತು ನೆನೆಪಿಸಿಕೊಳ್ಳುತ್ತಾರೆ. ಆದರೆ ನಾವೊಂದು ಬಗೆದರೆ ವಿಧಿ ಬೇರೊಂದು ಬಗೆಯಿತು ಎಂಬಂತೆ, ಇಂತಹ ನಿಲುವನ್ನು ಹೊಂದಿದ ಪಣಿಯಾಡಿಯವರು ತಮ್ಮ ವ್ಯವಹಾರದಲ್ಲಿ ಸೋಲಿನ ಮೇಲೆ ಸೋಲನ್ನನುಭವಿಸಿ ಜರ್ಜಿತರಾದರು. ಇವರಿಗೆ ಬೆನ್ನೆಲುಬಾಗಿ ನಿಲ್ಲಬೇಕಾಗಿದ್ದ, ತುಳುನಾಡಿನ ಜಿನರಾಜ ಹೆಗಡೆಯವರು, ಕೆ. ಆರ್. ಕಾರಂತರೇ ಮುಂತಾದವರು ಕನ್ನಡಾಂಬೆಯ ಕರೆಗೆ ಓಗೊಟ್ಟರು. ಮುಂದೆ ತುಳು-ಕನ್ನಡವೆಂಬ ಭೇದ ಭಾವವನ್ನು ಮರೆತು ಕರ್ನಾಟಕದ ಏಕೀಕರಣಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿದರು.

ಕರ್ನಾಟಕ ಏಕೀಕರಣಕ್ಕೆ ತುಳುವರ ಕೊಡುಗೆ ಅನನ್ಯವಾದುದು. ಸಾಹಿತಿಗಳು, ಪತ್ರಕರ್ತರು, ರಾಜಕಾರಣಿಗಳು, ವ್ಯಾಪಾರಿಗಳು, ಜನಸಾಮಾನ್ಯರು ಹೀಗೆ ಎಲ್ಲಾ ವರ್ಗದವರು ತಮ್ಮ ವೃತ್ತಿ ಭೇದವನ್ನು ಮರೆತು ಸರ್ವರೂ ಕರ್ನಾಟಕದ ಏಕೀಕರಣ ಕಾರ್ಯಕ್ಕೆ ಕೈಜೋಡಿಸಿದರು. ಸಾಹಿತಿಗಳಾದ ಪಂಜೆ ಮಂಗೇಶರಾಯರು, ರಾಷ್ಟ್ರಕವಿ ಗೋವಿಂದ ಪೈಗಳು, ಶಿವರಾಮ ಕಾರಂತರೇ ಮೊದಲಾದ ಶ್ರೇಷ್ಠರು ಕರ್ನಾಟಕದಾದ್ಯಂತ ಸಂಚರಿಸಿ ಕನ್ನಡ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು. ಮುಂದೆಂದೂ ಕರ್ನಾಟಕದ ಏಕೀಕರಣಕ್ಕೆ ತುಳುವರಿಂದ ಅಪಸ್ವರ ಏಳಲಿಲ್ಲ. ಮುಸಲ್ಮಾನರು, ಕ್ರೈಸ್ತರು, ಜೈನರೆಂಬ ಭೇದವಿಲ್ಲದೆ ಒಗ್ಗಟ್ಟಿನಲ್ಲಿ ದುಡಿದರು. ಹಾಗೆ ನೋಡಿದರೆ ಕನ್ನಡಿಗರ ಪ್ರಗತಿಗೆ ಕರ್ನಾಟಕದ ಏಕೀಕರಣಕ್ಕೆ ಕನ್ನಡಿಗರಿಂದಲೇ ಅಪಸ್ವರವೆದ್ದಿತ್ತು. ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಪ್ರಗತಿಯನ್ನು ಕಂಡ ಮೈಸೂರು ಸಂಸ್ಥಾನ ಪ್ರಥಮದಲ್ಲಿ ಏಕೀಕರಣ ಕಾರ್ಯದಲ್ಲಿ ಸ್ಪಂದಿಸಿರಲಿಲ್ಲವೆಂದೇ ಹೇಳಬೇಕು. ಬ್ರಿಟಿಷ್ ಪ್ರಾಂತ್ಯದೊಂದಿಗೆ ತಮ್ಮ ಸೇರ್ಪಡೆಯಾದದ್ದೇ ಆದರೆ, ಎಲ್ಲಿ ತಮ್ಮ ಪ್ರಗತಿಗೆ ಅಡ್ಡಿಯಾಗುತ್ತೋ ಎಂಬ ಭಯ ಅವರನ್ನು ಕಾಡಿತ್ತು. ಆದರೆ ಇಂತಹ ಕ್ಷುಲ್ಲಕ ಭಾವನೆ, ವಿಶಾಲ ಹೃದಯದ ತುಳುವರಲ್ಲಿ ಎಂದೂ ಮೂಡಿರಲಿಲ್ಲವೆಂದು ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಪ್ರತ್ಯೇಕ ರಾಜ್ಯ ರಚನೆಗೆ ಎಲ್ಲಾ ಅವಕಾಶವಿದ್ದರೂ, ಹೋರಾಟಕ್ಕೆ ಸಿದ್ಧವಾದ ದಂಡು ಸನ್ನದ್ಧವಾಗಿದ್ದರೂ ಕರ್ನಾಟಕದ ಏಕೀಕರಣ ಕೂಗು ಮೊಳಗಿದಾಗ, ಸ್ವಾರ್ಥವನ್ನು ತೊರೆದು ತಮ್ಮ ಶ್ರೇಷ್ಠತೆಯನ್ನು ಮೆರೆದರು.

ಇಲ್ಲಿ ಬಹಳಷ್ಟು ರಾಜಕೀಯ ಸಮ್ಮೇಳನಗಳು, ಸಾಹಿತ್ಯ ಗೋಷ್ಠಿಗಳು ನಾಡಿನಾದ್ಯಂತ ನಡೆದಿತ್ತು. ಎಲ್ಲಾ ಸಂದರ್ಭಗಳಲ್ಲೂ ಕರ್ನಾಟಕದ ಏಕೀಕರಣದ ಸೊಲ್ಲು ಕೇಳಿ ಬರುತ್ತಿತ್ತು. ಆಗಿನ ಕಾಲದಲ್ಲಿ ಈ ವಿಚಾರಗಳೆಲ್ಲಾ ವಿದ್ವತ್ ವಲಯಕ್ಕೆ ಸೇರಿದ ವಿಚಾರವಾಗಿತ್ತು. ಜನಸಾಮಾನ್ಯರ ಭಾಗವಹಿಸುವಿಕೆ ಅಷ್ಟಕಷ್ಟೆ. ಹಾಗೆಂದು ನಿರಕ್ಷರಿಗಳೂ ಕೂಡಾ ತಮ್ಮ ಅಮೂಲ್ಯ ಸೇವೆ ನೀಡಿದ ನಿದರ್ಶನಗಳೂ ಬಹಳಷ್ಟು ದೊರೆಯುತ್ತವೆ. ಇಲ್ಲಿ ಎಲ್ಲಾ ಹಿರಿ - ಕಿರಿಯ ಹೋರಾಟಗಾರರ ವಿಚಾರವನ್ನು ಎತ್ತಿ ಹಿಡಿಯುವುದು ಸಾಧ್ಯವಾಗದ ಮಾತು. ಈ ಕ್ಷೇತ್ರದಲ್ಲಿ ತಮ್ಮ ಸರ್ವಸ್ವವನ್ನು ಈ ಸಾಧನೆಗಾಗಿ ತ್ಯಾಗ ಮಾಡಿ ತಮ್ಮ ಬದುಕನ್ನೇ ಈ ಕಾರ್ಯಕ್ಕಾಗಿ ಮುಡಿಪಾಗಿಟ್ಟ ನಾಲ್ಕು ಮಂದಿ ಪ್ರಮುಖರುಗಳಾದ ಬೆನೆಗಲ್ ರಾಮರಾಯರು,

ಎಸ್.ಯು. ಪಣಿಯಾಡಿಯವರು, ಕೆ.ಬಿ. ಜಿನರಾಜ ಹೆಗಡೆಯವರು ಹಾಗೂ ಕೆ. ಆರ್. ಕಾರಂತರ ಕೊಡುಗೆಯನ್ನು ವ್ಯಕ್ತಿ ಚಿತ್ರಣದೊಂದಿಗೆ ನೀಡುವ ಪ್ರಯತ್ನ ಮಾಡಲಾಗಿದೆ.

ಬೆನಗಲ್ ರಾಮರಾಯರು

"ಕನ್ನಡ ಸವಿಮಾತು ಮನ್ನಣೆಯ ಪಳವಾತು
ಕನ್ನಡದ ಸರಸ್ವತಿಯ ನವಕಲ್ಪಲತೆಯು
ಕನ್ನಡದ ವರಚರಿತೆ ವಿಮಲ ಗಂಗಾ ಸರಿತೆ
ಕನ್ನಡದ ಸಿರಿಪೆಂಪು ಎನಗೆ ನೆರಳಂಪು"

ಹೀಗೆಂದು ಕನ್ನಡ ತಾಯಿಯನ್ನು ಬಣ್ಣಿಸಿದವರು ಬೆನಗಲ್ ರಾಮರಾಯರು. ಈ ತೆರನಾದ ಕನ್ನಡಾಭಿಮಾನದ ಬೆನಗಲರು ಹಗಲಿರುಳೆನ್ನದೆ ಕನ್ನಡ ಮಾತೆಯ ಸೇವೆಗಾಗಿ, ವಿಮೋಚನೆಗಾಗಿ ತನ್ನ ಬದುಕನ್ನೇ ಮುಡಿಪಾಗಿಟ್ಟರು. ಕರ್ನಾಟಕದ ಏಕೀಕರಣಕ್ಕೆ ತುಳುವರ ಕೊಡುಗೆಯ ಬಗೆಗಿನ ವಿಚಾರ ಬಂದಾಗ ಪ್ರಪ್ರಥಮವಾಗಿ ನೆನಪಿಸಬೇಕಾದ ಹೆಸರೆಂದರೆ ಬೆನಗಲ್ ರಾಮರಾಯರದ್ದು. ಆಲೂರು ವೆಂಕಟರಾಯರಂತೆ ಪ್ರಾರಂಭದಿಂದಲೇ ಕರ್ನಾಟಕ ಏಕೀಕರಣದ ಸೊಲ್ಲೆತ್ತಿದವರು. ಮೂಲತಃ ದ.ಕ. ಜಿಲ್ಲೆಯವರಾದರೂ ತನ್ನ ಉದ್ಯೋಗದ ನಿಮಿತ್ತ ಹೆಚ್ಚಿನ ಅವಧಿಯನ್ನು ಜಿಲ್ಲೆಯ ಹೊರಗೆ, ಅದೂ ಮದ್ರಾಸಿನಲ್ಲೇ ಕಳೆಯಬೇಕಾಗಿ ಬಂತು. ಹಾಗೆ ನೋಡಿದರೆ ಬೆನಗಲ್ ಮನೆತನದ ಹಲವು ಶ್ರೇಷ್ಠರು ಅಂದಿನ ದಿನಗಳಲ್ಲಿ ವಿವಿಧ ಕ್ಷೇತ್ರದಲ್ಲಿ ದೇಶ ಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡವರೇ ಡಾ. ಬೆನಗಲ್ ರಾಘವೇಂದ್ರಯ್ಯನವರ ಮಕ್ಕಳಾದ ಬೆನೆಗಲ್ ನರಸಿಂಗರಾವ್, ಬೆನಗಲ್ ರಾಮರಾವ್ ಐ.ಪಿ.ಎಸ್. ಅಧಿಕಾರಿಗಳಾಗಿ ಸ್ವಾತಂತ್ರ್ಯ ಪೂರ್ವದಲ್ಲೇ ಭಾರತ ಸರಕಾರದ ವಿವಿಧ ವಿಭಾಗಗಳಲ್ಲಿ ಸಮರ್ಥ ಸೇವೆಯನ್ನು ನೀಡಿ ಖ್ಯಾತರಾಗಿದ್ದರು. ಬೆನಗಲ್ ಸಂಜೀವರಾವ್ ಶಿಕ್ಷಣ ಕ್ಷೇತ್ರದಲ್ಲಿ ಗುರುತಿಸಿಕೊಂಡವರು. ಇನ್ನು ಬೆನಗಲ್ ಶಿವರಾವ್ ಪತ್ರಿಕಾ ರಂಗದಲ್ಲಿ ತನ್ನದೇ ಆದ ವರ್ಚಸ್ಸಿನಿಂದ ಮೆರೆದು, ರಾಜಕೀಯ ಸೇರಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪಾರ್ಲಿಮೆಂಟ್‌ನಲ್ಲಿ ಸಮರ್ಥವಾಗಿ ಪ್ರತಿನಿಧಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೌಡ ಸಾರಸ್ವತರು ಸಂಖ್ಯೆಯಲ್ಲಿ ಕಡಿಮೆ ಇದ್ದರೂ,

ವಿವಿಧ ಕ್ಷೇತ್ರಗಳಲ್ಲಿ ತಮ್ಮ ಅನನ್ಯವಾದ ಸೇವೆಯನ್ನು ಸಲ್ಲಿಸಿದವರು. ರಾಜಕೀಯದಲ್ಲಿ ಕಾರ್ನಾಡ್ ಸದಾಶಿವರಾಯರು, ಕಮಲಾದೇವಿ ಚಟ್ಟೋಪಾಧ್ಯಾಯರು, ಸಹಕಾರಿ ಕ್ಷೇತ್ರದಲ್ಲಿ ಮೊಳಹಳ್ಳಿ ಶಿವರಾಯರು, ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಕುದ್ಮುಲ್ ರಂಗರಾಯರು, ಇತಿಹಾಸ ಕ್ಷೇತ್ರದಲ್ಲಿ ಬಿ.ಎ. ಸಾಲೆತ್ತೂರರು, ಗಣಪತಿ ರಾವ್ ಐಗಳರು ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲಿ ಪಂಜೆ ಮಂಗೇಶರಾಯರು, ಉಗ್ರಾಣ ಮಂಗೇಶರಾಯರು ಹೀಗೆ ಒಂದೇ ಎರಡೇ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಅಮೂಲ್ಯ ಸೇವೆಗಾಗಿ ಗುರುತಿಸಿಕೊಂಡಿದ್ದಾರೆ. ಸ್ಮರಣೆ ಯೋಗ್ಯರಾಗಿರುತ್ತಾರೆ. ಈ ಯಾದಿಯಲ್ಲಿ ಬೆನಗಲ್ ರಾಮರಾಯರ ಹೆಸರು ಮೊದಲ ಪಂಕ್ತಿಯಲ್ಲಿ ಸೇರಿಕೊಳ್ಳುತ್ತದೆ.

ಇವರು ರಚಿಸಿದ "**ಪುರಾಣನಾಮ ಚೂಡಾಮಣಿ**" ಒಂದು ಆಕರ ಗ್ರಂಥವಾಗಿದೆ. ಯಕ್ಷಗಾನ ಸಾಹಿತ್ಯಾಭ್ಯಾಸಿಗಳಿಗೊಂದು ಕೈಪಿಡಿಯಾಗಿ ವಿಶೇಷವಾಗಿ ಪ್ರಸಿದ್ಧಿ ಪಡೆದಿದೆ.

ಪ್ರತಕರ್ತರಾಗಿಯೂ ಸ್ಮರಣೀಯ ಸೇವೆ ಸಲ್ಲಿಸಿದ ಬೆನಗಲರು, ಮಂಗಳೂರಿನ ಸುವಾಸಿನಿ ಪತ್ರಿಕೆಯನ್ನು ಉತ್ತಮ ಮಟ್ಟದಲ್ಲಿ ನಡೆಸಿದ್ದಾರೆ. ವಾಗ್ಭೂಷಣ ಎಂಬ ಮತ್ತೊಂದು ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ಸಲಹೆಗಾರರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ಸಲಹೆಗಾರರಾಗಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಅಜೀವ ಸದಸ್ಯರಾಗಿ, ಮದ್ರಾಸಿನ "**ಸುಗುಣವಿಲಾಸ ನಾಟಕ ಸಭಾ**" ಇದರ ಸಂಚಾಲಕರಾಗಿ, ಹಲವು ಕಾಲ ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಂಡಿದ್ದಾರೆ. ನಾಟಕಗಳಲ್ಲಿ ಸ್ವತಃ ನಟನಾಗಿ ಅಭಿನಯಿಸಿದವರು. ದ.ಕೃ. ಭಾರದ್ವಾಜರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ ರಂಗಭೂಮಿ ಪತ್ರಿಕೆಯಲ್ಲಿ ಬೆನಗಲರು ದುಷ್ಯಂತನ ಪಾತ್ರ ವಹಿಸಿದ್ದ ಚಿತ್ರ ಪ್ರಕಟವಾಗಿತ್ತು. ಮದ್ರಾಸಿನಲ್ಲಿ ಕನ್ನಡ ನಾಟಕಗಳನ್ನು ಪ್ರದರ್ಶಿಸುತ್ತಿರುವ ಅವಕಾಶವನ್ನು ರಾಮರಾಯರು ಕಲ್ಪಿಸಿದರು ಎಂಬುವುದು ಗೌರವದ ಮಾತಾಗಿದೆ. ಮದ್ರಾಸ್ ಒರಿಯೆಂಟಲ್ ಟ್ರಾನ್ಸ್‌ಲೇಟರ್ ಕಛೇರಿಯ ಭಾಷಾಂತರಕಾರ ಹುದ್ದೆ ಖಾಲಿಯಾಗಿ ಅದಕ್ಕೆ ಸೇರಲು ಬೆನಗಲರಿಗೆ ಕರೆ ಬಂದಾಗ, 1902ರಲ್ಲಿ ಮೈಸೂರು ಸರಕಾರದ ಸೇವೆಗೆ ರಾಜಿನಾಮೆ ನೀಡಿ ಮದ್ರಾಸ್ ಸರಕಾರದ ಸೀನಿಯರ್ ಟ್ರಾನ್ಸ್‌ಲೇಟರ್ ಹುದ್ದೆಗೆ ಖಾಯಂ ಆಗಿ ಸೇರಿಕೊಂಡರು. ಮುಂದೆ ಅವರು ಅದೇ ವೃತ್ತಿಯಲ್ಲಿ ನಿವೃತ್ತಿಯವರೆಗೂ

ಮುಂದುವರಿದರು. ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಂತೆಯೇ ಅವರು ಮದ್ರಾಸ್ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪರೀಕ್ಷಕರಾಗಿಯೂ ಇದ್ದರು. ಅಲ್ಲದೆ ಒರಿಯೆಂಟಲ್ ಲೈಬ್ರೆರಿಯ ಸಲಹಾ ಸಮಿತಿ ಸದಸ್ಯರಾಗಿ, ಮದ್ರಾಸ್ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿಯೂ ದುಡಿದಿದ್ದರು. ಪಠ್ಯ ಪುಸ್ತಕಗಳ ಸಲಹಾ ಸಮಿತಿಯ ಸದಸ್ಯರಾಗಿ ಮಾರ್ಗದರ್ಶನ ಮಾಡಿದ ಹೆಮ್ಮೆ ಇವರದು.

ಬೆನಗಲರ ಮಾತೃಭಾಷೆ ಕೊಂಕಣಿ. ಅವರು ಜೀವನವಿಡೀ ದುಡಿದುದು ಕನ್ನಡಕ್ಕಾಗಿ. ಅತುಲವಾದ ಸಾಹಿತ್ಯ ಸಂಪತ್ತನ್ನು ನೀಡಿದ ಬೆನಗಲರನ್ನು, 1925ರಲ್ಲಿ ಬೆಳಗಾವಿಯಲ್ಲಿ ನಡೆದ 11ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಆಯ್ಕೆಯಾದ ಮೊತ್ತ ಮೊದಲ ದಕ್ಷಿಣ ಕನ್ನಡದ ಸಾಹಿತಿ. ಇವರೇ 1903ರಷ್ಟು ಹಿಂದೆಯೇ ಕರ್ನಾಟಕ ಏಕೀಕೃತ ನಾಡಿನ ಕನಸು ಕಂಡು, ಮೊತ್ತಮೊದಲ ಒಟ್ಟು ಕರ್ನಾಟಕದ ನಕ್ಷೆಯನ್ನು ನಾಡಿಗೆ ನೀಡಿದ ದೃಷ್ಟಾರ.

ಭಾಷಾವಾರು ಆಧಾರದ ಮೇಲೆ ಕರ್ನಾಟಕ ಪ್ರಾಂತ್ಯದ ರಚನೆಗಾಗಿ ಆರಂಭವಾದ ಆಂದೋಲನ ಸಂಗ್ರಾಮದ ಜೊತೆ ಮೂಡಿ ಬರತೊಡಗಿತು. ಏಕೀಕರಣದ ಕಲ್ಪನೆ ಮೂಲತಃ ಒಂದು ಆಂದೋಲನವಾಗಿ ರೂಪುಗೊಳ್ಳಲು ಕಾರಣರಾದವರು ಬುದ್ಧಿ ಜೀವಿಗಳು, ಕವಿಗಳು, ಲೇಖಕರು, ಪತ್ರಕರ್ತರು ಮೊದಲಾದವರು. ಇವರ ಪ್ರಯತ್ನದಿಂದಾಗಿ ಜನತೆಯಲ್ಲಿ ಮೂಡಿಬಂದ ಭಾವನಾತ್ಮಕ ವಾತಾವರಣ ದೇಶದ ಸ್ವಾತಂತ್ರ್ಯ ಗಳಿಕೆಗೂ ಪೂರಕವಾಗಿದ್ದರಿಂದ ಸಹಜವಾಗಿಯೇ ರಾಜಕಾರಣಿಗಳೂ ಏಕೀಕರಣಕ್ಕೆ ಬೆಂಬಲಿಸತೊಡಗಿದರು.

ಸ್ವಾತಂತ್ರ್ಯ ಸಂಗ್ರಾಮ ಹೊಸ ಹೊಸ ತಿರುವುಗಳನ್ನು ಪಡೆದು ಪಂಡಿತ ಪಾಮರರೆನ್ನದೆ ಒಂದುಗೂಡಿ ಬ್ರಿಟಿಷರ ವಿರುದ್ಧ ನಡೆದ ಜನಾಂದೋಲನದಲ್ಲಿ ಪತ್ರಿಕೆಗಳ ಪಾತ್ರ ಕಡಿಮೆಯೇನಲ್ಲ. ಅಂತೆಯೇ ಕರ್ನಾಟಕವನ್ನು ಏಕೀಕೃತಗೊಳಿಸುವಲ್ಲಿ ಕೂಡಾ ಪತ್ರಿಕೆಗಳ ಕೊಡುಗೆ ಕಡಿಮೆಯೇನಲ್ಲ. ವಿವಿಧ ಘಟಕಗಳಾಗಿ ಹರಿದು ಹಂಚಿಹೋಗಿದ್ದ ಕನ್ನಡಿಗರು ಅನ್ಯ ಭಾಷೀಯರ ಪ್ರಭಾವದಲ್ಲಿ ಉಳಿದು ಮೂಲ ಭಾಷೆಯನ್ನು ಮರೆತು ಅದು ಬಹುತೇಕ ಕಣ್ಮರೆಯಾಗುವ ಅಂಚಿನಲ್ಲಿ ಇತ್ತು. ಅಂತಹ ಸರಿ ಸಮಯದಲ್ಲಿ ಜನ್ಮ ತಾಳಿದ ಪತ್ರಿಕೆಗಳು ಜನರಲ್ಲಿ ಅರಿವು ಉಂಟುಮಾಡಿ ಪರಭಾಷೆಯ ಪರಕೀಯರಿಂದ ನಾಡು ನುಡಿಯ

ವಿಮೋಚನೆಯ ಕನಸು ಹೊತ್ತ ಅನೇಕ ಪತ್ರಿಕೆಗಳು ಕರ್ನಾಟಕದಾದ್ಯಂತ ಹುಟ್ಟಿಕೊಂಡವು. ನಿರ್ದಿಷ್ಟ ಗುರಿಯನ್ನು ಹೊಂದಿ ಈ ದಿಸೆಯಲ್ಲಿ ಕಾರ್ಯೋನ್ಮುಖವಾದವು. ಇಲ್ಲಿ ಪ್ರಮುಖವಾಗಿ ಉದಾಹರಿಸಬಹುದಾದ ಪತ್ರಿಕೆಗಳೆಂದರೆ ಉಡುಪಿ ಪ್ರದೇಶದಲ್ಲಿ 'ಸತ್ಯಾಗ್ರಹಿ' ಹಾಗೂ 'ನವಯುಗ', ದಾರವಾಡ ಮತ್ತು ಹುಬ್ಬಳ್ಳಿ ಪ್ರದೇಶಗಳಲ್ಲಿ ಕರ್ಮವೀರ, ತರುಣ ಕರ್ನಾಟಕ, ಸಂಯುಕ್ತ ಕರ್ನಾಟಕ, ಹೈದರಾಬಾದ್‌ನಲ್ಲಿ ಸಾಧನ, ಮಡಿಕೇರಿಯಲ್ಲಿ ಕೊಡಗು, ಕುಮುಟಾದಲ್ಲಿ ಕಾನಡಾ ವೃತ್ತ, ಕಾನಡ ದುರೀಣ, ಬಳ್ಳಾರಿಯಲ್ಲಿ ಕರ್ನಾಟಕ ಕೇಸರಿ, ಬೆಂಗಳೂರಿನಲ್ಲಿ ಪ್ರಜಾಮತ, ಚಿತ್ರಗುಪ್ತ, ತಾಯಿನಾಡು, ವೀರಕೇಸರಿ, ವಿಶ್ವ ಕರ್ನಾಟಕ, ಮೈಸೂರಿನಲ್ಲಿ ಸಾದ್ವಿ, ಲಿಸ್ಕಾರ್, ಬಾಗಲಕೋಟೆಯಲ್ಲಿ ಕನ್ನಡಿಗೆ, ಬಿಜಾಪುರದಲ್ಲಿ ಕರ್ನಾಟಕ ವೈಭವ, ಇತ್ಯಾದಿಗಳು ಜನರ ಭಾಷಾಭಿಮಾನವನ್ನು ಕೆರಳಿಸಿ ಏಕೀಕರಣದ ಬಗ್ಗೆ ಹುರಿದುಂಬಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು.

1890ರಲ್ಲಿ ವಿದ್ಯಾವರ್ಧಕ ಸಂಘ ಧಾರವಾಡದಲ್ಲಿ ಹುಟ್ಟಿಕೊಂಡುದು ಒಂದು ಮಹತ್ವ ಪೂರ್ಣವಾದ ಹಂತ. ಕನ್ನಡ ಭಾಷೆ ಹಾಗೂ ಕಲೆಯ ಅಭಿವೃದ್ಧಿಯೇ ಇದರ ಪ್ರಮುಖ ಗುರಿ. ಬೆನಗಲ್ ರಾಮರಾಯರು ಪ್ರಮುಖ ಕ್ರಿಯಾಶೀಲ ವ್ಯಕ್ತಿಯಾಗಿ ಮೂಡಿಬಂದರು. ಪ್ರತಿಭಾವಂತ ಬರಹಗಾರರೂ, ಪತ್ರಿಕೋದ್ಯಮಿಯೂ ಆದ ಬೆನಗಲ್ ರಾಮರಾಯರು ಕನ್ನಡ ಸುವಾಸಿನಿ ಮಾಸ ಪತ್ರಿಕೆಯಲ್ಲಿ 'ನಾಡು ನುಡಿ'ಯ ಕುರಿತ ಲೇಖನ ಹಾಗೂ ಸಂಪಾದಕೀಯ ಬರೆದು ಜನಜಾಗೃತಿ ಮೂಡಿಸಿ ಖ್ಯಾತರಾದರು.

1905ರ ಬಂಗಾಲದ ವಿಭಜನೆಯೇ ಮುಂದೆ ಭಾಷಾವಾರು ಪ್ರಾಂತ್ಯ ರಚನೆಯ ಚಳವಳಿಗೆ ಪ್ರಮುಖ ನಾಂದಿ ಎನ್ನಲಾಗುತ್ತದೆ. ಆದರೆ ಕರ್ನಾಟಕದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರಾದ ಈ ಬೆನಗಲ್ ರಾಮರಾಯರು 1903ರಲ್ಲೇ ಧಾರವಾಡದಲ್ಲಿ ಕರ್ನಾಟಕ ಏಕೀಕರಣ ಕುರಿತ ಒಂದು ಸ್ಫೂರ್ತಿದಾಯಕ ಭಾಷಣವನ್ನು ಮಾಡುವುದರೊಂದಿಗೆ ಈ ಕಾರ್ಯಕ್ಕೆ ಚಾಲನೆ ನೀಡಿದರೆನ್ನಬಹುದು.

ಅಖಿಲ ಕರ್ನಾಟಕ ವ್ಯಾಪ್ತಿಯುಳ್ಳ ಕನ್ನಡ ಸಾಹಿತ್ಯ ಪರಿಷತ್ತು 1915ರಲ್ಲಿ ಬೆಂಗಳೂರಿನಲ್ಲಿ ಜನ್ಮತಾಳುವುದರೊಂದಿಗೆ ಏಕೀಕರಣ ಚಳುವಳಿಯತ್ತ ಪ್ರಧಾನ

ತಿರುವೊಂದು ದೊರಕಿದಂತಾಯಿತು. ಮಹಾರಾಜರು ಇದರ ಪೋಷಕರಾಗಿದ್ದರೆ, ದಿವಾನ್ ವಿಶ್ವೇಶ್ವರಯ್ಯನವರು ಇದರ ಅಸ್ತಿತ್ವಕ್ಕೆ ಕಾರಣಕರ್ತರಾದವರಲ್ಲಿ ಒಬ್ಬರಾಗಿದ್ದರು. ಆರಂಭದ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟ ಸಂಬಂಧವನ್ನು ಹೊಂದಿ ಅದರ ಧ್ಯೇಯೋದ್ದೇಶಗಳಿಗಾಗಿ ಇದರಲ್ಲಿ ಮುಂಚೂಣಿಯಲ್ಲಿದ್ದವರು ನಮ್ಮ ಬೆನಗಲ್ ರಾಮರಾಯರು. ಹಾಗೆಯೇ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು ಅಲ್ಲದೆ ಮಂಗಳೂರಿನವರಾದ ಕೆ. ರಾಜಗೋಪಾಲ ಹಾಗೂ ಕೃಷ್ಣರಾಯರು, ಎಚ್. ವಿ. ನಂಜುಂಡಯ್ಯ, ಕೆ. ವಿ. ಪುಟ್ಟಣ್ಣ ಚೆಟ್ಟಿ, ಕವಿ ಶ್ರೀನಿವಾಸರಾಯರು ಮೊದಲಾದವರು. ರಾಜ್ಯದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ಗಳಿಸಿಕೊಡುವುದು ಮತ್ತು ಕನ್ನಡ ಭಾಷೆಯುಳ್ಳ ಪ್ರತ್ಯೇಕ ಕನ್ನಡ ರಾಜ್ಯವನ್ನು ಸ್ಥಾಪಿಸುವುದು ಇದರ ಮುಖ್ಯ ಗುರಿಯಾಗಿತ್ತು. ಇದರ ಮೊದಲ ಅಧಿವೇಶನದಲ್ಲೇ ಕರ್ನಾಟಕ ಏಕೀಕರಣದ ಬೇಡಿಕೆಯನ್ನು ಅಂಗೀಕರಿಸಲಾಯಿತು. ಅಸಂಖ್ಯಾತ ಸದಸ್ಯರನ್ನು ಮತ್ತು ಬೆಂಬಲಿಗರನ್ನು ಪಡೆದ ಈ ಸಂಸ್ಥೆ ವಾರ್ಷಿಕ ಸಮ್ಮೇಳನಗಳ ಮೂಲಕ ಏಕೀಕರಣಕ್ಕಾಗಿ ಹೋರಾಟ ನಡೆಸತೊಡಗಿತು. 1921ರಲ್ಲೇ ಕೇಂದ್ರ ಶಾಸನ ಸಭೆಯಲ್ಲಿ ಕರ್ನಾಟಕ ರಾಜ್ಯದ ಬೇಡಿಕೆಯನ್ನು ಎ.ಬಿ. ಲಟ್ಟೆ ಮತ್ತು ಉಡುಪಿ ರಾಮರಾಯರು ಮಂಡಿಸಿದರಾದರೂ ಬ್ರಿಟಿಷ್ ಸರಕಾರ ಅದನ್ನು ತಳ್ಳಿಹಾಕಿತು. 1929ರಲ್ಲೇ ಬೆನಗಲ್ ಶಿವರಾಯರು ಮತ್ತೊಮ್ಮೆ ಈ ನಿರ್ಣಯ ಮಂಡಿಸಿದರು. ಬ್ರಿಟಿಷ್ ಸರಕಾರ ಇದನ್ನು ವಿರೋಧಿಸಿತಾದರೂ ಇತರ ಸದಸ್ಯರ ಅದ್ಭುತ ಬೆಂಬಲ ದೊರೆಯಿತು. ಕರ್ನಾಟಕ ರಾಜ್ಯದ ಏಕೀಕರಣಕ್ಕಾಗಿ "ಏಕೀಕರಣ ಪರಿಷತ್ತು" ತನ್ನ ಹೋರಾಟವನ್ನು ನಿರಂತರ ಮುಂದುವರೆಸಿತು.

ಬೆನಗಲರ ಏಕೀಕರಣ ಕುರಿತ ನಿರಂತರ ಹೋರಾಟ ನಡೆದೇ ಇತ್ತು. ಅಲ್ಲದೆ ಹತ್ತಾರು ಸಾಹಿತಿಗಳ, ಪತ್ರಕರ್ತರ ಸ್ಫೂರ್ತಿಯ ಸೆಳೆಯಾಗಿದ್ದ ಬೆನಗಲರು 1931ರಲ್ಲಿ ನಡೆದ ದುಂಡು ಮೇಜಿನ ಸಮ್ಮೇಳನ ಸಂದರ್ಭದಲ್ಲಿ ಏಕೀಕರಣ ಕುರಿತು ಸಾಕಷ್ಟು ಚರ್ಚಿಸಿ ಬ್ರಿಟಿಷ್ ಸರಕಾರದ ಗಮನ ಸೆಳೆದರೆನ್ನಲಾಗಿದೆ. ಕರ್ನಾಟಕ ಏಕೀಕರಣ ಯತ್ನದಲ್ಲಿ ಪ್ರವಾಸ ಕೈಗೊಂಡು ಜನಜಾಗೃತಿಯುಂಟು ಮಾಡುವಲ್ಲಿ ನಿರಂತರ ಶ್ರಮಿಸಿದ ದ. ಕ. ಜಿಲ್ಲೆಯವರಾದ ಪಂಜೆ ಮಂಗೇಶರಾಯರು, ಗೋವಿಂದ ಪೈಗಳು, ಶಿವರಾಮ ಕಾರಂತರೇ ಮೊದಲಾದವರಿಗೆ ಮಾರ್ಗದರ್ಶಕರಾದರು.

ಎಸ್. ಯು. ಪಣಿಯಾಡಿ

ಕರ್ನಾಟಕ ಏಕೀಕರಣದಲ್ಲಿ ಶ್ರೀನಿವಾಸ ಉಪಧ್ಯಾಯ ಪಣಿಯಾಡಿಯವರ ಹೆಸರು ಉಲ್ಲೇಖನೀಯ. ಇವರು ಉಡುಪಿಯ ಪಣಿಯಾಡಿಯಲ್ಲಿ ಏಪ್ರಿಲ್ 4, 1897 ರಲ್ಲಿ ಜನಿಸಿದರು. ಇವರ ತಂದೆ ವಾದಿರಾಜ ಪಣಿಯಾಡಿ ಹಾಗೂ ತಾಯಿ ಯಮುನಾ. ಇವರಿಗೆ ಇಬ್ಬರು ಅಣ್ಣಂದಿರು ಹಾಗೂ ಒಬ್ಬಾಕೆ ಸಹೋದರಿಯರಿದ್ದರು. ಅಣ್ಣಂದಿರು ಲಕ್ಷ್ಮಿನಾರಾಯಣ ಉಪಾಧ್ಯಾಯ ಹಾಗೂ ಅನಂತಕೃಷ್ಣ ಉಪಾಧ್ಯಾಯ ಹಾಗೂ ಅಕ್ಕನ ಹೆಸರು ಪದ್ಮಾವತಿ. ತುಳು ಶಿವಳ್ಳಿ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಇವರ ವಂಶಜರು ಉಡುಪಿಯ ಕೊರಂಕ್ರಪಾಡಿಯ ವಿಷ್ಣುಮೂರ್ತಿಯ ಆರಾಧಕರಾಗಿದ್ದರು. ಉಡುಪಿಯ ಸೋದೆ ಮಠದ ಒಣಿಯಲ್ಲಿ ಇಳಿದರೆ ಪೂರ್ವದಲ್ಲಿ ಕಾಣಸಿಗುವುದು ಪಣಿಯಾಡಿಬೈಲು.

ಅಂದಿನ ಕಾಲದಲ್ಲಿ ಉಡುಪಿಯಲ್ಲಿ ಶಿಕ್ಷಣ ವ್ಯವಸ್ಥೆ ಚೆನ್ನಾಗಿದ್ದುದರಿಂದ, ಪಣಿಯಾಡಿಯವರು ತಮ್ಮ ಹೈಸ್ಕೂಲು ಶಿಕ್ಷಣವನ್ನು ಇಲ್ಲೇ ಪಡೆದರು. ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಯನ್ನು ಈ ಸಂದರ್ಭದಲ್ಲಿ ಕಲಿತರು.

ಸಂಸ್ಕೃತದ ಹೆಚ್ಚಿನ ವ್ಯಾಸಾಂಗಕ್ಕಾಗಿ ಮೈಸೂರು ಹಾಗೂ ಆನಂತರ ಮದ್ರಾಸ್‌ಗೆ ತೆರಳಿದರು. ಸಂಸ್ಕೃತ ಪರೀಕ್ಷೆಯಲ್ಲಿ ಬಂಗಾರದ ಪದಕವನ್ನು ಪಡೆದ ಇವರು, ಉದ್ಯೋಗಕ್ಕಾಗಿ ಗುಜರಾತ್‌ಗೆ ತೆರಳಿದರು. ಅಲ್ಲಿ 1920 ರಿಂದ ಮೂರು ವರ್ಷಗಳ ಕಾಲ ಬರೋಡಾದ ಲೈಬ್ರೈರಿಯಲ್ಲಿ ಕೆಲಸ ಮಾಡಿದರು. ಅವರೊಂದಿಗೆ ಜ್ಞಾನ ಸಂಪಾದನೆಯನ್ನು ಮಾಡಿದ ಪಣಿಯಾಡಿಯವರು ಗಾಂಧೀಜಿಯವರ ವಿಚಾರಧಾರೆಗಳಿಂದ, ಅವರು ನಡೆಸುತ್ತಿದ್ದ ಚಳುವಳಿಗಳಿಂದ ಪ್ರಭಾವಿತರಾದರು.

1923 ರಲ್ಲಿ ಉಡುಪಿಗೆ ಹಿಂತಿರುಗಿದರು. ಇಲ್ಲಿ ನೆಲೆ ನಿಂತ ಮೇಲೆ ಉಡುಪಿಯ ಮದ್ವ ಸಿದ್ಧಾಂತ ಗ್ರಂಥಾಲಯದ ಪಾವಂಜೆ ಗುರುರಾಯರ ಮಗಳು ಭಾರತಿಯನ್ನು ವಿವಾಹವಾದರು. 1927ರಲ್ಲಿ ಹುಟ್ಟಿದ ತಮ್ಮ ಚೊಚ್ಚಲ ಮಗನಿಗೆ ಅಜ್ಜನ ಹೆಸರನ್ನೇ (ವಾದಿರಾಜ) ಇಟ್ಟರು. ಈ ಅವಧಿಯಲ್ಲಿ ಸಾರ್ವಜನಿಕ ರಂಗದಲ್ಲಿ, ಸಾಂಸ್ಕೃತಿಕ ರಂಗದಲ್ಲಿ, ತುಳು ಸಂಘಟನೆಯ ಕಾರ್ಯದಲ್ಲಿ ಹಾಗೂ ನಾಡಿನ ಸ್ವಾತಂತ್ರ್ಯ ಸಮರದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡರು. ಉಡುಪಿಯಲ್ಲಿ ಸಪ್ಲೈ ಏಜನ್ಸಿ, ಅಂಗಡಿ, ಖಾದಿ ಭಂಡಾರ,

ತುಳುನಾಡು ಪ್ರೆಸ್ ಮೊದಲಾದುವುಗಳನ್ನು ಆರಂಭಿಸಿದರು. ಸಪ್ಲೈ ಏಜನ್ಸಿ ವಿಸ್ತರಿಸಿ ತುಳುನಾಡು ಬ್ಯಾಂಕ್ ಆಫ್ ಸಪ್ಲೈ ಏಜನ್ಸಿ (ರಿ) 1933 ರಲ್ಲಿ ಸ್ಥಾಪಿಸಿದರು. ಈ ಬ್ಯಾಂಕು 1939 ರವರೆಗೆ ಉತ್ತಮವಾಗಿಯೇ ಕಾರ್ಯ ನಿರ್ವಹಿಸುತ್ತಿತ್ತು. 1940ರಲ್ಲಿ ಆರ್ಥಿಕ ಮುಗ್ಗಟ್ಟಿನಿಂದಾಗಿ ಬ್ಯಾಂಕ್ ಮುಚ್ಚಲ್ಪಟ್ಟಿತು. ಈ ಸಂದರ್ಭದಲ್ಲಿ ತುಂಬಾ ಕಷ್ಟ ನಷ್ಟ ಅನುಭವಿಸಿದರು. ಹೆಂಡತಿ ಮಕ್ಕಳನ್ನು ಕರೆದುಕೊಂಡು ಮದುರೈಗೆ ಹೋಗಿ ನೆಲೆಸಿದರು. 1945ರಲ್ಲಿ ಮಡದಿ ಭಾರತಿಬಾಯಿಯವರು ನಿಧನರಾದರು. 1940 ರಲ್ಲಿ ಉಡುಪಿಯನ್ನು ಬಿಟ್ಟ ಪಣಿಯಾಡಿಯವರು, ಮತ್ತೆಂದೂ ಉಡುಪಿಗೆ ಬರಲೇ ಇಲ್ಲ.

<u>ಪಣಿಯಾಡಿಯವರ ತುಳು ಸಾಹಿತ್ಯ ಸೇವೆ :</u> ತುಳುನಾಡು ಭೌಗೋಳಿಕವಾಗಿ ಒಂದು ಚಿಕ್ಕ ಪ್ರದೇಶ. ಇಲ್ಲಿನ ಜನರ ಆಡು ಭಾಷೆ ತುಳು. ಬ್ರಿಟಿಷರ ಆಡಳಿತಾವಧಿಯಲ್ಲಿ "ಸೌತ್ ಕೆನರಾ" ಎಂಬ ಹೆಸರಿನಲ್ಲಿ ಮದ್ರಾಸ್ ಪ್ರಾಂತ್ಯದ ಆಡಳಿತಕ್ಕೊಳಪಟ್ಟಿತ್ತು. ಬ್ರಿಟಿಶರು ಮಾಡಿದಂತಹ ಪ್ರಾಂತೀಕರಣವು ಯಾವುದೇ ವ್ಯವಸ್ಥೆಗೆ ಒಳಪಟ್ಟಿರಲಿಲ್ಲ. ಅದಕ್ಕೆ ಭೌಗೋಳಿಕವಾದ, ಜನಾಂಗೀಯವಾದ ಅಥವಾ ಭಾಷಿಕವಾದ ತತ್ವದ ಆಧಾರವಿರಲಿಲ್ಲ. ಆದುದರಿಂದ, ಒಂದು ರೀತಿಯಲ್ಲಿ ಅತೀ ನಿರ್ಲಕ್ಷಿತ ಕ್ಷೇತ್ರವೂ ಆಗಿದ್ದಿತು. ಇಲ್ಲಿನ ಜನರ ಆಡು ಭಾಷೆ ತುಳು, ಮಾತೃಭಾಷೆ ತುಳುವೆಂದು ಅಧಿಕಾರ ವರ್ಗದವರ ಗಮನಕ್ಕೂ ಬಂದಿರಲಿಲ್ಲ. ಯಾವುದೇ ಸಂದರ್ಭದಲ್ಲಿ ನಮ್ಮ ಭಾಷೆ, ನಮ್ಮ ಸಂಸ್ಕೃತಿ, ನಮ್ಮ ಕ್ಷೇತ್ರದ ಅಭಿವೃದ್ಧಿಯನ್ನು ಕಡೆಗಣಿಸಲ್ಪಟ್ಟಾಗ , ಸ್ವಾಭಿಮಾನದ ಸೆಲೆ ಜಾಗೃತಗೊಳ್ಳುವುದು ಸಹಜ. ಗುಜರಾತಿನಿಂದ ಬಂದು 1923 ರಲ್ಲಿ ಉಡುಪಿಯಲ್ಲಿ ನೆಲೆ ನಿಂತಾಗ ಪಣಿಯಾಡಿಯವರು ಮೊದಲು ಗಮನಿಸಿದ್ದು ತಮ್ಮ ಮಾತೃ ಭಾಷೆಯ ಸ್ಥಿತಿ ಗತಿಯನ್ನು ಅವರಿಗೆ ತಮ್ಮ ಮಾತೃಭಾಷೆ ತುಳುವಿನ ಕುರಿತಂತೆ ವಿಶೇಷ ಪ್ರೀತಿ, ಮಮಕಾರ, ಸ್ವಾಭಿಮಾನವಿದ್ದಿತು. ಅವರೇ ಹೇಳುವಂತೆ ನನಗೆ ಚಿಕ್ಕಂದಿನಿಂದಲೂ ತುಳು, ತುಳುವರ ಮತ್ತು ತುಳು ಭಾಷೆಯ ಬಗ್ಗೆ ಬಹಳ ಅಭಿಮಾನ, ಯಾರಾದರೂ ಅವಮಾನಿಸಿದರೆ ನನ್ನ ಮನಸ್ಸಿಗೆ ಬೇಸರವಾಗುತ್ತಿತ್ತು. ಎಂದೆನ್ನುತ್ತಿದ್ದರು. ತುಳುವೆಂದರೆ ಕರ್ನಾಟಕ, ಆಂಧ್ರ, ತಮಿಳು, ಬಂಗಾಳಿ, ಗುಜರಾತಿ ಶಬ್ದಗಳನ್ನು ಅರ್ಥೈಸಿಕೊಳ್ಳುವಂತೆ ಇರುವ ಒಂದು ಭಾಷೆ, ಇದರಲ್ಲಿ ಯಾವುದೇ ಕೀಳು ಭಾವನೆ ಸಲ್ಲದು ಎನ್ನುತ್ತಿದ್ದರು. ಜರ್ಮನಿಯಿಂದ ಬಂದ ಮಿಷನರಿಯವರು ತುಳು ಭಾಷೆ ಕಲಿತರು. ತುಳುವಿನಲ್ಲಿ ಪುಸ್ತಕ ಬರೆದರು. ತುಳುವಿನಲ್ಲಿ ಅರ್ಥಕೋಶ (ನಿಘಂಟು)

ತಯಾರಿಸಿದರು. ತುಳು ಒಂದು ಉತ್ತಮ ಭಾಷೆಯೆಂದು ಹೊಗಳಿದರು. ಇವರಿಂದ ಪ್ರಭಾವಿತರಾದ ಪಣಿಯಾಡಿಯವರು ತಮ್ಮ ಮಾತೃಭಾಷೆಯ ಕುರಿತಾಗಿ ಏನಾದರೂ ಕೆಲಸ ಮಾಡಲೇಬೇಕೆಂದು ಯೋಚಿಸಿದರು. ಅಲ್ಲದೆ ಗುಜರಾತಿನಲ್ಲಿದ್ದಾಗ ಗಾಂಧೀಜಿಯವರು ಕೂಡಾ ತಮ್ಮ ವಿಚಾರಧಾರೆಗಳನ್ನು ಲೇಖನಿಗಳ ಮೂಲಕ ಮಾತೃಭಾಷೆಯಲ್ಲಿಯೇ ಬರೆಯುತ್ತಿದ್ದುದನ್ನು ಗಮನಿಸಿದ್ದರು. ತಮ್ಮ ಸಾಹಿತ್ಯ ಸೇವೆಯನ್ನು ತುಳುಭಾಷೆಯಲ್ಲಿ ರಚಿಸಿದರು. 1936ರಲ್ಲಿ ಇದನ್ನು ಪ್ರಕಟಿಸಿದರು. 1930 ರಲ್ಲಿ 'ಸತೀ ಕಮಲೆ' ಎನ್ನುವ ಕಾದಂಬರಿಯನ್ನು ತುಳುಭಾಷೆಯಲ್ಲಿ ರಚಿಸಿದರು. 1936 ರಲ್ಲಿ ಇದನ್ನು ಪ್ರಕಟಿಸಿದರು. 1930 ರಲ್ಲಿ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ವೆಲ್ಲೂರಿನ ಜೈಲಿಗೆ ಸೇರಲ್ಪಟ್ಟಾಗ 'ತುಳು ವ್ಯಾಕರಣ' ಬರೆದರು. ಇದು ತುಳುವಿನ ವ್ಯಾಕರಣದ ಎರಡನೇಯ ಪುಸ್ತಕ. ತಮ್ಮ ಈ ರಚನೆಗೆ ಮಿಷನರಿಗಳು ಪ್ರೇರಕರು ಎನ್ನುತ್ತಾರೆ. ಎಸ್. ಯು. ಪಣಿಯಾಡಿಯವರು. ಯಾಕೆಂದರೆ, ವಿದೇಶಿಯವರಾಗಿದ್ದರೂ ತುಳುವಿಗಾಗಿ ಅವರು ಮಾಡಿದ ಕೆಲಸ ಅಪೂರ್ವ. ಅಲ್ಲದೆ Dr. Caldwell ತನ್ನ "Comparative grammar of Dravidian Languages" ನಲ್ಲಿ Tulu is one of the most highly developed languages of the Dravidian Languages Family ಎನ್ನುತ್ತಾರೆ. ತುಳು ಸಾಹಿತ್ಯ ಸೇವೆಯನ್ನು ಬಹಳಷ್ಟು ಹುರುಪಿನಿಂದ, ಹುಮ್ಮಸ್ಸಿನಿಂದ ಮಾಡಿದರು. ಪೊಳಲಿ ಶೀನಪ್ಪ ಹೆಗ್ಡೆಯವರು ಪಣಿಯಾಡಿಯವರ ತುಳು ಸಾಹಿತ್ಯ ಚಟುವಟಿಕೆಗಳಿಗೆ ಬೆಂಬಲವನ್ನಿತ್ತರು.

ತುಳು ಬಾಷೆಯ ಅಭಿವೃದ್ಧಿಗಾಗಿ ತುಳು ಚಳವಳಿಯನ್ನು ಆರಂಭಿಸಿದರು. 'ತುಳುವ ಸಾಹಿತ್ಯ ಮಾಲೆ' ಪುಸ್ತಕ ಪ್ರಕಟಣೆ ಇವರ ಬಹು ದೊಡ್ಡ ಸಾದನೆ. ಇದರಡಿಯಲ್ಲಿ ಪುಸ್ತಕಗಳನ್ನು ಪ್ರಕಟಿಸಿದರು. ಅವುಗಳೆಂದರೆ:-

1. 'ತುಳು ಕಿಟ್ನರಾಜಿ ಪರ್ಸಂಗೊ'-ಬಡಕಬೈಲು ಪರಮೇಶ್ವರಯ್ಯ (೧೯೨೯)
2. ತುಳುವಾಲ ಬಲಿಯೇಂದ್ರ - ಪೊಳಲಿ ಶೀನಪ್ಪ ಹೆಗ್ಡೆ (೧೯೨೯)
3. ಅಳಿಯ ಸಂತಾನ ಕಟ್ಟದ ಗುಟ್ಟು - ಸತ್ಯಮಿತ್ರ ಬಂಗೇರ (೧೯೨೯)
4. ಕಾನಿಗೆ - ಕೆ. ಬಿ. ನಾರಾಯಣ ಶೆಟ್ಟಿ, ಕಿಲ್ಲೆ (೧೯೩೨)
5. ತುಳು ವ್ಯಾಕರಣ - ಎಸ್. ಯು. ಪಣಿಯಾಡಿ (೧೯೩೨)

6. ಜನಮರ್ಲ್ - ಮಾಧವ ತಿಂಗಳಾಯ (೧೯೩೩)
7. ಮದ್ಮಮಳತ್ ಮದ್ಮಯೆ - ಎಂ. ವಿಠಲ ಹೆಗ್ಡೆ (೧೯೩೪)
8. ಬಂಗಾರ್‌ದಂಗಿತ ಕತೆ -ಪೊಳಲಿ ಶೀನಪ್ಪ ಹೆಗ್ಡೆ (೧೯೩೩)
9. ತುಳು ಪದ್ಯಮಾಲಿಕೆ.
10. ಮಿತ್ರ ನಾರಾಯಣ ಕತೆ - ಪೊಳಳಿಶೀನಪ್ಪ ಹೆಗ್ಡೆ (೧೯೩೫)
11. ಸತೀ ಕಮಲೆ - ಎಸ್. ಯು. ಪಣಿಯಾಡಿ (೧೯೩೬)
12. ಕೃಷ್ಣ ಸಂಧಾನ (ಯಕ್ಷಗಾನ)
13. ಬಲೀಂದ್ರ (ಕತೆ)

ಹೀಗೆ, ತುಳು ಸಾಹಿತ್ಯ ಮಾಲೆಯಡಿಯಲ್ಲಿ ಪಣಿಯಾಡಿಯವರು ತುಳುವಿನ ಸಾಹಿತ್ಯ ರಚನೆಗೆ ಅಡಿಪಾಯವಿಟ್ಟರು. ಉಡುಪಿಯಿಂದ ಹೊರಬರುತ್ತಿದ್ದ 'ನವಯುಗ' ಪತ್ರಿಕೆಯಲ್ಲಿ ತುಳು ಅಂಕಣ ಕೆಲ ಸಮಯ ಬರುತ್ತಿತ್ತು. ತಮ್ಮ ಸಪ್ಲಾ ಏಜನ್ಸಿಯಿಂದಲೂ ಕೆಲವು ಪುಸ್ತಕಗಳನ್ನು ಕೊರಡ್ಕಲ್ ಶ್ರೀನೀವಾಸ ರಾವ್ ಪ್ರಕಟಿಸಿದರು. ಪಣಿಯಾಡಿಯವರು ತಮ್ಮ ತುಳು ಚಳವಳಿಯ ಮಿತ್ರರಿಗೆ ಕಾಗದಗಳನ್ನು ತುಳುವಲ್ಲಿಯೇ ಬರೆಯುತ್ತಿದ್ದರು. ಅಷ್ಟು ಅವರಿಗೆ ಭಾಷಾಭಿಮಾನವಿತ್ತು.

ಹೀಗೆ ಪಣಿಯಾಡಿಯವರು, ತುಳು ಸಾಹಿತ್ಯ ಸೇವೆಯನ್ನು ಅವಿರತವಾಗಿ ಮಾಡುತ್ತಲೇ ಬಂದಿದ್ದರು. ತುಳು ಸಂಸ್ಕೃತಿ, ತುಳು ಭಾಷೆ ಕನ್ನಡಕ್ಕಿಂತ ಕಡಿಮೆಯೇನಲ್ಲ ಎಂದು ಮೊದಲು ಸಾರಿದವರು ಶ್ರೀ. ಎಸ್. ಯು. ಪಣಿಯಾಡಿಯವರು.

<u>ಸ್ವಾತಂತ್ರ್ಯ ಚಳವಳಿ ಮತ್ತು ಪಣಿಯಾಡಿಯವರು</u>

ಸ್ವಾತಂತ್ರ್ಯ ಚಳವಳಿಯ ಜತೆಗೆ ತುಳು ಚಳುವಳಿಯನ್ನು ಆರಂಭಿಸಿದ ಪಣಿಯಾಡಿಯವರು, ಜನತೆಯಲ್ಲಿ ಸ್ವಾಭಿಮಾನದ ಸೆಲೆಯನ್ನು ಬಿಂಬಿಸುವ ಪ್ರಯತ್ನವನ್ನು ಹಲವಾರು ರೀತಿಯಲ್ಲಿ ಮಾಡಿದರು. ಲೇಖನಿಗಳ ಮೂಲಕ, ತಮ್ಮ ಬಿಚ್ಚು ನುಡಿಗಳನ್ನು ಜನತೆಯ ಮುಂದೆ ತೆರೆದಿಟ್ಟರು. ಅಂದು ಪ್ರಕಟವಾಗುತ್ತಿದ್ದ 'ಅಂತರಂಗ' ಒಂದು ಜನಪ್ರಿಯ ಪತ್ರಿಕೆಯಾಗಿತ್ತು. ಅದರ ಮುಖೇನ ತಮ್ಮ ಸ್ವದೇಶಾಭಿಮಾನವನ್ನು ವ್ಯಕ್ತ ಪಡಿಸುತ್ತಿದ್ದರು.

ಪಣಿಯಾಡಿಯವರು ಉಡುಪಿಯ ಸಾಂತ್ಯಾರ್ ಅನಂತ ಪದ್ಮನಾಭ ಭಟ್ರು, ಸಿ.ಎ.ಪೈ ಕುಟುಂಬಿಕರು ಹಾಗೂ ಪಾಂಗಾಳ ನಾಯಕ್ ಕುಟುಂಬದ ಜೊತೆಗೆ ಸ್ವಾತಂತ್ರ್ಯ ಚಳುಳಿಗೆ ಸೇರಿದರು. ಚಕ್ರವರ್ತಿ ರಜಗೋಪಾಲಾಚಾರ್ಯ. ಕೆ.ಕೆ.ಶೆಟ್ಟಿ, ಪೊಳಲಿ ಶೀನಪ್ಪ ಹೆಗ್ಡೆ, ಎನ್. ಎಸ್. ಕಿಲ್ಲೆ ಹೀಗೆ ಬಹಳಷ್ಟು ಜನ ಇವರ ಜತೆಯಾದರು. 1930 ರ ಉಪ್ಪಿನ ಸತ್ಯಾಗ್ರಹ ಸಂಧರ್ಭದಲ್ಲಿ ಪಣಿಯಾಡಿಯವರು, ಹಿರಿಯಡ್ಕ, ರಾಮರಾಯ ಮಲ್ಯ, ಕಾರ್ನಾಡ ಸದಾಶಿವ ರಾಯರು, ಎ. ಎಂ. ಉಮೇಶರಾಯರು, ಆರ್. ಕೆ. ಪ್ರಭು, ಶೇಕ್ ಯೂಸಫ್ ಸಾಹೇಬ, ಕೃಷ್ಣರಾವ್ ಕೊಡ್ಗಿ, ಅಣ್ಣಪ್ಪ ಕಾರಂತ ಮೊದಲಾದವರೆಲ್ಲಾ ಜೈಲು ಸೇರಿದರು. ಪಣಿಯಾಡಿಯವರು ಮೊದಲು ತಿರುಚಿನಾಪಳ್ಳಿ ಜೈಲಿನಲ್ಲಿದ್ದರು. ಆ ನಂತರ ವೆಲ್ಲೂರಿನ ಜೈಲಿಗೆ ಇವರನ್ನು ಕರೆ ತರಲಾಯಿತು. ಇಲ್ಲಿ ಪೊಳಲಿ ಶೀನಪ್ಪ ಹೆಗ್ಡೆ ಹಾಗೂ ಎನ್. ಎಸ್. ಕಿಲ್ಲೆಯವರೂ ಇದ್ದರು. ಜೈಲಿನ ದಿನಗಳು ಕನಸಿನಂತೆ ಕಳೆದು ಹೋಯಿತೆಂದು ಪಣಿಯಾಡಿಯವರು ನೆನಪಿಸಿಕೊಳ್ಳುತ್ತಿದ್ದರಂತೆ ಗಾಂಧೀಜಿ 1934 ರಲ್ಲಿ ದಲಿತರ ಸಮಸ್ಯೆಯ ಬಗ್ಗೆ ಪ್ರಚಾರ ಮಾಡಲು ಜಿಲ್ಲೆಗೆ ಆಗಮಿಸಿದ್ದಾಗ, ಪಣಿಯಾಡಿಯವರ ಮಡದಿ ತಮ್ಮಲ್ಲಿದ್ದ ಬಂಗಾರದ ಆಭರಣಗಳನ್ನು ಗಾಂಧೀಜಿಯವರಿಗೆ ದಾನವಾಗಿ ನೀಡಿದ್ದರಂತೆ. 1937 ರಲ್ಲಿ ಜವಾಹರ್‌ಲಾಲ್ ನೆಹರು ಜಿಲ್ಲೆಯ ಪ್ರವಾಸ ಕೈಗೊಂಡಾಗ, ಪಣಿಯಾಡಿಯವರಿಗೆ ತಮ್ಮ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಲು ಆಹ್ವಾನವಿತ್ತಿದ್ದರು. ಪಣಿಯಾಡಿಯವರು ತಮ್ಮ ಮಗನಿಗೆ ಜವಾಹರ್ ಎಂದು ಹೆಸರಿಟ್ಟರು. ಹೀಗೆ ಪಣಿಯಾಡಿಯವರು ತುಳುವರಲ್ಲಿ ಸ್ವದೇಶಾಭಿಮಾನವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು.

ತುಳು ಚಳವಳಿಯ ಮುಖಾಂತರಸಂಘಟನೆಯನ್ನು ಮಾಡಿದ್ದರು. ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಗಿ, ಜೈಲನ್ನೂ ಸೇರಿದರು.

ತುಳುವ ಮಹಾಸಭೆಯ ಸ್ಥಾಪನೆ :-

ತುಳುನಾಡಿಗೆ, ತುಳು ಭಾಷೆ, ನಡೆ - ನುಡಿಗೆ, ರಾಷ್ಟ್ರೀಯ ಮನ್ನಣೆ, ಸಿಗಬೇಕೆಂದು ಸಮರ್ಪಣಾ ಭಾವದಿಂದ ಹೋರಾಡಿದವರು ಶ್ರೀ ಎಸ್. ಯು ಪಣಿಯಾಡಿಯವರು. ಅದಕ್ಕಾಗಿ 1928 ರಲ್ಲಿ ತುಳುವ ಮಹಾಸಭೆಯನ್ನು ಸ್ಥಾಪನೆ ಮಾಡಿದರು. ಮೊದಲ ವರ್ಷದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿದ್ದವರು ಅಂಜಾರ್ ರಾಮಣ್ಣ ಹೆಗ್ಡೆ ಮತ್ತು ಕಾರ್ಯದರ್ಶಿಯಾಗಿದ್ದವರು ಎಸ್.ಯು. ಪಣಿಯಾಡಿಯವರು. ಸಂಘಟನೆಯ ಮುಖಾಂತರ

ತುಳು ಭಾಷೆ, ತುಳುನಾಡಿನ ಸಂಸ್ಕೃತಿ ಪರಂಪರೆಯು, ಹಿರಿಮೆ ಗರಿಮೆಗಳನ್ನು ಜನ ಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಹೇಳುವುದು ಇದರ ಉದ್ದೇಶಗಳಲ್ಲೊಂದಾಗಿತ್ತು. 30.09.1928 ರಂದು ಅಚ್ಚಾದ ತುಳುವ ಮಹಾಸಭೆಯ ವಿಜ್ಞಾಪನೆಯಲ್ಲಿ ನೆಹರೂ ಕಮಿಟಿ ವರದಿಯ ಎರಡು ಸಾಲುಗಳುದ್ದವು - "The mere fact that the people living in a particular area feel that they are a unit and desire to develop their culture is an important consideration even though there may be no sufficient historical or cultural justification for their demands" ಸ್ವಾತಂತ್ರ್ಯ ಬಂದ ನಂತರ ಆಯಾ ಭಾಗಗಳ ಜನರ ಮಾತೃ ಭಾಷೆಯಲ್ಲಿಯೇ ಆಡಳಿತ ನಡೆಯಬೇಕು ಎನ್ನುವುದು ನೆಹರೂ ಕಮಿಟಿ ಮರದಿಯ ತಿರುಲಾಗಿತ್ತು.

ಅಂದರೆ ತುಳುನಾಡಿನ ಅಭಿವೃದ್ಧಿಗಾಗಿ ಪ್ರತ್ಯೇಕವಾದ ತುಳು ರಾಜ್ಯದ ಕನಸು ಅವರು ಕಾಣುತ್ತಿದ್ದರೆಂಬುದು ಸ್ಪಷ್ಟ ತುಳುವರು ಬ್ರಿಟಿಷರ ಆಡಳಿತಾವಧಿಯಲ್ಲಿ ಅಲ್ಲಲ್ಲಿ ಚದುರಿ ಹೋಗಿದ್ದರು. ಹಾಸನ, ಕಡೂರು, ಶಿವಮೊಗ್ಗ, ಮಲಬಾರ್, ಕೊಚ್ಚಿ ತಿರುವಾಂಕೂರು, ಮುಂಬಯಿ, ಮದ್ರಾಸ್ ಮುಂತಾದೆಲ್ಲೆಡೆ ನೆಲೆಸಿದ್ದರು.

ತುಳುವ ಮಹಾಸಭೆಯ ವಿಜ್ಞಾಪನೆಯಲ್ಲಿ ಪಣಿಯಾಡಿಯವರು ಬರೆದ ಒಂದು ಲೇಖನದಲ್ಲಿ ತುಳು ಬಾಷೆ, ತುಳು ಚಳವಳಿ,ತುಳುನಾಡಿನ ಬಗ್ಗೆ ಅವರಿಗಿದ್ದ ಸುಸ್ಪಷ್ಟ ಅಭಿಪ್ರಾಯ ತಿಳಿಸಿದ್ದಾರೆ.

ತುಳು ನಾಡಿನ ಸಂಘಟನೆ, ತುಳು ಭಾಷೆಯ ಬೆಳವಣಿಗೆ ಹಾಗೂ ತುಳುನಾಡನ್ನು ಮರುಸ್ಥಾಪನೆ ಮಾಡುವುದು ಇದರ ಉದ್ದೇಶವಾಗಿತ್ತು. ಪಣಿಯಾಡಿಯವರಿಗೆ ಆಗಿನ ಸಾಹಿತಿಗಳಿಂದ ಬಂದ ಪತ್ರಗಳಲ್ಲಿ 28-03-1929 ರಂದು ಬಿ. ಮೋನಪ್ಪ ತಿಂಗಳಾಯರು ಬರೆದ ಪತ್ರ ಇಲ್ಲಿ ಉಲ್ಲೇಖನೀಯ ತಿಂಗಳಾಯರು ಬರೆಯುತ್ತಾ, ತುಳುವಿನಲ್ಲೊಂದು ರಾಷ್ಟ್ರಗೀತೆಯನ್ನು ರಚಿಸಿದ್ದೇನೆ. ಇದು ತುಳುನಾಡಿನ ನೈಸರ್ಗಿಕ ಚೆಲುವು, ನದಿ, ಗುಡ್ಡ-ಬೆಟ್ಟಗಳ ವರ್ಣನೆಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ.

ಇಲ್ಲಿ ಕಂಡು ಬರುವ ವಿಚಾರವೆಂದರೆ, ಕರ್ನಾಟಕ ಏಕೀಕರಣಕ್ಕೆ ಪೂರಕವಾಗಿ ರಚನೆಗೊಂಡು ಹುಯಿಲಗೋಳ ನಾರಾಯಣರಾಯರ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಯಂತೆಯೇ ತಿಂಗಳಾಯರಿಂದ ರಚಿತವಾದ ತುಳು ರಾಷ್ಟ್ರ ಗೀತೆ, ತುಳುವ

ಮಹಾಸಭೆಯ ಸದಸ್ಯರಲ್ಲಿ ತುಳುವ ರಾಜ್ಯದ ಸ್ಥಾಪನೆಯ ಗುರಿ ಸ್ಪಷ್ಟವಾಗಿತ್ತು ಎನ್ನುವುದನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ ಹೇಳುವುದಾದರೆ, ಬನ್ನಂಜೆ ರಾಮಾಚಾರ್ಯರ ಪ್ರಕಾರ, ಪಣಿಯಾಡಿಯವರಿಗೆ ಭಾಷೆಯ ಆಧಾರದಲ್ಲಿ ಪ್ರಾಂತ್ಯ ನಿರ್ಮಾಣಕ್ಕೆ ಅವರ ಒಪ್ಪಿಗೆ ಇತ್ತು. ತುಳುನಾಡು ಒಂದು ಪ್ರತ್ಯೇಕ ರಾಜ್ಯವಾಗಬೇಕೆಂದು ಅವರು ಬಹಳ ಜೋರಾಗಿಯೇ ವಾದಿಸುತ್ತಿದ್ದರೆಂದು ನೆನಪಿಸಿಕೊಳ್ಳುತ್ತಾರೆ. ಆದರೆ ಮುಂದೆ ಕರ್ನಾಟಕ ಏಕೀಕರಣದವರ, ಕೂಗು ದೊಡ್ಡದಾಗಿ, ತುಳು ಚಳವಳಿಯ ಕೂಗು ಕ್ಷೀಣವಾಗತೊಡಗಿತು.

ಆದರೆ ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಪ್ರತ್ಯೇಕ ತುಳು ರಾಜ್ಯದ ಕನಸು ಕಾಣುತ್ತಿದ್ದ ಪಣಿಯಾಡಿಯವರು, ಮುಂದೆ ಕರ್ನಾಟಕದ ಏಕೀಕರಣದ ಪ್ರಶ್ನೆ ಬಂದಾಗ, ಅದನ್ನು ತ್ಯಜಿಸಿ, ವಿಶಾಲ ಕರ್ನಾಟಕದ ಏಕೀಕರಣಕ್ಕಾಗಿ ಬೆಂಬಲವನ್ನು ನೀಡಿದರು. ಪಣಿಯಾಡಿಯವರು ಬಹಳ ಮಹತ್ವಾಕಾಂಕ್ಷಿಯಾಗಿದ್ದರು. ಬಹುಶಃ ದೃಢ ನಿಲುವನ್ನು ತಾಳುತ್ತಿದ್ದರೆ, ಭಾಷಾ ಅಧಾರದಲ್ಲಿ ಪ್ರತ್ಯೇಕ ತುಳುರಾಜ್ಯ ಸ್ಥಾಪನೆಯಾಗುತ್ತಿತ್ತು. ಆದರೆ ಸಂಕುಚಿತ ಮನೋಭಾವನೆಯಿಂದ ಹೋರಾಡದೆ, ಅಖಂಡ ಕರ್ನಾಟಕದ ಏಕೀಕರಣಕ್ಕಾಗಿ, ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಅಲ್ಲದೆ 1940 ರ ಹೊತ್ತಿಗೆ ತಮ್ಮ ವೃತ್ತಿಯಲ್ಲಿ ತೀವ್ರ ಸೋಲನ್ನನುಭವಿಸಿದ್ದರಿಂದ ಊರು ಬಿಟ್ಟು ಮದ್ರಾಸ್‌ಗೆ ಹೋಗಿ ನೆಲೆನಿಂತ ಮೇಲೆ ತಮ್ಮ ಕನಸನ್ನು ಬಲಿಕೊಟ್ಟರು.

ಪಣಿಯಾಡಿಯವರು ತಮ್ಮ ವ್ಯವಹಾರಗಳಲ್ಲಿ ತೀವ್ರ ಆರ್ಥಿಕ ನಷ್ಟವನ್ನನುಭವಿಸಿದರು. ಅವರು ನಡೆಸುತ್ತಿದ್ದ ತುಳುನಾಡು ಬ್ಯಾಂಕು ಆರ್ಥಿಕ ಮುಗ್ಗಟ್ಟಿನಿಂದಾಗಿ ಮುಚ್ಚಲ್ಪಟ್ಟಿತು. ಪ್ರತ್ಯೇಕ ತುಳು ಭಾಷಾ ಪ್ರಾಂತ್ಯದ ಸ್ಥಾಪನೆಯ ಉತ್ಕಟ ಇಚ್ಛೆಯಿದ್ದರೂ, ಅವರಿಗೆ ಸೂಕ್ತ ಸಹಕಾರ, ಬೆಂಬಲ ಸಿಗದೆ ಹೋದುದರಿಂದ ತುಳು ಚಳವಳಿಗೆ ಹಿನ್ನಡೆ ಉಂಟಾಯಿತು. ಒಂದು ವೇಳೆ ಪಣಿಯಾಡಿಯವರಿಗೆ ಸಾಕಷ್ಟು ಬೆಂಬಲ ಸಿಗುತ್ತಿದ್ದರೆ ಪ್ರತ್ಯೇಕ ತುಳುರಾಜ್ಯ ಅಸ್ತಿತ್ವಕ್ಕೆ ಬರುತ್ತಿತೇನೋ !

ತುಳು ಚಳವಳಿಯೆಂದರೆ ಕರ್ನಾಟಕಕ್ಕೆ ವಿರುದ್ಧವಾದ ಚಳವಳಿ ಅಂತ ಅನೇಕ ಜನ, ಕೊಂಕಣಿಯವರ ವಿರುದ್ದದ ಚಳವಳಿ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಆದರೆ, ಸತ್ಯ ಸಂಗತಿ ಮಾತ್ರ ಹಾಗಿಲ್ಲ. ಇದು ತುಳುನಾಡಿನ ಆತ್ಮೋದ್ಧಾರಕ್ಕಾಗಿ ಮಾತ್ರ ಚಳುವಳಿ ಎಂದು ಪಣಿಯಾಡಿಯವರು ಒಂದೆಡೆ ಬರೆಯುತ್ತಾರೆ.

ತುಳುನಾಡಿನ, ತುಳುವರ, ತುಳು ಭಾಷೆಯ ಕುರಿತಂತೆ ಅವರಿಗಿದ್ದ ಅಪರಿಮಿತ ಅಭಿಮಾನವಿಲ್ಲಿ ವ್ಯಕ್ತವಾಗುವುದು.

ಜಿನರಾಜ ಹೆಗ್ಡೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖ್ಯಾತಿವೆತ್ತ ಹಿರಿಯ ಜೈನ ಮನೆತನಗಳಲ್ಲಿ ಬಲ್ಲಾಳ ಮನೆತನವೂ ಒಂದು. ಶ್ರೀ.ಕೆ. ಬಿ. ಜಿನರಾಜ ಹೆಗ್ಡೆಯವರು ಜನ್ಮ ತಾಳಿದುದು ದಿನಾಂಕ 24.02.1902ರಂದು ಕಾರ್ಕಳ ತಾಲೂಕಿನ ಬಾರಾಡಿ ಬೀಡಲ್ಲಿ. ಇದು ಜಿನರಾಜರ ಅಜ್ಜಿಮನೆ, ಅರ್ಥಾತ್ ಹೆಗ್ಡೆಯವರ ತಾಯಿಯ ತವರು. ಇವರ ತಂದೆಯಾದ ಕುಕ್ಕುಂದೂರು ಗುಡ್ಡೆಗುತ್ತಿನ ಶ್ರೀ. ಪೂವಣಿ ಮುದ್ಯರು, ಜೈನ ಸಮಾಜದ ಹಿರಿಯ ಮುಂದಾಳುವಾಗಿದ್ದರು. ಒಂದೆಡೆಯಿಂದ ಕುಕ್ಕುಂದೂರು ಗುಡ್ಡೆಗುತ್ತಿನ ಮನೆತನದ, ಹಾಗೂ ತಂದೆಯಿಂದ ಪಡೆದ ನಾಯಕತ್ವ ಗುಣ ಎರಡರ ಸಮ್ಮಿಶ್ರಣದಲ್ಲಿ ಉತ್ತಮ ಸಂಸ್ಕಾರಗಳನ್ನು ಕಲಿತು ಹೆಗ್ಗಡೆಯವರು ಮುಂದೆ ಶ್ರೇಷ್ಠ ಮುಂದಾಳತ್ವ ಪಡೆದುದರಲ್ಲಿ ಸಂಶಯವೇನಿಲ್ಲ. ಸೋದರ - ಸೋದರಿ ಮತ್ತು ಕುಟುಂಬಿಕರ ಪ್ರೀತಿ - ಆಶೀರ್ವಾದಗಳ ಸುಖದ ಬದುಕನ್ನು ಕಂಡವರು ಶ್ರೀ ಹೆಗ್ಡೆಯವರು. ಆಗಿನ ಕಾಲದಲ್ಲಿ ಎಷ್ಟೇ ಸಿರಿ - ಸಂಪತ್ತಿದ್ದರೂ, ಶಿಕ್ಷಣದ ಅವಕಾಶ ಲಭಿಸುತ್ತಿದ್ದುದು ಕೆಲವರಿಗೆ ಮಾತ್ರ ಶ್ರೀ ಕೆ.ಬಿ. ಜಿನರಾಜ ಹೆಗ್ಡೆಯವರು ತಮ್ಮ ವಿದ್ಯಾರ್ಥಿ ಜೀವನವನ್ನು ಕಾರ್ಕಳದ ಜೈನಮಠಶಾಲೆಯಲ್ಲಿ ಆರಂಭಿಸಿದರು. ಹಿರಿಯ ಗುರುಗಳೂ, ಬಂಧುವೂ ಆಗಿದ್ದ ಶ್ರೀಕುಮಾರಯ್ಯ ಶಾಸ್ತ್ರಿಗಳ ಮಾರ್ಗದರ್ಶನ ಅನಂತ ಪಥದೆಡೆಗೆ ಸಾಗುವ ಯಾತ್ರಿಗೆ ದಾರಿದೀಪದಂತಾಯಿತು. ಓದಿನಲ್ಲಿ ಬಹುಶ್ರದ್ಧೆಯನ್ನೂ, ಉತ್ತಮ ನಡತೆಯನ್ನೂ ತನ್ನದಾಗಿಸಿದ ಶ್ರೀ ಹೆಗ್ಡೆಯವರು ಲೌಕಿಕ ಹಾಗೂ ಧಾರ್ಮಿಕ ಶಿಕ್ಷಣವನ್ನು ಪೂರೈಸಿದ ನಂತರ ಉನ್ನತ ಶಿಕ್ಷಣಕ್ಕಾಗಿ ದೂರದೂರಿಗೆ ಹೋಗುವುದು ಅನಿವಾರ್ಯವಾಗಿತ್ತು. ಉನ್ನತ ವ್ಯಾಸಾಂಗದಲ್ಲಿ ಆಸಕ್ತಿಯನ್ನು ಹೊಂದಿದ, ಜ್ಞಾನದಾಹಿಯಾದ ಶ್ರೀ.ಕೆ. ಬಿ.ಜೆ.ಯವರು ಮೈಸೂರಿಗೆ ತೆರಳಿದರು. ಈ ಮಧ್ಯೆ ತಾಯಿಯ ನಿಧನ ವ್ಯಾಸಾಂಗಕ್ಕೆ ಅಡ್ಡಿ ಉಂಟಾಗುವುದರಲ್ಲಿತ್ತು.

ಕಾರ್ಕಳ ಜೈನ ಮಠದ ಪೂಜ್ಯಶ್ರೀ ನೇಮಿಸಾಗರ ವರ್ಣಿಜೀ ಮತ್ತು ಕುಮಾರಯ್ಯ ಶಾಸ್ತ್ರಿಯವರು ಮುದ್ಯರಲ್ಲಿ ಅವರ ಮಗನ ವಿದ್ಯಾಭ್ಯಾಸಕ್ಕಾಗಿ ಉತ್ತರ ಭಾರತಕ್ಕೆ ಕಳಿಸಲು ಕೋರಿದಾಗ, ಆ ಪ್ರಯತ್ನವು ಸಫಲವಾಯಿತು. ಶ್ರೀಜಿನರಾಜರು ಬನಾರಸ್‌ನ ಕಾಶಿ ವಿಶ್ವವಿದ್ಯಾನಿಲಯದಲ್ಲಿ ಕಾನೂನು ವ್ಯಾಸಾಂಗ ಮಾಡಿದರು.

ವಕೀಲರಾಗಿ ಜಿನರಾಜ ಹೆಗ್ಡೆ

ಉದ್ದ ನಿಲುವಂಗಿ, ಕಚ್ಚೆ ಮತ್ತು ಬನಾರಸ್ ಟೋಪಿ ಇದು ಜಿನಾರಾಜ ಹೆಗ್ಡೆಯವರ ಸರಳ ಉಡುಗೆಯಾಗಿತ್ತು. ಮಂದಸ್ಮಿತವಾದ ಮುಖ, ತೀಕ್ಷ್ಣ ಕಣ್ಣುಗಳು, ಭವಿಷ್ಯದ ಹಿರಿ ವ್ಯಕ್ತಿತ್ವದ ಮುಂದಾಳುವಿನ ಸೂಚನೆ ಮೊದಲೇ ನೀಡಿತ್ತು. ಓದಿನಲ್ಲಿ ಶ್ರದ್ಧೆಯ ಜತೆಗೆ ಆಟೋಟಗಳಲ್ಲೂ ಆಸಕ್ತಿ ಇತ್ತು. ಟೆನಿಸ್ ಮಧ್ಯಮ ಆಟಗಾರರೂ ಆಗಿದ್ದರು. ವಕೀಲೀ ಓದು ಮುಗಿಸಿ ಮನೆಗೆ ತೆರಳಿದ ಹೆಗ್ಗಡೆಯವರು ಮೂಲತಃ ಮನೆಕಸುಬಾದ ಜಮೀನ್ದಾರಿಕೆಗಿಂತ, ವಕೀಲ ವೃತ್ತಿಯಲ್ಲಿ ಮುಂದುವರಿದು, ಜನಸೇವೆ ಮಾಡವತ್ತ ಮನಸ್ಸು ಹರಿಸಿದರು. ಹೆಗ್ಡೆಯವರು 1929ರಲ್ಲಿ ಮಂಗಳೂರಿನಲ್ಲಿ ನ್ಯಾಯವಾದಿಯಾಗಿ ಕಾರ್ಯ ಆರಂಭಿಸಿದರು. ಅವರು ಮಂಗಳೂರಿನ ಜೈನ ಬೋರ್ಡಿಂಗ್‌ನಲ್ಲಿ ವಾಸ್ತವ್ಯವಿದ್ದರು. ಮೊದಲೇ ಜನಸೇವೆಯ ಅಪಾರ ಆಕಾಂಕ್ಷೆ ಅದರ ಜತೆಗೆ, ವಾಕ್ ಚಾತುರ್ಯ ಹೊಂದಿದವರು. ಆದುದರಿಂದಲೇ ವಕೀಲೀ ವೃತ್ತಿಯು ಅವರ ಮನೋಭಾವನೆಗೆ ತಕ್ಕುದಾಗಿತ್ತು. ಗಂಭೀರ ಚಿಂತನೆ, ಅಧ್ಯಯನ ಹಾಗೂ ಏಕಾಗ್ರತೆ ಹೆಗ್ಡೆಯವರ ಕೆಲಸದಲ್ಲಿ ಸದಾ ಜತೆಯಾಗಿತ್ತು. ಆದರೆ ಅವರೆಂದೂ ತಮ್ಮ ವೃತ್ತಿಯನ್ನು ಹಣ ಸಂಪಾದನೆಯ ಕ್ಷೇತ್ರಕ್ಕಾಗಿ ಮಾಡಿಕೊಂಡಿರಲಿಲ್ಲ. ನ್ಯಾಯಯುತವಾದ ಕೇಸುಗಳನ್ನು ಮಾತ್ರ ವಾದಿಸುತ್ತಿದ್ದರು. ಯಾಕೆಂದರೆ ಅವರನ್ನು ನಂಬಿದ ವ್ಯಕ್ತಿಗೆ ಸೂಕ್ತ ನ್ಯಾಯ ದೊರಕಿಸಿ ಕೊಡುವದು ಅವರ ಕರ್ತವ್ಯವಾಗಿತ್ತು. ಅನ್ಯಾಯವೆಸಗಿದ ಅನೀತಿಯ ಮಾರ್ಗದಲ್ಲಿರುವ ಕೇಸುಗಳನ್ನೆಂದೂ ಅವರು ತೆಗೆದುಕೊಂಡವರಲ್ಲ. ಈ ಮಧ್ಯೆ ಅವರ ವಿವಾಹವು 1932ರಲ್ಲಿ ಶ್ರೀ ನೇಮಿರಾಜ ಪಡಿವಾಳರ ಮಗಳಾದ ಸುಶೀಲಮ್ಮನವರ ಜತೆ ಬಹು ಅದ್ಧೂರಿಯಾಗಿ ಕುಕ್ಕುಂದೂರು ಗುಡ್ಡೆಗುತ್ತಿನ ಮನೆಯಲ್ಲಿ ನೆರವೇರಿತ್ತು. ವಿವಾಹ ನಂತರ ಹೆಗ್ಡೆಯವರು

ಜೈನ ಬೋರ್ಡಿಂಗ್‌ನ ಪಕ್ಕದ ಮನೆಯಲ್ಲಿ ಸಂಸಾರ ನೌಕೆಗೆ ಕಾಲಿಟ್ಟರು. ಮುಂದೆ, ನ್ಯಾಯಕ್ಕಾಗಿ ಹೋರಾಡುತ್ತಿದ್ದ ಹೆಗ್ಡೆಯವರು ಕಕ್ಷಿದಾರರಿಂದ ಎಲ್ಲಾ ವಿವರಗಳನ್ನು ಕೂಲಂಕುಶವಾಗಿ ಪಡೆದು ಪರಿಶೀಲಿಸಿ, ಅವರನ್ನು ತಮ್ಮ ಮನೆಯಲ್ಲೇ ಇರಿಸಿ, ಅವರಿಗೆ ಅತಿಥಿ, ಸತ್ಕಾರ ಮಾಡುತ್ತಿದ್ದರು. ದಾವೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಮುಂದೆ ಸಾಗುತಿದ್ದರು. ಆದರೆ ಅವರ ಕಕ್ಷಿದಾರರು ತಾಳ್ಮೆಯಿಂದ ಕಾಯಲು ಕಾರಣ, ಅವರ ಮೇಲಿದ್ದ ಅಪಾರ ವಿಶ್ವಾಸ. ಒಮ್ಮೆ ತಮ್ಮ ಕಕ್ಷಿದಾರರಿಗೆ ನ್ಯಾಯ ದೊರಕಿಸಿ ಕೊಡುವ ಸಲುವಾಗಿ ವಿಜ್ಞಾನದ ಉಪಕರಣಗಳನ್ನು ಕೋರ್ಟಿನಲ್ಲಿ ಹಾಜರುಪಡಿಸಿ, ಪ್ರಯೋಗ ಮಾಡಿ ತೋರಿಸಿದ್ದರು. ಇದು ಅವರ ಕರ್ತವ್ಯ ನಿರ್ವಹಣೆಯ ಭಾಗವಹಿಸುವಿಕೆಗೆ ಒಂದು ಉದಾಹರಣೆ.

<u>ದೇಶಸೇವೆಯಲ್ಲಿ ಜಿನರಾಜರು</u>

ಜಿನರಾಜರ ಜನಸೇವೆಯ ಆಕಾಂಕ್ಷೆ ಹಿರಿದಾದುದರಿಂದ ವಕೀಲ ವೃತ್ತಿ ಅವರಿಗೆ ಸರಿಯಾದ ಕ್ಷೇತ್ರವೆನಿಸಲಿಲ್ಲ. ಆದುದರಿಂದಲೇ ಅವರ ಒಲವು ಜನಸೇವೆಗೆ ವಿಪುಲ ಅವಕಾಶಗಳಿರುವ ರಾಜಕೀಯದಲ್ಲಿ ಹರಿಯಿತು. ತದನಂತರವೂ ಅವರು ನ್ಯಾಯಕ್ಕಾಗಿ ಕೋರ್ಟಿನಲ್ಲಿ ಮುಂದುವರಿಯಲು ಹಿಂಜರಿಯಲಿಲ್ಲ. ಆಗ ರಾಜಕೀಯ ಅಧಿಕಾರ ಲಾಲಸೆಯ, ಕ್ಷೇತ್ರವಾಗಿರದೆ, ದೇಶ ಪ್ರೇಮಿಗಳ ನಿಸ್ವಾರ್ಥ ಸೇವೆಗೆ ಪ್ರೋತ್ಸಾಹ ನೀಡಿ, ಮುನ್ನಡೆಸುತ್ತಿತ್ತು. ಸೇವಾ ಮನೋಭಾವದ ಹೆಗ್ಡೆಯವರಿಗೆ ಬಾಲ್ಯದಿಂದಲೇ ಬಂದ ಆಸ್ತಿ ಉತ್ತಮ ವಾಗ್ಮಿಯಾದ ಅವರ ಮಾತುಗಳು, ಎಲ್ಲರನ್ನೂ ದಿಗ್ಮೂಢರನ್ನಾಗಿ ಮಾಡುತ್ತಿತು. ಆಗ ದೇಶಕ್ಕಾಗಿ ಎಲ್ಲೆಡೆ ವ್ಯಾಪಕವಾದ ಹೋರಾಟ ನಡೆಯುತ್ತಿತ್ತು. ದೇಶವನ್ನು ಬ್ರಿಟಿಷರ ದಾಸ್ಯದಿಂದ ಮುಕ್ತವಾಗಿಸುವುದು ಅವರ ಪ್ರಮುಖ ಧ್ಯೇಯವಾಗಿತ್ತು. ಗಾಂಧೀಜಿಯವರ ಸ್ವದೇಶಿ ಚಳವಳಿ ಹೆಗ್ಡೆಯವರ ಮೇಲೆ ಗಾಢ ಪ್ರಭಾವ ಬೀರಿತು. ಇದರ ಪರಿಣಾಮವಾಗಿ ಸಂಪೂರ್ಣ ಖಾದಿ ವಸ್ತ್ರದಾರಿಯಾದ ಜಿನರಾಜರು, ಅದನ್ನು ಜೀವನದುದ್ದಕ್ಕೂ ಪಾಲಿಸಿದರು. ಅವರ ಸ್ವಾವಲಂಭಿತನಕ್ಕೆ ಉದಾಹರಣೆಯೆಂದರೆ, ಅವರು ಸ್ವತಃ ಚರಕದಿಂದ ನೂಲು ತೆಗೆದು ಬಟ್ಟೆ ಸಿದ್ದಪಡಿಸಿ ಧರಿಸುತಿದ್ದರು. ಸರಳ ಜೀವನವನ್ನು ನಡೆಸಿದ ಹೆಗ್ಡೆಯವರು ಎಲ್ಲರಿಗೂ ನಿದರ್ಶನವಾಗಿದ್ದಾರೆ.

ದೇಶದೆಲ್ಲೆಡೆ ಭಾರತವನ್ನು ಬ್ರಿಟಿಷರ ದಾಸ್ಯದಿಂದ ಬಿಡುಗಡೆಗೊಳಿಸಲು ಎಲ್ಲೆಡೆ ವ್ಯಾಪಕವಾದ ಹೋರಾಟದ ಕಿಡಿ ಹತ್ತಿತ್ತು. ಹಾಗಿರುವಾಗ ಜಿನರಾಜರ ಮನದಲ್ಲೂ ದೇಶಸೇವೆಯ ಇಚ್ಛೆ ಜಾಗೃತವಾದದ್ದು ಸಹಜವೇ ಆಗಿತ್ತು. ಆದಾಗಲೇ ಹೆಗ್ಗಡೆಯವರು ಸಹಕಾರಿ ಕ್ಷೇತ್ರದಲ್ಲಿ ಅನುಭವಿಯಾಗಿ ಹೊಸಹುರುಪಿನಿಂದ ಕಾರ್ಯನಿರ್ವಹಿಸುತ್ತಿದ್ದರು. ದ.ಕ.ಜಿಲ್ಲೆಯ ಧೀಮಂತ ಚೇತನ, ಖ್ಯಾತ ನ್ಯಾಯವಾದಿಗಳಾದ ಶ್ರೀ ಕೆ.ಆರ್.ಕಾರಂತ್ (ಕೋಟ ರಾಮಕೃಷ್ಣ ಕಾರಂತ) ಅವರೊಂದಿಗಿನ ಸ್ನೇಹ ಸಂಬಂಧದಿಂದಾಗಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯರಾಗಿ ಹಲವಾರು ನೋವು, ನಲಿವಿಗೆ ಸಾಕ್ಷಿಯಾಗಿ ನಿಂತವರು ಜಿನರಾಜ ಹೆಗ್ಡೆಯವರು.

ಸ್ವಾತಂತ್ರ್ಯ ಚಳುವಳಿಯ ಕಿಡಿ ದ.ಕ. ಜಿಲ್ಲೆಯಲ್ಲೂ ಹತ್ತಿತ್ತು. ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿ, ಜನರನ್ನು ಹೋರಾಟಕ್ಕೆ ಜಾಗೃತಗೊಳಿಸಿದವರಲ್ಲಿ ಜಿನರಾಜರು ಪ್ರಮುಖರು ಗಾಂಧೀಜಿಯವರು, ಮಂಗಳೂರಿನಲ್ಲಿ ಜನರನ್ನು ಉದ್ದೇಶಿಸಿದಾಗ, ಅಲ್ಲಿನ ಜನಜಾಗೃತಿಯನ್ನು ಕಂಡು ಬಹಳ ಪ್ರಸನ್ನವಾಗಿದ್ದರಂತೆ, ತೀವ್ರವಾಗುತ್ತಿದ್ದ ಸ್ವಾತಂತ್ರ್ಯದ ಕಾವನ್ನು ತಣ್ಣಗಾಗಿಸುವ ತಂತ್ರವನ್ನು ಬ್ರಿಟಿಷರು ಆಗಾಗಲೇ ಹೂಡತೊಡಗಿದ್ದರು. ಅದರ ಭಾಗವಾಗಿ 1935ರಲ್ಲಿ ಬ್ರಿಟಿಷರು, ಹೊಸ ರಾಜ್ಯಾಂಗವೊಂದನ್ನು ಜಾರಿಗೆ ತಂದರು. ಇದರ ಪ್ರಕಾರ, ಸೀಮಿತ ಮತದಾನದ ಮುಖಾಂತರ ಭಾರತದಲ್ಲೆಡೆಗಳಿಂದ ಭಾರತೀಯ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿ ಬ್ರಿಟಿಷ್ ಶಾಸಕಾಂಗದಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಲಾಯಿತು. ಮತದಾನದ ಸಲುವಾಗಿ, ಮಲಾಬಾರ್ ಹಾಗೂ ದ.ಕ. ವನ್ನು ಜತೆಗೂಡಿ ಒಂದು ಕೇಂದ್ರ ಅಸೆಂಬ್ಲಿ ಕ್ಷೇತ್ರವನ್ನಾಗಿಸಿತ್ತು. ಎಲ್ಲರ ಜನಮಾನಸದಲ್ಲಿ ಪ್ರಭಾವಿ, ನಿಷ್ಠಾವಂತ ಕಾರ್ಯಕರ್ತರಾಗಿ ಮತ್ತವರ ಪ್ರತಿನಿಧಿಯಾಗಿ ಶ್ರೀ.ಜಿನರಾಜ ಹೆಗ್ಡೆಯವರ ಹೆಸರಿತ್ತು. ಆದರೆ ವಿಧಿಯಾಟವೇ ಬೇರೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ ನಾಯಕರು ಶ್ರೀ.ನಾರಾಯಣ ನಂಬಿಯಾರ್ ರವರನ್ನು ಆ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆ ಮಾಡಿತು. ಇದರಿಂದಾಗಿ ಅಸಾಮಾಧಾನಗೊಂಡ ಶ್ರೀ. ಹೆಗ್ಡೆಯವರು ಸ್ವತಂತ್ರವಾಗಿ ಸ್ಪರ್ಧಿಸಲು ನಿರ್ಧರಿಸಿದರು. ಆದರೆ ಅಚ್ಚರಿಯೆಂದರೆ ಮಲಬಾರ್ ಪ್ರತಿನಿಧಿಯಾಗಿ ಶ್ರೀ. ನಂಬಿಯಾರ್‌ರವರು ಯಾವುದೋ ಒಂದು ಕಾರಣದಿಂದಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗಿದ್ದರು. ಈಗ ಭಾಗ್ಯ ಹೆಗ್ಡೆಯವರ ಪಾಲಿಗೆ ಒಲಿದು ಬಂತು. ಹೆಗ್ಡೆಯವರು

ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು. ಏನಿದ್ದರೂ, ಗೆಲುವು ನ್ಯಾಯದೆಡೆಗೆ ಎನ್ನುವುದು, ಇಲ್ಲಿ ಬಹುತೇಕ ಖಚಿತವಾಯಿತು. ಹೆಗ್ಡೆಯವರ ಹಿರಿಮೆಗೆ, ಇನ್ನೊಂದು ಗುರಿಯೆಂದರೆ ಕೇಂದ್ರ ಅಸೆಂಬ್ಲಿ ಸದಸ್ಯರಾದಾಗ ಅವರ ವಯಸ್ಸು ಕೇವಲ 24. ಆದುದರಿಂದ ಅತ್ಯಂತ ಕಿರಿಯ ಅಸೆಂಬ್ಲಿ ಸದಸ್ಯರೆಂಬ ಕೀರ್ತಿಗೆ ಭಾಜನರಾದರು. ಅವರೊಬ್ಬ ಬಹುಮುಖ ವ್ಯಕ್ತಿತ್ವದ ಪಾರ್ಲಿಮೆಂಟೇರಿಯನ್ ಎಂಬ ಹೆಸರಿಗೆ ಪಾತ್ರರಾದರು.

1928 ರಿಂದ 1945ರವರೆಗೆ ಕೇಂದ್ರ ಅಸೆಂಬ್ಲಿ ಸದಸ್ಯರಾಗಿದ್ದಾಗ ಜಿನರಾಜರು ಹಾಗೂ ಇನ್ನಿತರ ಜನಪ್ರತಿನಿಧಿಗಳು ಮಾಡುತ್ತಿದ್ದ ಪ್ರಮುಖ ಕಾರ್ಯವೆಂದರೆ ಬ್ರಿಟಿಷ್ ಶಾಸಕಾಂಗದಲ್ಲಿ ಸರ್ಕಾರ ಯಾವುದೇ ಭಾರತ ವಿರೋಧ ಕಾರ್ಯಗಳನ್ನು ಮಾಡದಂತೆ ನೋಡಿಕೊಳ್ಳುವುದು. ಈ ಸಂದರ್ಭದಲ್ಲಿ ಅವರು ರೈತರ ಏಳಿಗೆಗೆ ಅವಿರತ ದುಡಿದುದು, ಅವರ ಮನದ ಪರಿಚಯ ಮಾಡಿಕೊಡುತ್ತದೆ. ಸ್ವತಃ ಉತ್ತಮ ಕೃಷಿಕರಾಗಿದ್ದು ರೈತರ ನೋವು, ನಲಿವಿಗೆ ಧ್ವನಿಯಾದರು.

ಕೊನೆಗೂ ಭಾರತವು ಧೇಶಭಕ್ತರ ಹೋರಾಟದ ಫಲವಾಗಿ 1947ರಲ್ಲಿ ಸ್ವತಂತ್ರವಾಯಿತು. ತದನಂತರ, ರಾಷ್ಟ್ರೀಯ ಕಾಂಗ್ರೆಸ್, ಸ್ವಾರ್ಥಪರ, ಅಧಿಕಾರ ಲಾಲಸೆಯ ಕಾಂಗ್ರೆಸ್ ಆಗಿ ಬದಲಾಯಿತು. ಸ್ವಾತಂತ್ರ್ಯದ ಉದ್ದೇಶದಿಂದ ನಿಷ್ಠೆಯಿಂದ ಹೋರಾಡಿದ ರಾಷ್ಟ್ರೀಯ ಕಾಂಗ್ರೆಸ್, ಸ್ವಾತಂತ್ರ್ಯದ ತರುವಾಯ ವಿಸರ್ಜಿಸಬೇಕೆಂಬ ನಿಲುವು ಶ್ರೀ. ಜಿನರಾಜ ಮತ್ತು ಹಲವರದಾಗಿತ್ತು. ಬದಲಾದ ಕಾಂಗ್ರೆಸ್ ಧೋರಣೆಯಿಂದ ಅಸಮಾಧಾನಗೊಂಡ ಹೆಗ್ಡೆಯವರು, ರಾಷ್ಟ್ರೀಯ ಕಾಂಗ್ರೆಸ್ ತೊರೆದು ಕಿಸಾನ್ ಮಜ್ದೂರ್ ಸಭಾ ಪಕ್ಷಕ್ಕೆ ಸೇರಿದರು. ಇದು ಹೆಗ್ಡೆಯವರ ನಿಷ್ಠಾವಂತಿಕೆಯ ಪರಿಚಯ ಮಾಡಿಕೊಡುತ್ತದೆ. ಮತ್ತೊಮ್ಮೆ ಕಾಂಗ್ರೆಸ್‌ನ ಪರವಾಗಿ ನಿಂತರಾದರೂ, ಆ ತರುವಾಯ ಪಕ್ಷವನ್ನು ತೊರೆದು ಅಖಿಲ ಭಾರತ ಪರಿಷತ್ತನ್ನು ಸ್ಥಾಪಿಸಿದರು. ಕೆ.ಬಿ.ಜಿಯವರು ಅದರ ಪ್ರಧಾನ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ಸರ್ದಾರ್ ಬಹದ್ದೂರ್ ಲಾಲ್ ಸಿಂಗ್‌ರವರ ಸಹಕಾರದೊಂದಿಗೆ ಬೃಹತ್ ಸಮ್ಮೇಳನ ಮದ್ರಾಸಿನಲ್ಲಿ ನಡೆದಾಗ ರಾಷ್ಟ್ರೀಯ ಮಟ್ಟದಲ್ಲಿ ಬಹಳಷ್ಟು ಗಮನ ಸೆಳೆಯಿತು. ಮುಂದೆ, ಅಂದಿನ ಖ್ಯಾತ ರಾಜಕೀಯ ಮುಂದಾಳುಗಳಾದ ಮದ್ರಾಸಿನ ಚಕ್ರವರ್ತಿ ರಾಜ ಗೋಪಾಲಾಚಾರಿ ಹಾಗೂ ಎಂ. ಆರ್. ಮಸಾನಿಯವರನ್ನು ಮುಂದಿಟ್ಟುಕೊಂಡು, ಅವರ

ಸಹಭಾಗಿತ್ವದೊಂದಿಗೆ ಅಖಿಲ ಭಾರತ ಸ್ವತಂತ್ರ ಪಕ್ಷವನ್ನು ಕಟ್ಟಿ ಬೆಳೆಸಿದರು. ಇದರ ಸರ್ವತೋಮುಖ ಅಭಿವೃದ್ಧಿಗಾಗಿ ಅವಿರತರಾಗಿ ಶ್ರಮಿಸಿದರು. ಮುಂದಿನ ದಿನಗಳಲ್ಲಿ ಕರ್ನಾಟಕ ಸ್ವತಂತ್ರ ಪಕ್ಷದಲ್ಲಿ ಅಧ್ಯಕ್ಷರಾಗಿಯೂ, ಹೆಗ್ಡೆಯವರು ಸೇವೆ ಸಲ್ಲಿಸಿದರು. ಅಖಿಲ ಭಾರತ ಸ್ವತಂತ್ರ ಪಕ್ಷದ ಮದ್ರಾಸ್ ಘಟಕದ ಎರಡು ಮಹಾ ಚುನಾವಣೆಗಳಲ್ಲಿ ಪ್ರಮುಖ ಪ್ರಚಾರ ಕಾರ್ಯ ನಿರ್ವಾಹಕರಾಗಿ ಬಹು ನಿಷ್ಠೆಯಿಂದ ದುಡಿದರು. ಇವರು, ಶ್ರೀ. ಗೋಪಾಲಾಚಾರಿಯಿಂದ “Jinaraja Hegde is my right hand” ಎನ್ನುವ ಮೆಚ್ಚುಗೆಗೆ ಪಾತ್ರರಾದರು.

ಹೆಗ್ಡೆಯವರನ್ನು ಇತರ ದೊಡ್ಡ ಉನ್ನತ ವ್ಯಕ್ತಿಗಳು, ಯಾವ ರೀತಿಯಲ್ಲಿ ಗೌರವಿಸುತ್ತಿದ್ದರೆನ್ನಲು ನಮಗೆ 1967ರಲ್ಲಿ ಮಂಗೂಳೂರಿನಲ್ಲಿ ನಡೆದ ಮಹಾಸಭೆಯ ನಿದರ್ಶನ ಮುಂದೆ ಬರುತ್ತದೆ. ಶ್ರೀ. ರಾಜಾಜಿಯವರು ಅಂದಿನ ಸಭೆಯಲ್ಲಿ ಜಿನರಾಜರನ್ನು ಸ್ವತಂತ್ರ ಪಕ್ಷದ ಸ್ಥಾಪನೆಯ ಮೂಲ ಕಾರಣಕರ್ತರೆಂದು ಬಣ್ಣಿಸಿದರು. ಅದೇ ರೀತಿ ಮುಂದೆ, 1967ರಲ್ಲಿ, ಜಿನರಾಜರು ಮೈಸೂರಿನ ಸ್ವತಂತ್ರ ಪಕ್ಷದ ಅಧ್ಯಕ್ಷರಾಗಿದ್ದ ಸಮಯದಲ್ಲಿ ಮಹಾ ಚುನಾವಣೆಯಲ್ಲಿ ಪಕ್ಷಕ್ಕೆ ಪಾರ್ಲಿಮೆಂಟಿನಲ್ಲಿ 21 ಸ್ಥಾನಗಳು, ಅಸೆಂಬ್ಲಿಯಲ್ಲಿ 21 ಸ್ಥಾನಗಳು ಲಭಿಸಿದಾಗ ಶ್ರೀ ರಾಜಾಜಿಯವರು ಹೇಳಿದ ಮಾತುಗಳಿವು-“As long as Jinaraj Hegde is alive, I have no fear and no doubt about the prospect of the Mysore State Swatantra Party” ಎಂದು. ಇದು ಜಿನರಾಜರ ಸುವರ್ಣ ವ್ಯಕ್ತಿತ್ವಕ್ಕೆ ಪೋಣಿಸಿದ ಮುತ್ತು ರತ್ನಗಳು. ಈ ಮಾತುಗಳು ಹೆಗ್ಡೆಯವರ ಮೇಲಿನ ದೃಢ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ.

ಜಿನರಾಜ ಹೆಗ್ಡೆಯವರಿಗೆ ಅವರದ್ದೇ ಆದ ಧ್ಯೇಯ - ಆದರ್ಶಗಳಿದ್ದುವು. ಅವರೆಂದೂ ಅದರ ಹೊರಗುಳಿಯಲಿಲ್ಲ. ಹಲವಾರು ವಿದ್ವಾಂಸರ ಅಭಿಪ್ರಾಯದಂತೆ ಕಾಂಗ್ರೆಸ್ ಪಕ್ಷದಲ್ಲೇ ಅವರು ಉಳಿದಿರುತ್ತಿದ್ದರೆ ಅವರು ರಾಜಕೀಯ ಕ್ಷೇತ್ರದಲ್ಲಿ ಮುಖ್ಯಮಂತ್ರಿಯಾಗಿಯೋ ಅಥವಾ ಉನ್ನತ ಪದವಿಯನ್ನು ಅಲಂಕರಿಸುವ ಮೌಲಿಕ ಅರ್ಹತೆ ಅವರಲ್ಲಿ ಇತ್ತು. ಆದರೆ ಅವರೆಂದಿಗೂ ರಾಜಕೀಯ ಸ್ಥಾನಮಾನದ ಅಧಿಕಾರದ ಲಾಲಸೆ ಉಳ್ಳವರಾಗಿರಲಿಲ್ಲ.

ತುಳು ಚಳುವಳಿ ಮತ್ತು ಜಿನರಾಜರು

ಅದೇ ಸಂದರ್ಭದಲ್ಲಿ ತುಳು ನಾಡು ಹಾಗೂ ತುಳುಬಾಷೆಗೆ ಸರಿಯಾದ ಗೌರವ, ಸ್ಥಾನವಮಾನ ಲಭಿಸಬೇಕೆಂಬ ಉದ್ದೇಶದಿಂದ ತುಳುವ ಮಹಾಸಭೆಯ ಸಕ್ರಿಯ ಕಾರ್ಯತರ್ಕರಾಗಿದ್ದರು, ತುಳುನಾಡಿಗೆ, ತುಳುಭಾಷೆ ನುಡಿಗೆ, ರಾಷ್ಟ್ರೀಯ ಮನ್ನಣೆ ನೀಡಲು, ಸಮರ್ಪಣಾಭಾವದಿಂದ ಹೋರಾಡಿದವರೆಂದರೆ, ಶ್ರೀ. ಎಸ್. ಯು. ವಣಿಯಾಡಿಯವರು. ಆಗ ಉಡುಪಿ ಜಿಲ್ಲೆಯಲ್ಲಿರುವ ಮಣಿಪಾಲದ ಬಹುತೇಕ ಭಾಗ ಅವರದಾಗಿತ್ತು. ಟೈಲ್ಸ್ ಫಾಕ್ಟರಿ, ಪ್ರೆಸ್, ತುಳುನಾಡು, ಬ್ಯಾಂಕ್ ಇವುಗಳ ಒಡೆಯರಾಗಿದ್ದ ಪಣಿಯಾಡಿಯವರು ವ್ಯವಹಾರದಲ್ಲಿ ತದನಂತರ ಸೋಲನ್ನು ಕಾಣಬೇಕಾಯಿತು. ಇದರಿಂದಾಗಿ ಅವರು ಪ್ರಾರಂಭಿಸಿದ ತುಳು ಚಳವಳಿಯೂ, ಹಿಂದೇಟು ಹಾಕಿತು. ಆದರೆ ಅವರ ಜತೆ ಕೈಗೂಡಿಸಿದವರು ಶ್ರೀ. ಜಿನರಾಜ ಹೆಗ್ಡೆಯವರು. ಅವರಿಗೆ ತಮ್ಮ ಜನ್ಮದಾಯಿನಿಯಾದ ತುಳು ಮಾತೆಯ, ತುಳುನಾಡಿನ ಮೇಲೆ ಅಪಾರ ಅಭಿಮಾನವಿತ್ತು. ಪ್ರತ್ಯೇಕ ತುಳು ಭಾಷಾ ಪ್ರಾಂತ್ಯದ ಉತ್ಕಟ ಇಚ್ಛೆಯಿದ್ದರೂ, ತದನಂತರ, ಅದಕ್ಕೆ ಸೂಕ್ತ ಸಹಕಾರ ದೊರೆಯದುದೇ ತುಳು ಚಳವಳಿಯ ಹಿಂದುಳಿವಿಕೆಗೆ ಕಾರಣ. ಒಂದು ವೇಳೆ ಹಿರಿಯ ಚೇತನರಾದ ಶ್ರೀ.ಎನ್.ಯು ಪಣಿಯಾಡಿಯವರು, ದೃಢ ನಿಲುವಿನೊಂದಿಗಿದ್ದು, ಸೂಕ್ತ ವಾತಾವರಣವಿರುತಿದ್ದಲ್ಲಿ, ಖಂಡಿತವಾಗಿಯೂ ಪ್ರತ್ಯೇಕ ತುಳು ಪ್ರಾಂತ ಅಸ್ತಿತ್ವಕ್ಕೆ ಬರುತಿತ್ತು. 1928ರ ಡಿಸೆಂಬರ್ 28ರಂದು ಕಲ್ಕತ್ತಾದಲ್ಲಿ ಭಾಷಾವಾರು ಪ್ರಾಂತ್ಯ ರಚನೆಗಾಗಿ ರಚಿಸಲಾಗಿದ್ದ ಸರ್ವಪಕ್ಷ ಪರಿಷತ್ತಿನ ಸಭೆ ಸೇರಿದಾಗ ಅಂದು ತುಳುವ ಮಹಾಸಭೆಯ ಪ್ರತಿನಿಧಿಗಳಾಗಿದ್ದ ಶ್ರೀ.ಕೆ.ಬಿ. ಜಿನರಾಜರು ಭಾಗವಹಿಸಿದ್ದಾಗ "ಕರ್ನಾಟಕ ಏಕೀಕರಣಕ್ಕೆ ತುಳುವರು, ತುಳುನಾಡಿನವರು ವಿರೋಧಿಗಳಲ್ಲ ಪ್ರೋತ್ಸಾಹಕರು" ಎಂಬ ಮಾತನ್ನು ಹೇಳಿದ್ದರು. ಈ ರೀತಿ ಪ್ರತ್ಯೇಕ ತುಳು ಭಾಷಾ ಪ್ರಾಂತ್ಯದ ರಚನೆಯನ್ನು ಸಮರ್ಥಿಸಿಕೊಂಡಿದ್ದರು.

ಕರ್ನಾಟಕ ಏಕೀಕರಣದ ಮುಂದಾಳುವಾಗಿ ಶ್ರೀ.ಜಿನರಾಜ ಹೆಗ್ಡೆಯವರು

ಕರ್ನಾಟಕ ಏಕೀಕರಣ ಇತಿಹಾಸದಲ್ಲಿ ಶ್ರೀ.ಜಿನರಾಜ ಹೆಗ್ಡೆಯವರ ಕೊಡುಗೆ ಅಪೂರ್ವ ಹಾಗೂ ಅದ್ಭುತವಾದುದು. ಅವರಿಗೆ ತಮ್ಮ ಮಾತೃ ಭಾಷೆ ತುಳುವಿನಷ್ಟೇ ಕನ್ನಡ ಭಾಷೆ, ನಾಡು, ನುಡಿಯ ಕುರಿತಂತೆ ಅಪಾರವಾದ ಅಭಿಮಾನವಿತ್ತು. ಅದೇ ಅಭಿಮಾನ

ಮುಂದೆ, ಕರ್ನಾಟಕ ಏಕೀಕರಣಕ್ಕಾಗಿ ಹೆಮ್ಮರದಷ್ಟು ಬೆಳೆಯಿತು. ಕರ್ನಾಟಕ ಏಕೀಕರಣದ ಪ್ರತಿಯೊಂದು ಮಜಲುಗಳಲ್ಲಿ ಶ್ರೀ. ಹೆಗ್ಡೆಯವರ ಹೆಸರು ದಾಖಲಾಗಿದೆ. ಅದರ ಹಿಂದೆ ಅವರ ಅವಿರತ ಶ್ರಮ, ದುಡಿಮೆಯಿದೆ.

ಬ್ರಿಟಿಷರ ವಿಭಜಿಸಿ ಆಳುವ ನೀತಿಯಿಂದಾಗಿ, ಆದಾಗಲೇ ಕರ್ನಾಟಕದ ಕೆಲವು ಪ್ರಾಂತ್ಯಗಳು ಹೈದರಾಬಾದ್, ಮದ್ರಾಸ್, ಮುಂಬೈನ ಭಾಗವಾಗಿ ಹಂಚಿ ಹೋಗಿತ್ತು. ೨೦ನೇ ಶತಮಾನದ ಆದಿಯಲ್ಲಿನ ವಂಗ - ಬಂಗ ಚಳವಳಿಯಿಂದ ಪ್ರೇರಿತರಾಗಿ, ರಾಷ್ಟ್ರಾದ್ಯಂತ ಭಾಷಾವಾರು ಪ್ರಾಂತ್ಯ ರಚನೆಯ ಪ್ರಸ್ತಾವವನ್ನು ಸ್ವೀಕರಿಸಿತು. ಇದರ ತತ್ಸಂಬಂಧವಾಗಿ ಸುಮಾರು 34 ರಾಜಕೀಯ ಸಂಸ್ಥೆಗಳು ಒಟ್ಟುಗೂಡಿ, ಭಾಷಾವಾರು ಪ್ರಾಂತ್ಯ ರಚನೆಗೆ ಸಂಬಂಧಿಸಿದಂತೆ ವರದಿ ಕೇಳಿದಾಗ, ಪಂಡಿತ್ ನೆಹರೂರವರ ನೇತೃತ್ವದಲ್ಲಿ 18.5.1928 ರಲ್ಲಿ ಸಮಿತಿಯೊಂದರ ರಚನೆ ಮಾಡಲಾಯಿತು.

ಕರ್ನಾಟಕ ಏಕೀಕರಣದೊಂದಿಗೆ, ಪ್ರತ್ಯೇಕ ತುಳು ಭಾಷಾ ಪ್ರಾಂತ್ಯದ ಹಂಬಲವೂ ಗರಿಗೆದರತೊಡಗಿತ್ತು. ಅದರ ಪರಿಣಾಮವಾಗಿ ಶ್ರೀ. ಎಸ್. ಯು. ಪಣಿಯಾಡಿಯವರ ನೇತೃತ್ವದಲ್ಲಿ ತುಳುವ ಮಹಾಸಭೆಯ ರಚನೆಯಾಯಿತು. ಅದರಲ್ಲಿನ ಪ್ರಮುಖರಲ್ಲಿ ಜಿನರಾಜ ಹೆಗ್ಗಡೆಯವರು ಒಬ್ಬರಾಗಿದ್ದರು. ಅವರಿಗೆ, ಮೊದಲಿನಿಂದಲೂ ತನ್ನ ತಾಯಿನೆಲೆಯಾದ ತುಳುನಾಡಿನ ಮೇಲೆ, ತುಳು ಸಂಸ್ಕೃತಿ ಬಗ್ಗೆ ಅಪಾರ ಗೌರವ. ಇದೇ ಕಾರಣದಿಂದಾಗಿ ನೆಹರೂ ಸಮಿತಿ ಸಭೆ ಸೇರಿದಾಗ ಪ್ರತ್ಯೇಕ ತುಳು ಭಾಷಾ ಪ್ರಾಂತ್ಯದ ಪರವಾಗಿ ವಾದಿಸಿದವರೆಂದರೇ ಶ್ರೀ ಜಿನರಾಜ ಹೆಗ್ಡೆಯವರು. ಆದರೆ ಮುಂದೆ ಮಂಗಳೂರಿನಲ್ಲಿ ಖ್ಯಾತ ನ್ಯಾಯವಾದಿಗಳೂ, ಮದ್ರಾಸ್ ಪ್ರಾಂತ್ಯದ ಶಾಸನ ವಿಧೇಯಕ ಸಭೆಯ ಸದಸ್ಯರು, ಹೆಗ್ಡೆಯವರ ಆತ್ಮೀಯರೂ ಆಗಿದ್ದ ಶ್ರೀ.ಕೆ.ಆರ್. ಕಾರಂತರು, ಮೊದಲು ಕರ್ನಾಟಕ ಏಕೀಕರಣ, ಆಮೇಲೆ ತುಳುನಾಡು ರಚನೆಯೆಂಬ ಹಿತೋಪದೇಶಕ್ಕೆ ಸಮ್ಮತಿಯಿತ್ತರು. ಅದೇ ಕಾರಣದಿಂದ ಮುಂದೆ ಕರ್ನಾಟಕ ಏಕೀಕರಣಕ್ಕೆ ಪ್ರಥಮ ಆದ್ಯತೆ ನೀಡಿದರು. ಅವರೆಂದೂ ತುಳುನಾಡಿನ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ನಿರ್ಲಕ್ಷ್ಯ ತಳೆದವರಲ್ಲ. 1928ರ ಡಿಸೆಂಬರ್ 28ರಂದು ಕಲ್ಕತ್ತಾದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಗಿ ಸರ್ವಪಕ್ಷ ಪರಿಷತ್ತಿನ ಸಭೆ ಸೇರಿದಾಗ, ಅದರಲ್ಲಿ ತುಳು ಮಹಾಸಭೆಯ ಪ್ರತಿನಿಧಿಯಾಗಿ ಶ್ರೀ. ಕೆ.

ವಾಸುದೇವಾಚಾರ್ಯರ ಜತೆ ಶ್ರೀ.ಜಿನರಾಜ ಹೆಗ್ಡೆಯವರೂ ಭಾಗಿಯಾಗಿದ್ದರು. ಅಂದು ಹೆಗ್ಡೆಯವರು, ತುಳು ಭಾಷಾ ಪ್ರಾಂತ್ಯದ ಹಂಬಲ, ಕರ್ನಾಟಕಕ್ಕೆ ಏಕೀಕರಣಕ್ಕೆ ಎಂದೂ ತೊಡಕಾಗುವುದಿಲ್ಲ ಎಂಬ ವಿಚಾರವನ್ನು ವ್ಯಕ್ತಪಡಿಸಿದರು. ಜನರಲ್ಲಿ ಜನಜಾಗೃತಿ ಮೂಡಿಸಿ, ಅವರನ್ನು ಕರ್ನಾಟಕ ಏಕೀಕರಣದೆಡೆಗೆ ಎಳೆದು ತರುವ ಸಲುವಾಗಿ, ಹೆಗ್ಡೆಯವರು ನಾಡಿನಾದ್ಯಂತ ಸಂಚರಿಸಿದರು. ಅವರಲ್ಲಿ ಇನ್ನಷ್ಟು ಹುರುಪು ತುಂಬಲು ಕಾರಣವಾಯಿತು. ಶ್ರೀರಂಗ, ಕೆ.ಆರ್. ಕಾರಂತ್, ಜಿನರಾಜರು ಇವರೆಲ್ಲರೂ ಒಟ್ಟಾಗಿ ಹೈದರಾಬಾದ್ ಕರ್ನಾಟಕ, ಮುಂಬೈ, ಕರ್ನಾಟಕದ ಹಾಗೂ ಇನ್ನಿತರಡೆಗಳಲ್ಲಿ ಸಂಚರಿಸಿ ಜನಜಾಗೃತಿ ಮೂಡಿಸಿದರು. ಅದರಲ್ಲೂ ಮದ್ರಾಸ್ ಪ್ರಾಂತ್ಯದ ಕನ್ನಡಾಭಿಮಾನಿಗಳು, ಏಕೀಕರಣದತ್ತ ಮುಂದೆ ಬರಲು ಕಾರಣ, ಹೆಗ್ಡೆಯವರ ನಿಸ್ವಾರ್ಥ ಪ್ರಯತ್ನ. ಆದುದರಿಂದಲೇ ಇತಿಹಾಸಕಾರರೊಬ್ಬರು. "ಶ್ರೀ.ಕೆ.ಬಿ. ಜಿನರಾಜ ಹೆಗ್ಡೆಯವರು ಕರ್ನಾಟಕ ಏಕೀಕರಣದ ಚಳುವಳಿಗೆ ಮಾಡಿದ ಪ್ರಯತ್ನ ಪಾದ್ರಿಗಳ ಪ್ರಯತ್ನದಂತೆ ಇತ್ತು" ಎಂದು ಉಲ್ಲೇಖಿಸಿದ್ದಾರೆ. ಕರ್ನಾಟಕ ಏಕೀಕರಣದ ಉದ್ದೇಶವಿಟ್ಟು ಒಂದು ಪರಿಷತ್ತನ್ನು ರಚಿಸಿ, ಅಲ್ಲಲ್ಲಿ ಸಭೆಗಳನ್ನು ಮಾಡಿ, ಏಕೀಕರಣ ಸಾಧನೆಗೆ ಕಾರ್ಯತಂತ್ರ ರೂಪಿಸುತಿತ್ತು. 1924ರಲ್ಲಿ ಬೆಳಗಾವಿಯಲ್ಲಿ ನಡೆದ ಮೊದಲ ಅಧಿವೇಶನದಿಂದ ಮೊದಲ್ಗೊಂಡು ಕ್ರಮವಾಗಿ ಬಳ್ಳಾರಿ, ಧಾರವಾಡ, ಬೆಳಗಾವಿ, ಹುಕ್ಕೇರಿ, ಧಾರವಾಡದ 7ನೇ ಅಧಿವೇಶನದವರೆಗೆ, ಏಕೀರಣದ ಪ್ರಗತಿ ಸಾಗುತಿತ್ತು. ಶ್ರೀ. ಜಿನರಾಜ ಹೆಗ್ಡೆಯವರೂ ಪರಿಷತ್ತಿನ ವಿನಮ್ರ ಕಾರ್ಯಕರ್ತರಾಗಿ ತುಂಬು ಉತ್ಸಾಹದಿಂದ ಎಲ್ಲಾ ಅಧಿವೇಶನಗಳಲ್ಲೂ ಪಾಲ್ಗೊಳ್ಳುತ್ತಿದ್ದರು. ಮುಂದೆ 1940ರ ಏಪ್ರಿಲ್ ನಲ್ಲಿ ಸೊಲ್ಲಾಪುರದಲ್ಲಿ ಕರ್ನಾಟಕ ಸಂಘದ 8ನೇ ಪರಿಷತ್ತಿನ ಸಭೆ ನಡೆದಾಗ, ಉದ್ಘಾಟನೆ ಮಾಡಿದವರು ಶ್ರೀ.ಕೆ.ಬಿ.ಜಿ.ಯವರು, ಆ ಪ್ರದೇಶಗಳಲ್ಲಿ ಮರಾಠಿಗರ ಛಾಯೆಯ ಪ್ರಭಾವವಿದ್ದ ವಿಷಮ ಸ್ಥಿತಿಯಲ್ಲೂ ಸಭೆಯನ್ನು ನಡೆಸಲಾಯಿತು. ಕರ್ನಾಟಕ ಏಕೀಕರಣ ಚಳವಳಿಯತ್ತ ಜನಜಾಗೃತಿ ಮೂಡಿಸುವ ಕಾರ್ಯ ನಿರಂತರವಾಗಿ ಮುಂದುವರೆಯಿತು. ಅದರ ಫಲವಾಗಿ, 1944ರ ಡಿಸೆಂಬರ್ ತಿಂಗಳ 25ರಂದು ಧಾರವಾಡದಲ್ಲಿ 9ನೇ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆಯನ್ನು ಶ್ರೀ.ಜಿನರಾಜ ಹೆಗ್ಡೆಯವರು ವಹಿಸಿದ್ದರು. ಈ ಸಮಾವೇಶದ ಅಧ್ಯಕ್ಷತೆಯ ನೆಲೆಯಲ್ಲಿ ಶ್ರೀ.ಜಿನರಾಜರು, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳು ಹೇಗೆ ಕರ್ನಾಟಕದಿಂದ ಅಭಿನ್ನ ಎಂಬುದನ್ನ ಸ್ಪಷ್ಟಪಡಿಸಿ ದೇಶದ ಮುಖಂಡರು

ಮತ್ತು ಜವಾಬ್ದಾರಿ ಸಂಸ್ಥೆಗಳು ಕರ್ನಾಟಕ ಏಕೀಕರಣವು ಕನ್ನಡಿಗರ ಅಜನ್ಮಸಿದ್ಧ ಹಕ್ಕು ಎಂದು ಒಪ್ಪಿಕೊಂಡಿರುವುದನ್ನು ಪ್ರಸ್ತಾಪಿಸಿ, ಅದಕ್ಕಾಗಿ ಶ್ರಮಿಸುತ್ತಿರುವ ಸಂಘ ಸಂಸ್ಥೆಗಳನ್ನು ಶ್ಲಾಘಿಸಿದರು. ಕನ್ನಡದ ಕಟ್ಟಾ ಅಭಿಮಾನದ ಜತೆಗೆ, ಶ್ರೀ.ಹೆಗ್ಡೆಯವರು, ಕೇಂದ್ರ ಶಾಸನ ಸಭೆಯಲ್ಲಿ ಕನ್ನಡ ಹಿತರಕ್ಷಣೆಯ ಕೆಲಸವನ್ನು ಸಂತೋಷವಾಗಿ ನಿರ್ವಹಿಸಿದರು.

ಆಗ, ಕನ್ನಡಿಗರ ಮುಂದೆ ಪ್ರಮುಖವಾಗಿ ಎರಡು ಉದ್ದೇಶಗಳು ಇದ್ದವು. ಒಂದೆಡೆ, ದೇಶವನ್ನು ಪರಕೀಯರಿಂದ ಮುಕ್ತವಾಗಿಸಲು ಹೋರಾಟ, ಇನ್ನೊಂದೆಡೆ ಹಂಚಿ ನೂರಾಗಿದ್ದ ಕನ್ನಡದ ಪ್ರಾಂತ್ಯಗಳು ಒಟ್ಟಾಗಿ, ಒಂದೇ ಆಡಳಿತದಡಿ ಬಾಳುವ ಕನಸು. ಆದುದರಿಂದಲೇ ಕರ್ನಾಟಕ ಪರಿಷತ್ತು ಹಲವಾರು ಕಡೆ ಸಭೆಗಳನ್ನು ನಡೆಸಿ, ಜನರ ಅಭಿಪ್ರಾಯವನ್ನು ಒಮ್ಮತವಾಗಿಸುವ ಪ್ರಯತ್ನ ಮಾಡುತ್ತಿತ್ತು. ಆ ನಿಟ್ಟಿನಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು 10ನೇ ಸಮಾವೇಶವನ್ನು ಮುಂಬಯಿಯಲ್ಲಿ 1946ರಲ್ಲಿ ನಡೆಸಿದಾಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಬಿ.ಜೆ. ಖೇರ್‌ರವರು ಕರ್ನಾಟಕದ ಶ್ರೇಷ್ಠ ಶ್ರೀಮಂತ ಪರಂಪರೆಯ ಬಗ್ಗೆ ಹೆಮ್ಮೆಪಟ್ಟು, ಕರ್ನಾಟಕ ಏಕೀಕರಣದ ವಿರುದ್ಧವಾಗಿ ಬರಬಹುದಾದ ಪ್ರಶ್ನೆಗಳಿಗೆ ಕಳೆದ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ.ಜಿನರಾಜ ಹೆಗ್ಡೆಯವರೇ ಉತ್ತರ ಸಿದ್ಧಪಡಿಸಿರುವುದನ್ನು ತಿಳಿಸಿದರು. ಕರ್ನಾಟಕ ಪ್ರಾಂತ್ಯ ರಚನೆಯ ಕಾರ್ಯದ ವಿಳಂಭವನ್ನು ಕನ್ನಡಿಗರು ಸಹಿಸಲಾರರು ಎಂಬ ಆಶಯವನ್ನು ಸಭೆಯಲ್ಲಿ ವ್ಯಕ್ತಪಡಿಸಲಾಯಿತು. ಇದೇ ಸಂದರ್ಭದಲ್ಲಿ ಹಲವಾರು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅದರ ಪ್ರಕಾರ ಸರ್ವಸಮ್ಮತವಾದ, ಭಾಷಾವಾರು ಪ್ರಾಂತ್ಯ ರಚನೆಯ ಆಧಾರದ ಮೇಲೆ ಬ್ರಿಟಿಷ್ ಆಳ್ವಿಕೆಗೆ ಸೇರಿದ ಕನ್ನಡ ಪ್ರದೇಶಗಳ ಏಕೀಕರಣವಾಗತಕ್ಕದ್ದು ಮತ್ತು ಮುಂದೆ ಕರ್ನಾಟಕದ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರವು ಬಂದಾಗ, ಅವುಗಳನ್ನು ವಿಲೀನಗೊಳಿಸತಕ್ಕದ್ದು. ಎಲ್ಲರಿಗೂ, ಕರ್ನಾಟಕ ಏಕೀಕರಣದ ವಿಷಯವನ್ನು ಮನದಟ್ಟು ಮಾಡಿಕೊಡಲು ಒಂದು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಗೆ ಪರಿಷತ್ತು ಆರ್.ಆರ್.ದಿವಾಕರ್, ಡಿ.ಪಿ. ಕರಮರ್‌ಕರ್, ಕೆ.ಬಿ. ಜಿನರಾಜ ಹೆಗ್ಡೆ, ಮೊಹರ್ ಹನುಮಂತರಾಯರು, ಶಂಕರಗೌಡ ಪಾಟೀಲ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮೊದಲಾದವರನ್ನು ನೇಮಕ ಮಾಡಿತು. ಅಂತಹ ಸಮಿತಿಗೆ ನೇಮಕವಾಗಬೇಕಾದರೆ ಶ್ರೀ. ಕೆ.ಬಿ. ಜಿನರಾಜ ಹೆಗ್ಡೆಯವರ ಮೇಲಿನ ವಿಶ್ವಾಸದ ಪರಿಚಯವಾಗುತ್ತದೆ. ದಾವಣಗೆರೆಯಲ್ಲಿ ಮುಂದೆ ಕರ್ನಾಟಕ ಏಕೀಕರಣದ

ಮಹಾಸಭೆಯನ್ನು ನಡಸಿದಾಗ, ಅಲ್ಲೂ ಜಿನರಾಜ ಹೆಗ್ಡೆಯವರು ಪೂರ್ಣ ಇಚ್ಛೆಯಿಂದ ಭಾಗವಹಿಸಿದರು. ಇಲ್ಲಿ ಹಲವು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಅದರ ಸಾರ ಈ ರೀತಿ ಇದೆ. ಮೊದಲನೆಯದಾಗಿ, ಕರ್ನಾಟಕದ ಎಲ್ಲಾ ಪ್ರಾಂತ್ಯಗಳನ್ನು ಒಂದೆಡೆ ಸೇರಿಸಿ ಅದರ ಬಗ್ಗೆ ಯಾವುದೇ ಬೇಧ-ಭಾವ ತೋರದೆ, ಒಂದು ಪರಿಪೂರ್ಣವಾದ ಆಡಳಿತವುಳ್ಳ ಸರಕಾರ ರಚಿಸುವುದರಿಂದ ಕರ್ನಾಟಕದ ಹಿತ ಸಾಧನೆಯಾಗುವುದೆಂದು ಸಾರಿತು, ಹಾಗೂ ಇದಕ್ಕಾಗಿ ಎಲ್ಲರ ಸಹಕಾರವನ್ನು ಬಿನ್ನವಿಸಿತು. ಎರಡನೆಯದಾಗಿ, ಭಾಷಾನುಗುಣ, ಪ್ರಾಂತ್ಯ ರಚನೆಯ ವಿಷಯವನ್ನು ಮಹತ್ವವೆಂದು ಪರಿಗಣಿಸಿ ಅತೀ ಶೀಘ್ರವಾಗಿ ಕಾರ್ಯಪ್ರವೃತ್ತರಾಗಬೇಕೆಂದು ಪರಿಷತ್ತು ಸೂಚಿಸಿತು. ಈ ಎಲ್ಲಾ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು, ಒಂದು ಸಮಿತಿ, ಸೂಕ್ತ ಮುಂದಾಳುಗಳ ಅವಶ್ಯಕತೆಯಿತ್ತು. ಅದರಂತೆಯೇ ಶ್ರೀ.ಕೆ.ಬಿ. ಹೆಗ್ಡೆಯವರು, ಶ್ರೀ. ಎಂ.ಪಿ. ಪಾಟೀಲ, ಶ್ರೀ.ಎಸ್. ನಿಜಲಿಂಗಪ್ಪನವರು ಒಳಗೊಂಡ ಸಮಿತಿ ರಚನೆಯಾಯಿತು. ಶ್ರದ್ಧೆಯಿಂದ ತಮ್ಮ ಜವಾಬ್ದಾರಿಯನ್ನು ಪೂರೈಸಿದರು. ಭಾರತ ಸ್ವಾತಂತ್ರ್ಯ ಚಳವಳಿಯ ಜತೆ-ಜತೆಗೆ ಕರ್ನಾಟಕ ಏಕೀಕರಣಕ್ಕೂ ಮುಂದಾಳುವಾಗಿ ಅವರು ಕಾರ್ಯ ನಿರ್ವಹಿಸಿದರು.

ಭಾರತ ಸಂವಿಧಾನ ರಚನಾ ಸಮಿತಿ ರಚನೆಯಾದಾಗ ಅಲ್ಲಿ ಕರ್ನಾಟಕದ ಪ್ರತಿನಿಧಿಗಳಾಗಿದ್ದವರು ಶ್ರೀ.ಜಿನರಾಜ ಹೆಗ್ಡೆ ಮತ್ತು ಶ್ರೀ.ಎಸ್.ನಿಜಲಿಂಗಪ್ಪನವರು. 1947ರ ಡಿಸೆಂಬರ್‌ನಲ್ಲಿ ಈ ಸಮಿತಿಯ ಸಭೆ ಒಂದು ವಾರದ ತನಕ ದೆಹಲಿಯಲ್ಲಿ ನಡೆಯಿತು. ಭಾಷಾವಾರು ಪ್ರಾಂತ್ಯ ರಚನೆಯ ಪ್ರೋತ್ಸಾಹಕ್ಕಾಗಿ ನೆಗಳೂರು ರಂಗನಾಥ ಹಾಗೂ ಅವರ ಹೇಳಿಕೆಯ ಮೇರೆಗೆ, ಶ್ರೀ ರಂಗರವರು ಅಲ್ಲಿ ಉಪಸ್ಥಿತರಿದ್ದರು. ಆ ಪೂರ್ವಭಾವಿ ಸಭೆಯಲ್ಲಿ ಭಾಷಾವಾರು ಪ್ರಾಂತ್ಯರಚನೆ ಅವ್ಯವಹಾರಿಕವೆನ್ನಲಾಯಿತು. ಆದರೆ ನಿಜವಾಗಿ ಭಾಷಾವಾರು ಪ್ರಾಂತ್ಯದ ಅಗತ್ಯತೆಯನ್ನು ಅವಶ್ಯಕವಾಗಿ ಮನದಟ್ಟು ಮಾಡಿಸಲೇ ಬೇಕಿತ್ತು. ಶ್ರೀರಂಗನವರು ಇದೇ ಉದ್ದೇಶದಿಂದ ಘಟನಾ ಸಮಿತಿಯ ಸದಸ್ಯರಾದ ಶ್ರೀಕೆ.ವಿ.ಜೆ.ಯವರು ಹಾಗೂ ಎಸ್.ನಿಜಲಿಂಗಪ್ಪನವರು ಜತೆಗೂಡಿ, ಬೆಳಗಿನ ಜಾವ ಆರು ಗಂಟೆಗೆ ನೆಹರೂ ಮನೆಯಲ್ಲಿ ಉಪಸ್ಥಿತರಾದರು. ಆಪ್ತ ಕಾರ್ಯದರ್ಶಿಯ ಸಲಹೆಯ ಮೇರೆಗೆ ಕ್ಯಾಬಿನೆಟ್‌ಗೆ ಹೊರಟಾಗ, ಅಲ್ಲಿ ನೆಹರೂರವರ ಮುಖದರ್ಶನವಾಯಿತು. ಈ ಸಂದರ್ಭದಲ್ಲಿ ನೆಹರೂರವರು ಬಂದ ಉದ್ದೇಶದ ಬಗ್ಗೆ ಕೇಳಿದಾಗ ಭಾಷಾವಾರು ಪ್ರಾಂತ್ಯ ಎಂದು ಹೇಳುವಷ್ಟರಲ್ಲಿ ನೆಹರೂರವರು

ಕುಪಿತರಾದರು. ಆದರೆ ಶ್ರೀ.ರಂಗರವರ ಮಾತುಗಳು, ನೆಹರೂರವರನ್ನು ಸ್ಥಿಮಿತಕ್ಕೆ ತಂದುವು. ಮುಂದೆ ನೆಹರೂ ಅವರು ಎಲ್ಲವನ್ನು ಆಲಿಸಿ ಮೈಸೂರನ್ನುಳಿದು ಕರ್ನಾಟಕವು ಆರ್ಥಿಕವಾಗಿ ಸಮರ್ಥವಾಗಿದೆಯೇ ಎಂದು ಪ್ರಶ್ನಿಸಿದರು. ಆದರೆ ಇದಕ್ಕೆ ಮೊದಲೇ ತಯಾರಾಗಿ ಬಂದಿದ್ದ ಶ್ರೀ.ಹೆಗ್ಡೆಯವರು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರ ಯೋಜನಾ ಮಂಡಳಿ, ಸದಸ್ಯ ಮತ್ತು ಕೇಂದ್ರ ಶಿಕ್ಷಣ ಮಂತ್ರಿಗಳೂ ಆದ, ಡಾ| ವಿ.ಕೆ.ಆರ್.ವಿ. ರಾವ್‌ರ ಜತೆಗೂಡಿ ಕರ್ನಾಟಕದ ಆರ್ಥಿಕ ಸ್ವಾವಲಂಬಿತನದ ರೂಪು-ರೇಷೆ ಸಿದ್ಧಪಡಿಸಿದ್ದರು. ಇದು ನೆಹರೂರವರಿಗೆ ಮನವರಿಕೆಯಾದ ಫಲವಾಗಿ, ಅಂದು ಘಟನಾ ಸಮಿತಿ ಸಭೆಯಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಚರ್ಚಿಸಿ ವರದಿ ತಯಾರಿಸಲು ಎಂಟು ಜನರ ಉಪಸಮಿತಿಯು ರಚನೆಯಾಯಿತು. ಈತನ್ಮಧ್ಯೆ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಕರ್ನಾಟಕ ಏಕೀಕರಣ ಕೂಗು ಅದರೆಡೆಯಲ್ಲಿ ಕಳೆದುಹೋದಂತಾಯಿತು. ಯಾಕೆಂದರೆ, ಕರ್ನಾಟಕ ಏಕೀಕರಣವು, ಭಾರತ ಸ್ವತಂತ್ರ್ಯವಾಗುವುದರೊಂದಿಗೆ ಆಗದಿರುವುದು ಹಲವರ ನಿರಾಸೆಗೆ ಕಾರಣವಾಯಿತು. ಆದರೂ ಕರ್ನಾಟಕವು ಏಕೀಕರಣದ ಹೋರಾಟ ಮುಂದುವರೆಯಿತು. 1948ರ ಫೆಬ್ರವರಿಯಲ್ಲಿ ದೆಹಲಿಯಲ್ಲಿ ಭಾಷಾವಾರು ಪ್ರಾಂತ್ಯ ಗಳ ಗಡಿಗಳನ್ನು ಗುರುತಿಸಿ, ನಕ್ಷೆಯ ಸಹಿತ ಮಂಡಿಸಲು ತೀರ್ಮಾನಿಸಲಾಯಿತು. ಅಲ್ಲಿ ಕರ್ನಾಟಕ ಏಕೀಕರಣದ ಕುರಿತು ಎಲ್ಲರಲ್ಲೂ ಸರ್ವಸಮ್ಮತವಾದ ಅಭಿಪ್ರಾಯವಿರಬೇಕೆಂದು ಮನಗಾಣಲಾಯಿತು. ಆ ನಿಟ್ಟಿನಲ್ಲಿ ಮಂಗಳೂರಿನ ಅಖಿಲ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಕೆ.ಬಿ. ಜಿನರಾಜ ಹೆಗ್ಡೆ ಮತ್ತು ಹುಬ್ಬಳ್ಳಿಯ ಕರ್ನಾಟಕ ಏಕೀಕರಣ ಮಹಾಸಮಿತಿಯ ಗೌರವ ಕಾರ್ಯದರ್ಶಿಗಳ ಕರೆಯು ಪ್ರಮುಖವಾಗಿದೆ. ಶ್ರೀ.ಹೆಗ್ಡೆಯವರು, ಅಂದು "ದಕ್ಷಿಣ ಸಂಸ್ಥಾನಗಳು, ಮೈಸೂರು ಮತ್ತು ಹೈದರಾಬಾದಿನ ಕನ್ನಡ ಭಾಗಗಳನ್ನು ಒಂದುಗೂಡಿಸಿ ಒಂದು ಬಲಿಷ್ಟ ಅಖಂಡ ಕರ್ನಾಟಕ ಪ್ರಾಂತ್ಯವನ್ನು ಕಟ್ಟುವುದೇ ಅಖಿಲ ಕರ್ನಾಟಕ ಏಕೀಕರಣ ಸಂಘದ ಅಂತಿಮ ಧ್ಯೇಯ ಎಂದೂ, ಈ ತಮ್ಮ ಅಂತಿಮ ಗುರಿಯ ಕಡೆಗೆ ಪ್ರಥಮ ಹೆಜ್ಜೆಯಾಗಿ ಸಂಸ್ಥಾನಗಳನ್ನುಳಿದ ಇತರ ಕರ್ನಾಟಕ ಭಾಗಗಳನ್ನು ಒಟ್ಟುಗೂಡಿಸಿ, ಒಂದು ಕರ್ನಾಟಕ ಪ್ರಾಂತ್ಯ ಕಟ್ಟುವ ಯೋಜನೆಯ ಪ್ರತಿಪಾದನೆಯನ್ನು ೧೯೪೫ರಲ್ಲೇ ಪ್ರಾರಂಭಿಸಲಾಗಿತ್ತು". ಎನ್ನುವ ಮಾತನ್ನು ಎಲ್ಲರಿಗೂ ಮನವರಿಕೆ ಮಾಡಿದರು. ಮೈಸೂರು ಸಂಸ್ಥಾನವು ಭಾರತ ಒಕ್ಕೂಟಕ್ಕೆ ಇನ್ನು ಸೇರಿಲ್ಲವೆಂಬ ತಾಂತ್ರಿಕ ಕಾರಣವೊಂದರಿಂದ,

ಮೈಸೂರು ಸಂಸ್ಥಾನ ಸಹಿತ, ಕರ್ನಾಟಕ ಪ್ರಾಂತ್ಯ ನಿರ್ಮಾಣ ಸಾಧ್ಯವಾಗಿಲ್ಲದಿರುವುದನ್ನು ಮನಗಾಣಿಸಿ ತಮ್ಮ ಆಶಯ ಈಡೇರುವುದೆಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಇದು ಶ್ರೀಹೆಗ್ಡೆಯವರಿಗೆ, ತಮ್ಮ ಗುರಿಯೆಡೆಗೆ ಇದ್ದ ಅಚಲ ವಿಶ್ವಾಸದ ನಿಲುವನ್ನು ವ್ಯಕ್ತಪಡಿಸುವುದು.

ಕರ್ನಾಟಕದ ಜನತೆಯಲ್ಲಿ ಕರ್ನಾಟಕ ಏಕೀಕರಣದ ಕುರಿತು, ಸರ್ವಸಮ್ಮತವಾದ ಅಭಿಪ್ರಾಯ ಮೂಡಿಸಲು ಶ್ರೀ.ಹೆಗ್ಡೆ, ಕೆ.ಆರ್. ಕಾರಂತ್, ಮಾಸ್ತಿ ಅಯ್ಯಂಗಾರ್, ಬಿ. ಶಿವಮೂರ್ತಿ ಶಾಸ್ತ್ರಿ ಮೊದಲಾದ ಮುಂದಾಳುಗಳು 1948ರ ಮೇ 25ರಿಂದ 28ರವರೆಗೆ, ಹೊಸೂರು, ಡೆಂಕಣಿ ಕೋಣೆ, ನೆಲಮಂಗಳ, ಕೃಷ್ಣಗಿರಿ, ಧರ್ಮಪುರಿ, ಗೋಲುಬೆಟ್ಟ ಪಾಳ್ಯ, ಸತ್ಯಮಂಗಲ ಮುಂತಾದ ಪ್ರದೇಶಗಳಲ್ಲಿ ಸಂಚರಿಸಿ ಕರ್ನಾಟಕ ಏಕೀಕರಣ ಮಹಾಸಮಿತಿಯ ಸಭೆ ನಡೆಸಿ, ಸಾರ್ವಜನಿಕ ಭಾಷಣ ಮಾಡಿ, ಜನರನ್ನು ಏಕೀಕರಣದೆಡೆಗೆ ಸೆಳೆಯುವುದರಲ್ಲಿ ಯಶಸ್ವಿಯಾದರು. ಅದರಲ್ಲೂ ಹೆಗ್ಡೆಯವರು ತಮ್ಮ ವಾಕ್ಚಾತುರ್ಯದಿಂದ ಜನರ ಮೇಲೆ ಪ್ರಭಾವ ಬೀರಿದರು ಎನ್ನುವುದರಲ್ಲಿ ಎರಡು ಮಾತಿಲ್ಲ.

ಭಾಷಾವಾರು ಪ್ರಾಂತ್ಯ ರಚನೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರಲ್ಲೇ ಬಿನ್ನಾಭಿಪ್ರಾಯವು ಮನೆ ಮಾಡಿತ್ತು. ಆದರೂ, ಅವರೆಲ್ಲರನ್ನೂ ಒಲಿಸಿ, ಮಣಿಸಿ, ಭಾಷಾವಾರು ಪ್ರಾಂತ್ಯ ರಚನೆಯ ಬೇಡಿಕೆ ಮುಂದಿಟ್ಟ ಶ್ರೀ.ಜಿನರಾಜರ ಕಾರ್ಯನಿಷ್ಠೆ ಅಮೂಲ್ಯವಾದುದು. ಅದಕ್ಕೆ ಸಂಬಂಧಿಸಿದಂತೆ ವರದಿ ನೀಡಲು 17-06-1948ರಲ್ಲಿ ಧರ್ ಆಯೋಗದ ರಚನೆಯು ಅಲಹಾಬಾದಿನ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಎಸ್.ಕೆ. ದರ್ ನೇತೃತ್ವದಲ್ಲಿ ಮಾಡಲಾಯಿತು. ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ ಪ್ರಾಂತ್ಯಗಳ ನಿರ್ಮಾಣ ಅಗತ್ಯತೆ ಮತ್ತು ಅದರಿಂದಾಗುವ ಆಡಳಿತ ಮತ್ತಿತರ ಪರಿಣಾಮಗಳ ಕುರಿತು ಈ ಆಯೋಗ ವರದಿ ನೀಡಬೇಕಿತ್ತು. ಇದರ ಬಗ್ಗೆ ಕೂಲಂಕುಷವಾಗಿ ಅರಿಯಲು ಒಂದು 20 ಪ್ರಶ್ನೆಗಳ ಪ್ರಶ್ನಾವಳಿಯನ್ನು ಸಿದ್ಧಪಡಿಸಿತು. ಅದರ ಉತ್ತರವನ್ನು 24 ದಿನಗಳೊಳಗಾಗಿ ದೆಹಲಿಗೆ ತಲುಪಿಸಬೇಕಿತ್ತು. ಅಲ್ಪ ಸಮಯದಲ್ಲೇ ಮದ್ರಾಸ್ ಅಧಿಪತ್ಯದ ಕರ್ನಾಟಕ ಪ್ರತಿನಿಧಿಗಳನ್ನು ಭೇಟಿಮಾಡಿ ಅವರು ನೀಡಿದ ಉತ್ತರ ಹಾಗೂ ಮನವಿಗಳನ್ನು ಅಖಿಲ ಕರ್ನಾಟಕ ಏಕೀಕರಣ ಸಂಘವು ಹೆಗ್ಡೆಯವರ ಸಹಕಾರದೊಂದಿಗೆ ಪ್ರಕಟಿಸಿ

ಅಭಿಪ್ರಾಯ ಸಂಗ್ರಹಿಸಿತು. ಅದರ ಪ್ರಸ್ತಾವನೆಯ ನುಡಿಗಳಲ್ಲಿ ಅಖಿಲ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ.ಕೆ.ಬಿ. ಜೆ. ಯವರು ಮುಂಬೈನಲ್ಲಿ ನಡೆದ 10ನೇ ಪರಿಷತ್ತನ್ನು ಉದ್ಘಾಟಿಸಿದ, ಶ್ರೀ ಸರ್ದಾರ್ ವಲ್ಲಭ ಬಾಯಿ ಪಟೇಲರ ಕರ್ನಾಟಕ ಪ್ರಾಂತ್ಯ ರಚನೆಯ ಆಶ್ವಾಸನೆಯ ನುಡಿಗಳನ್ನು ನೆನಪಿಸಿದ್ದರು. ಧರ್ ಆಯೋಗ ಮಂಗಳೂರಿಗೂ ಭೇಟಿನೀಡಿ ಹೆಗ್ಡೆ ಮೊದಲಾದ ಮುಂದಾಳುಗಳನ್ನು ಭೇಟಿ ಮಾಡಿತು. ಈ ಸಂದರ್ಭದಲ್ಲಿ ಮದ್ರಾಸ್‌ನ ನಿವೃತ್ತ ಡಿಸ್ಟ್ರಿಕ್ ಮತ್ತು ಸೆಷನ್ಸ್ ನ್ಯಾಯಾಧೀಶ, ಎಂ. ರಾಮಚಂದ್ರರು ಆಯೋಗದ ಪ್ರಶ್ನೆಗಳಿಗೆ ಉತ್ತರಿಸಿ, ಕರ್ನಾಟಕ ಪ್ರಾಂತ್ಯ ರಚನೆಯ ಅಗತ್ಯತೆಯನ್ನು ಸ್ಪಷ್ಟಪಡಿಸಿದರು.

ಮುಂದೆ ಕರ್ನಾಟಕ ಏಕೀಕರಣ ಪರಿಷತ್ತಿನ 11ನೇ ಸಮಾವೇಶ ಬಳ್ಳಾರಿಯಲ್ಲಿ ನಡೆದಾಗ, ಹೆಗ್ಡೆಯವರು ಅತ್ಯಂತ ಉತ್ಸಾಹದಿಂದ ಅದರಲ್ಲಿ ಭಾಗವಹಿಸಿದರು. ಧರ್ ಆಯೋಗವು ಡಿಸೆಂಬರ್ 10ರಂದು ಘಟನಾ ಸಮಿತಿಗೆ, ಕರ್ನಾಟಕ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಒಮ್ಮತ ಅಭಿಪ್ರಾಯವಿಲ್ಲ ಎಂದು ವರದಿ ಸಲ್ಲಿಸಿತು. ಮುಂದೆ ಕೆ.ಆರ್.ಕಾರಂತರ ಅಧ್ಯಕ್ಷಿತೆಯಲ್ಲಿ ಕರ್ನಾಟಕ ವಕೀಲರ ಸಮ್ಮೇಳನ ಧಾರವಾಡದಲ್ಲಿ 1948ರಲ್ಲಿ ಡಿಸೆಂಬರ್‌ನಲ್ಲಿ ನಡೆದಾಗ, ಕರ್ನಾಟಕ ಏಕೀಕರಣದ ತುರ್ತ ಅಗತ್ಯತೆಯನ್ನು ಮನಗಾಣಲಾಯಿತು.

ದಿನಾಂಕ 6.3.1949ರಂದು, ಗುಲ್ಬರ್ಗಾದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ಕೊನೆಯ ಬಾರಿಗೆ ಸಮಾವೇಶಗೊಂಡಿತು. ಇದರ ಅಧ್ಯಕ್ಷತೆ ವಹಿಸಿದವರು ಶ್ರೀಕೆ.ಬಿ. ಜಿರಾಜ ಹೆಗ್ಡೆಯವರು ಕರ್ನಾಟಕದ ಬಹುತೇಕ ರಾಜಕೀಯ ಮುಂದಾಳುಗಳು, ಸಾಹಿತಿಗಳು ಅಂದು ಉಪಸ್ಥಿತರಿದ್ದರು. ಅದೇ ಸಂದರ್ಭದಲ್ಲಿ ಉತ್ತಂಗಿ ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ 32ನೆಯ ಕನ್ನಡ ಸಾಹಿತ್ಯ ಸಮ್ಮೇಳನವೂ ಗುಲ್ಬರ್ಗಾದಲ್ಲಿ ನಡೆಯಿತು. ಅವರು, ಕರ್ನಾಟಕ ಏಕೀಕರಣಕ್ಕಾಗಿ ಎಲ್ಲರ ಒಗ್ಗಟ್ಟಿನ ಬಲಬೇಕೆಂದರು. ೪ನೇ ತಾರೀಕು ನಡೆದ ಸಾಹಿತ್ಯ ಸಮ್ಮೇಳನಕ್ಕೆ ಸಾಕಷ್ಟು ಜನತೆ ಸೇರದೆ ಹೋದರೂ ಮರುದಿವಸದ ಏಕೀಕರಣ ಅಧಿವೇಶನದಲ್ಲಿ ಸುಮಾರು 5,000ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದುದು ಅದರ ಯಶಸ್ಸಿನ ದ್ಯೋತಕವಾಗಿದೆ. ಮೈಸೂರು ಘಟನಾ ಸಮಿತಿಯ ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯಂ ಅವರು ಪರಿಷತ್ತನ್ನು ಉದ್ಘಾಟಿಸಿ, ಕರ್ನಾಟಕದವರು ಮೈಸೂರು ಘಟನಾ ಸಮಿತಿಯ ಅಧ್ಯಕ್ಷರಾದ

ಶ್ರೀ ಸುಬ್ರಹ್ಮಣ್ಯಂ ಅವರು ಪರಿಷತ್ತನ್ನು ಉದ್ಘಾಟಿಸಿ, ಕನಾಟಕದವರು ಮೈಸೂರು ಸಂಸ್ಥಾನವು ಏಕೀಕರಣದಿಂದ ದೂರವಿದೆ ಎಂದು ಭಾವಿಸುವುದು ತಪ್ಪು ಎಂದೂ ಕನ್ನಡಿಗರು ಏಕೀಕರಣ ಕಾರ್ಯವನ್ನು ಮೈಸೂರು ಮಹಾರಾಜರನ್ನಿಟ್ಟುಕೊಂಡೇ ಮಾಡಬೇಕು. ಹಾಗಿದ್ದರೆ ಮಾತ್ರ ಕೆಲಸ ಸಾಧ್ಯವಾಗುತ್ತದೆ. ಕರ್ನಾಟಕದವರು ಮೈಮರೆತು ದುಡುಕಬಾರದು, ಮೈಸೂರಿನವರ ಮೇಲೆ ರೇಗಿ ಬೀಳಬಾರದು ಎಂದರು. ಅದರಿಂದ ಶಾಂತಿ ಭಂಗವಾಗಬಹುದೆಂಬ ಮಾತನ್ನು ಹೇಳಿದರು. ಆದರೆ ಆ ಸಂದರ್ಭದಲ್ಲಿ ಪರಿಷತ್ತಿನ ಅಧ್ಯಕ್ಷರಾಗಿದ್ದ ಹೆಗ್ಡೆಯವರು ಈ ಮಾತನ್ನು ಒಪ್ಪಲು ತಯಾರಿರಲಿಲ್ಲ. ಮೊದಲೇ, ನೇರ ನುಡಿ ವ್ಯಕ್ತಿತ್ವದವರಾದ ಅವರು ತಮ್ಮ ವಿಚಾರವನ್ನು ವ್ಯಕ್ತಪಡಿಸಿದರು. ಸುಬ್ರಹ್ಮಣ್ಯಂ ಅವರ ನಿಲುವನ್ನು ವಿರೋಧಿಸುತ್ತಾ "ಮೈಸೂರು ಬೇರೆ ಕರ್ನಾಟಕ ಬೇರೆ ಎನ್ನುವ ಮಾತೇ ಸಲ್ಲದು, ಪರಸ್ಪರ ದೂರುವಿಕೆ ಸರಿಯಲ್ಲ" ಎಂದು ಕಟುವಾಗಿ ಹೇಳುತ್ತಾ ಸುಬ್ರಹ್ಮಣ್ಯರವರು ಹಾಗೂ ಮೈಸೂರಿನ ಮಂತ್ರಿಗಳಂತಹ ಪ್ರತಿಷ್ಠಿತ ವ್ಯಕ್ತಿಗಳ ಪ್ರತ್ಯೇಕತಾ ಭಾವನೆ ದೂರಾಯಿತೆಂದರೆ ಮೈಸೂರು ವಿಲೀನಕರಣಕ್ಕೆ ಯಾವ ತಡೆಯೂ ಇರಲಾರದೆಂದು ನಾನೇ ಸ್ಪಷ್ಟವಾಗಿ, ಧೈರ್ಯವಾಗಿ ಹೇಳುತೇನೆ, ಎನ್ನುವ ಕೆಚ್ಚೆದೆಯ ಮಾತನ್ನು ಹೇಳಿದರು. ಇದು, ಹೆಗ್ಡೆಯವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ತದನಂತರ ರಾಷ್ಟ್ರೀಯ ಕಾಂಗ್ರೆಸ್ ಕರ್ನಾಟಕ ಏಕೀಕರಣದತ್ತ ನಿರಾಸಕ್ತಿ ತಳೆಯುವುದನ್ನು ಕಂಡು 1949 ರಲ್ಲಿ ಹೆಗ್ಡೆ ಮತ್ತು ಹಲವಾರು ಮುಖಂಡರು, ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದರು. 1950, ಜನವರಿ 26ರಂದು ಸಂವಿಧಾನ ಅಸ್ತಿತ್ವಕ್ಕೆ ಬಂದ ನಂತರ ಭಾರತ ಗಣರಾಜ್ಯವಾಯಿತು. ಆದರೂ ಇನ್ನೂ ಕರ್ನಾಟಕ ಏಕೀಕರಣದ ಕಾರ್ಯ ಪೂರ್ಣವಾಗದಿರುವುದು ಎಲ್ಲರ ಅಸಮಾಧಾನಕ್ಕೆ ಕಾರಣವಾಯಿತು. ಅದೇ ಉದ್ದೇಶ ಪೂರ್ತಿಗಾಗಿ, ಜಿನರಾಜ ಹೆಗ್ಡೆಯಿಂದ ಜತೆಗೂಡಿ ಹಲವಾರು ಮುಖಂಡರು ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತನ್ನು ನಡೆಸಿ, ಹಾವೇರಿಯಲ್ಲಿ ಮೊದಲ ಸಭೆಯನ್ನು 1955ರಲ್ಲಿ ನಡೆಸಿದರು. ತದನಂತರ, ಹೆಗ್ಡೆಯವರು "ಕಿಸಾನ್ ಮಜ್ದೂರ್ ಸಭಾ"ವನ್ನು ಸೇರಿ ಏಕೀಕರಣಕ್ಕಾಗಿ ಅವಿರತ ಶ್ರಮಿಸಿದರು. 1953ರಲ್ಲಿ ರಾಜ್ಯ ಪುನರ್ ವಿಂಗಡನಾ ಆಯೋಗದ ರಚನೆಯಾದಾಗ ಮನವಿಯನ್ನು ಸಿದ್ಧಪಡಿಸಲು, ಕರ್ನಾಟಕ ಪ್ರದೇಶ ಕಾಂಗ್ರೆಸ್

ಸಮಿತಿಯೊಂದನ್ನು ರಚಿಸಲಾಯಿತು. ಹೆಗ್ಡೆಯವರು ಇದರ ಸದಸ್ಯರಾಗಿದ್ದರು. ಮುಂದೆ 1954ರಲ್ಲಿ ಆಯೋಗ, ಮಂಗಳೂರಿಗೆ ಭೇಟಿಯಿತ್ತಾಗ ಹೆಗ್ಡೆಯವರು ಕರ್ನಾಟಕ ಏಕೀಕರಣ ಅವಶ್ಯಕವಾಗಿ ಆಗಲೇ ಬೇಕೆಂದು ಒತ್ತಾಯಿಸಿದರು. ಇದರೆಲ್ಲರ ಪರಿಣಾಮವಾಗಿ ಕರ್ನಾಟಕ ಏಕೀಕರಣ ಹೋರಾಟಗಾರ ಬಿ. ಜಿನರಾಜ ಹೆಗ್ಡೆಯವರ ಕನಸಿನ ಕೂಸಾದ ಏಕೀಕೃತ ಕರ್ನಾಟಕ, ನವೆಂಬರ್ 1, 1956ರಂದು ಅಸ್ತಿತ್ವಕ್ಕೆ ಬಂತು. ಕೊನೆಗೂ ಅವರೆಲ್ಲರ ಅವಿರತ ಶ್ರಮಕ್ಕೆ ಪ್ರತಿಫಲ ದೊರೆಯಿತು. ಏಕೀಕರಣದ ಕನಸು ನನಸಾಗಿ, ಎಲ್ಲರ ಮೊಗದಲ್ಲಿ ಮಂಧಹಾಸ ಮೂಡಿತು.

ಶ್ರೀ.ಜಿನರಾಜ ಹೆಗ್ಡೆಯವರ ಏಕೀಕರಣಕ್ಕಾಗಿ ಮಾಡಿದ ಕಾರ್ಯಗಳನ್ನು ಇಂದಿಗೂ ಹಿರಿಯರು, ಜ್ಞಾಪಿಸಿಕೊಳ್ಳುತ್ತಾರೆ. ಏಕೀಕರಣದ ಚರಿತ್ರೆಯ ಪ್ರತಿಯೊಂದು ಪುಟದಲ್ಲೂ ಹೆಗ್ಡೆಯವರ ಹೆಸರು ಸಮ್ಮಿಲಿತವಾಗಿದೆ. ಏಕೀಕರಣ ಹೋರಾಟವನ್ನು ತಮ್ಮ ಉಸಿರಾಗಿಸಿಕೊಂಡ ಶ್ರೀ ಜಿನರಾಜರು ಎಂದೆಂದಿಗೂ ಅವಿಸ್ಮರಣೀಯರು. ತುಳು ಚಳವಳಿಯಲ್ಲಿ ಯಶಸ್ಸು ಕಾಣದ ಸಂದರ್ಭದಲ್ಲಿ ಶ್ರೀ. ಕೆ. ಆರ್. ಕಾರಂತರೊಂದಿಗೆ ಸೇರಿಕೊಂಡು, ಕೆ.ಬಿ. ಜಿಯವರು ಕರ್ನಾಟಕ ಏಕೀಕರಣಕ್ಕಾಗಿ ಅಹರ್ನಿಶಿ ದುಡಿದುದನ್ನು ಪ್ರತ್ಯಕ್ಷವಾಗಿ ಕಂಡ ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರೂ ನೆನಪಿಸಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಪಾಪು ಎಂದು ಪ್ರಸಿದ್ಧರಾದ ಶ್ರೀ ಪಾಟೀಲ ಪುಟ್ಟಪ್ಪನವರು ವಿದ್ಯಾರ್ಥಿ ದೆಸೆಯಲ್ಲಿ ಏಕೀಕರಣ ಕಾರ್ಯದಲ್ಲಿ ಬಹುವಾಗಿ ತೊಡಗಿಸಿಕೊಳ್ಳುವುದಕ್ಕೆ ಶ್ರೀ. ಜಿನರಾಜ ಹೆಗ್ಡೆ ಹಾಗೂ ಇತರರು ಕಾರಣರೆಂದು ಸ್ಮರಿಸುತ್ತಾರೆ. ಕರ್ನಾಟಕಕ್ಕೆ ಹೆಗ್ಡೆಯವರು ನೀಡಿದ ಅಮೋಘ ಸೇವೆಯಿಂದಾಗಿ, ಅವರು ಕರ್ನಾಟಕ ಏಕೀಕರಣ ಚರಿತ್ರೆಯಲ್ಲಿ ಸದಾ ಉರಿಯುತ್ತಿರುವ ನಂದಾ ದೀಪದಂತೆ, ಬೆಳಗುವ ನಕ್ಷತ್ರವಿದ್ದಂತೆ. ಆ ದೀಪದ ಬೆಳಕು, ತನ್ನ ಸುಖವನ್ನು ತ್ಯಾಗ ಮಾಡಿ ಇತರರಿಗೆ ದಾರಿ ದೀಪವಾಗುತ್ತದೆ. ಅದೆ ರೀತಿ ಶ್ರೀ.ಜಿನರಾಜ ಹೆಗ್ಡೆಯವರೂ ಕೂಡ.

ನಮ್ಮೆಲರ ಮುಂದೆ ಹೆಗ್ಗಡೆಯವರು ಓರ್ವ ಅಪೂರ್ವ ಏಕೀಕರಣ ಹೋರಾಟಗಾರರಾಗಿ, ಮುಂದಾಳುವಾಗಿ, ಆದರ್ಶ ವ್ಯಕ್ತಿಯಾಗಿ ಮಾರ್ಗದರ್ಶಕರಾಗಿದ್ದಾರೆ. 1970 ಅಗಸ್ಟ್ 27 ರಂದು ಅವರು ಎಲ್ಲರಿಂದಲೂ ಕಣ್ಮರೆಯಾಗಿ ಇಹಲೋಕ ತ್ಯಜಿಸಿದರು.

ಕೋಟ ರಾಮಕೃಷ್ಣ ಕಾರಂತ

ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಅಗ್ರಮಾನ್ಯರಲ್ಲಿ ಓರ್ವರಾದ ಕೋಟ ರಾಮಕೃಷ್ಣ ಕಾರಂತರು ಜನಿಸಿದ್ದು, ಒಂದು ಬಡ ಸುಸಂಸ್ಕೃತ ಬ್ರಾಹ್ಮಣ ಕುಟುಂಬದಲ್ಲಿ ಅವರು 1894ನೇ ಇಸವಿ ಮೇ ಒಂದರಂದು ದಕ್ಷಿಣ ಕನ್ನಡ ಜಿಲ್ಲೆಯ ಕೋಟದ ಬಳಿ ಇರುವ ಪಾರಂಪಳ್ಳಿಯಲ್ಲಿ ಜನಿಸಿದರು. ಅವರ ತಂದೆ ಶ್ರೀ ಶೇಷ ಕಾರಂತರು ಕೋಟದಲ್ಲಿ ಜವುಳಿ ವ್ಯಾಪಾರ ಮಾಡುತ್ತಿದ್ದರು. ತಾಯಿಯ ಹೆಸರು ಲಕ್ಷ್ಮಿ. ಈ ದಂಪತಿಗಳಿಗೆ ಏಳು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಅವರಲ್ಲಿ ಹಿರಿಯವರೇ ರಾಮಕೃಷ್ಣ ಕಾರಂತರು. ಕುಟುಂಬದ ಆರ್ಥಿಕ ಸ್ಥಿತಿ ಅಷ್ಟಾಗಿ ಚೆನ್ನಾಗಿಲ್ಲದಿದ್ದರೂ ಮಗನಿಗೆ ವಿದ್ಯಾಭ್ಯಾಸ ನೀಡಿದರು. ಕಾರಂತರ ವಿದ್ಯಾಭ್ಯಾಸ ಮೊದಲು ಕೋಟದಲ್ಲಿ, ಆಮೇಲೆ ಕುಂದಾಪುರದ ಹೈಸ್ಕೂಲಿನಲ್ಲಾಯಿತು. ಬಿ.ಎ.ಯನ್ನು ಬೆಂಗಳೂರಿನ, ಸೆಂಟ್ರಲ್ ಕಾಲೇಜಿನಲ್ಲಿ ಮುಗಿಸಿದ ನಂತರ ಕಾನೂನು ಶಿಕ್ಷಣವನ್ನು ಮುಂಬಾಯಿಯಲ್ಲಿ ಸಂಧ್ಯಾ ಕಾಲೇಜಿನಲ್ಲಿ ಮುಗಿಸಿದರು. ಆ ಸಂದರ್ಭದಲ್ಲಿ ಹಗಲಲ್ಲಿ ಉಪಧ್ಯಾಯ ವೃತ್ತಿಯನ್ನು ಜೊತೆಜೊತೆಗೆ ಕೈಗೊಂಡಿದ್ದರು.

ಕಷ್ಟದಿಂದ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ, ಜಿಲ್ಲೆಯ ಮುಖ್ಯ ನಗರವಾದ ಮಂಗಳೂರಿನಲ್ಲಿ ತಮ್ಮ ವಕಾಲತ್ತು ವೃತ್ತಿಯನ್ನು 1919ರಲ್ಲಿ ಆರಂಭಿಸಿದರು. ತಮ್ಮ ಕುಶಾಗ್ರ ಬುದ್ಧಿ, ನಿಷ್ಠೆ ಮತ್ತು ಕಕ್ಷಿಗಾರರಿಗೆ ಅನ್ಯಾಯವಾಗಬಾರದೆಂಬ ಹಟ, ಪ್ರಯತ್ನ ಮೊದಲಾದ ಗುಣಾವಳಿಯಿಂದ ವಕೀಲ ವೃತ್ತಿಯನ್ನು ಆರಂಭಿಸಿದ ಕೆಲವು ವರ್ಷಗಳಲ್ಲೇ ಇಡೀ ಜಿಲ್ಲೆಯಲ್ಲಿ ಸುಪ್ರಸಿದ್ಧ ವಕೀಲರಾದರು. ಅವರಿಗೆ ಪ್ರಖಾಂಡ ಕಾನೂನಿನ ಪಾಂಡಿತ್ಯವಿದ್ದಿತ್ತು. ವಕೀಲಿ ವೃತ್ತಿಗೆ ಬೇಕಾದಂತಹ ಕಲೆ ಹಾಗೂ ಕುಶಲತೆ ಅವರಲ್ಲಿತ್ತು. ಗಾಂಧೀಜಿಯವರ ಅಸಹಕಾರ ಚಳವಳಿಯಲ್ಲಿ ಸೇರಿದ ಕಾರಂತರು 1922ರಲ್ಲಿ ವಕೀಲಿ ವೃತ್ತಿಯನ್ನು ತೊರೆದರು. ಅವರೊಬ್ಬ ಅದ್ವಿತೀಯ ನ್ಯಾಯವಾದಿಯಾಗಿದ್ದರು.

ಮಂಗಳೂರು ನಗರ ಸಭೆಗೆ 1925ರಲ್ಲಿ ಮೊದಲು ಆಯ್ಕೆಯಾದ ಕಾರಂತರು ಹಲವು ಬಾರಿ ಪುನಃ ಪುನಃ ಚುನಾಯಿತರಾದರು. 1926ರಲ್ಲಿ ಅವರು ಕಾಂಗ್ರೆಸ್ ಪಕ್ಷದ ವತಿಯಿಂದ ಮದರಾಸಿನ ವಿಧಾನ ಪರಿಷತ್ತಿಗೆ ಕಮಲಾದೇವಿ ಚಟ್ಟೋಪಧ್ಯಾಯ ವಿರುದ್ದ ನಿಂತು ಗೆದ್ದರು. 1937ರಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಕಾರಂತರು ಪುತ್ತೂರು - ಕಾಸರಗೋಡು

ಕ್ಷೇತ್ರದಲ್ಲಿ ಮದ್ರಾಸು ಶಾಸನಸಭೆಗೆ ಸದಸ್ಯರಾಗಿ ಆಯ್ಕೆಯಾದರು. ಶ್ರೀ ಟಿ. ಪ್ರಕಾಶಂ ಅವರು ರಚಿಸಿದ ಮಂತ್ರಿಮಂಡಲದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ನೇಮಕಗೊಂಡರು. ರಾಷ್ಟ್ರದ ರಾಜಕಾರಣದಲ್ಲಿ ಹಾಗೂ ಸ್ವಾತಂತ್ರ್ಯ ಸಮರದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕಾರಂತರು ಹಲವು ಬಾರಿ ಸೆರೆಮನೆವಾಸ ಅನುಭವಿಸಿದರು. ಜೈಲುವಾಸದಿಂದಾಗಿ ಅವರಿಗೆ ಕಾಲಿನ ವಾತದ ಕಾಯಿಲೆ ಅಂಟಿಕೊಂಡಿತು. 1952ರ ಚುನಾವಣೆಯಲ್ಲಿ ಸೋತರು. ಆಗ ಪ್ರತಿಷ್ಠೆಯ ಕಂದಾಯ ಇಲಾಖೆಯು ಅವರ ಕೈಯಲ್ಲಿತ್ತು.

ಕಾಂರತರು ಕಂದಾಯ ಮಂತ್ರಿಯಾಗಿದ್ದಾಗ ಜಮೀನುದಾರಿ ಪದ್ಧತಿಯನ್ನು ನಿರ್ಮೂಲನಗೊಳಿಸುವ ಕ್ರಮ ಕೈಗೊಂಡಿದ್ದರು. ಇದು ದೇಶದಲ್ಲೇ ಪ್ರಪ್ರಥಮ ಭೂಸುಧಾರಣಾ ಕ್ರಮ. ಕಾರಂತರೆಂದೂ ಜಾತೀಯವಾದಿಗಳಾಗಿರಲಿಲ್ಲ.

ಗಾಂಧೀಜಿಯವರು 1948ರ ಜನವರಿಯಲ್ಲಿ ಬಿರ್ಲಾ ಭವನದಲ್ಲಿ ಉಪವಾಸ ಮಾಡುತ್ತಿದ್ದಾಗ ಅವರನ್ನು ಕಂಡು ಮಾತನಾಡಿಸಿ ಭಾಷಾವಾರು ಪ್ರಾಂತೀಕರಣದ ಅಗತ್ಯದ ಕುರಿತಂತೆ ಮಾತನಾಡಿದ್ದರು. ಅಲ್ಲಿಯೇ ಇದ್ದ ಆಂಧ್ರ ನಾಯಕ ಡಾ. ಪಟ್ಟಾಭಿ ಸೀತಾರಾಮಯ್ಯನವರು ಕಾರಂತರ ಪೌರುಷದ ಕುರಿತು ಗಾಂಧೀಜಿ ಮುಂದೆ ಹೊಗಳಿದ್ದರಂತೆ. ಆದರೆ ಅಲ್ಲೇ ಇದ್ದ ಆಗಿನ ಗೃಹ ಸಚಿವ ಸರ್ದಾರ್ ವಲ್ಲಭಬಾಯಿ ಪಟೇಲರು ಬೇರೆ ವಿಷಯದಲ್ಲಿ ಮಗ್ನರಾಗಿದ್ದರಂತೆ.

ಪಾಕಿಸ್ತಾನಕ್ಕೆ ಭಾರತ ಸರಕಾರ 500 ಕೋಟಿ ರೂಪಾಯಿ ಕೊಡಬೇಕೆಂದು ಗಾಂಧೀಜಿ ಹಠ ಹಿಡಿದು ಉಪವಾಸ ವ್ರತ ಕೈಗೊಂಡುದು ಪಟೇಲರಿಗೆ ತಲೆನೋವನ್ನುಂಟುಮಾಡಿತ್ತು. ಆದ್ದರಿಂದ ಅಂದಿನ ಮಾತು ಹೆಚ್ಚು ಮುಂದುವರಿಯಲಿಲ್ಲ. ಮುಂದೆ 5 ದಿನ ಕಳೆಯುವಾಗ ಗಾಂಧೀಜಿ ಗುಂಡಿಗಾಹುತಿಯಾಗಿ ಸತ್ತರು.

ಕಾರಂತರಿಗೆ ಭಾಷಾ ಅಲ್ಪ ಸಂಖ್ಯಾತನದ ಬಿಸಿ ಮದರಾಸಿನಲ್ಲಿ 1926ರಿಂದಲೇ ತಾಗಿರಬೇಕು ಯಾಕೆಂದರೆ, ಮದರಾಸು ಪ್ರಾಂತ್ಯದ 28 ಜಿಲ್ಲೆಗಳಲ್ಲಿ ಪೂರ್ಣ ಕನ್ನಡದ ಜಿಲ್ಲೆಯೆಂದರೆ ದಕ್ಷಿಣ ಕನ್ನಡ. ಮದರಾಸು ಪಟ್ಟಣ ಒಂದೆಡೆಯಾದರೆ, ದಕ್ಷಿಣಕನ್ನಡ ಇನ್ನೊಂದು ಮೂಲೆಯಲ್ಲಿದ್ದುದರಿಂದ ಇಲ್ಲಿನ ಬೆಳವಣಿಗೆಗೆ ಯಾವ ರಾಜಕಾರಣವೂ ಮುತುವರ್ಜಿ ವಹಿಸಿರಲಿಲ್ಲ. ಆದ್ದರಿಂದ ಕನ್ನಡ ಭಾಷೆ ಮಾತನಾಡುವವರದೇ ಆದ ಒಂದು

ರಾಜ್ಯವಿದ್ದರೆ ತಮ್ಮ ಜಿಲ್ಲೆಗೆ ಹೆಚ್ಚಿನ ಸಮರ್ಥ ಆಡಳಿತ ಸಿಗುವ ಸಂಭವವಿದೆಯೆಂದು ಅವರಿಗೆ ತೋರಿರಬೇಕು. 1931ರಲ್ಲೇ ಅವರು ಭಾಷಾ ಪ್ರಾಂತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಆ ಮೇಲೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನಲ್ಲಿ ಅವರು ನಾಯಕರಾಗಿ ದುಡಿದರು. ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ಬಳ್ಳಾರಿ ಮುಂತಾದ ಕನ್ನಡ ಪ್ರದೇಶಗಳ ನಾಯಕರೊಡನೆ ಅವರ ಒಡನಾಟ ಹೆಚ್ಚಿತು. ಕರ್ನಾಟಕ ಏಕೀಕರಣಕ್ಕಾಗಿ ತಮ್ಮನ್ನು ತಾವೇ ತೊಡಗಿಸಿಕೊಂಡರು.

ಆದ್ದರಿಂದ ಮದ್ರಾಸಿನಿಂದ ಮಂಗಳೂರಿಗೆ ಮರಳಿದವರು, ವಿಚಾರವಾಣಿ ಎಂಬ ವಾರಪತ್ರಿಕೆಯನ್ನು ಪುತ್ತೂರಿನಲ್ಲಿ ತಮ್ಮ ಶಿವರಾಮ ಕಾರಂತರೊಂದಿಗೆ ಆರಂಭಿಸಿದರು. ಈ ಪತ್ರಿಕೆಯ ಮೂಲಕ ತಮ್ಮ ವಿಚಾರಧಾರೆಗಳನ್ನು ಜನರ ಮುಂದಿಡುತ್ತಿದ್ದರು.

ಭಾಷಾವಾರು ಪ್ರಾಂತೀಕರಣಕ್ಕಾಗಿ ಫಜಲ್ ಆಲಿ ಆಯೋಗ ರಚನೆಯಾದುದು ಕಾರಂತರಿಗೆ ಸಂತೋಷವನ್ನೇ ತಂದಿತ್ತು. ಮಲೆಯಾಳಿ ನಾಯಕ ಸರ್ದಾರ ಫಣಿಕ್ಕರನ್ನೊಳಗೊಂಡ ಆಯೋಗದಲ್ಲಿ ಹೃದಯನಾಥ ಕುಂಜ್ರು, ಹಾಗೂ ಫಜಲ್ ಆಲಿ ಇದ್ದರೂ ಅವರು ಮಂಗಳೂರಿಗೆ ಆಗಮಿಸಿರಲಿಲ್ಲ. ಕಾರಂತರಲ್ಲದೆ ಇನ್ನೂ ಅನೇಕರು ಈ ಆಯೋಗಕ್ಕೆ ಸಾಕ್ಷಿ ನೀಡಿದ್ದರು. ಕಾಸರಗೋಡಿನ ಚಂದ್ರಗಿರಿ ನದಿಯ ಉತ್ತರ ಭಾಗವು ಕರ್ನಾಟಕಕ್ಕೆ ಸೇರುವುದು ನ್ಯಾಯಬದ್ಧವೆಂದು ಅವರು ಒಪ್ಪಿದರು ಕೂಡಾ, ಆದರೆ ಹೇಳಿದ್ದೊಂದು ಮಾಡಿದ್ದೊಂದು. ರಾಜ್ಯ ಪುನರ್ವಿಂಗಡನಾ ವರದಿಯಂತೆ ಇಡೀ ಕಾಸರಗೋಡು ತಾಲೂಕು ಕೇರಳಕ್ಕೆ ಸೇರಬೇಕೆಂದು ಶಿಫಾರಸು ಆಯಿತು. 766 ಚದರ ಮೈಲು ವಿಸ್ತೀರ್ಣದ ಕಾಸರಗೋಡು ತಾಲೂಕಿನಲ್ಲಿ ಹಿಂದೆ ತುಳುನಾಡಿಗೆ ಸೇರಿದ್ದರೂ ಕೂಡಾ, ಈಗ ಪರಿಸ್ಥಿತಿ ಬದಲಾದುದರಿಂದ ಚಂದ್ರಗಿರಿ ಹೊಳೆಯ ಉತ್ತರದ ಅಂಶದ 274 ಚದರ ಮೈಲು ವಿಸ್ತೀರ್ಣದ ಭಾಗವನ್ನು ಮಾತ್ರ ಕೇಳಿದ್ದರು. ತಾಲೂಕಿನ ಒಟ್ಟು ಜನ ಸಂಖ್ಯೆ 4,11,000ದಲ್ಲಿ 1,91,000 ಜನ ಈ ಪ್ರದೇಶದಲ್ಲಿದ್ದು, ಅವರಲ್ಲಿ ಹೆಚ್ಚಿನವರ ಮನೆಮಾತು ತುಳು ಮತ್ತು ಕನ್ನಡ. ಈ ಪ್ರದೇಶ 1921ರಿಂದಲೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸಿನಲ್ಲೇ ಒಳಗೊಂಡಿತ್ತು. ಈ ಪ್ರದೇಶದ 144 ಶಾಲೆಗಳಲ್ಲಿ ಕನ್ನಡ ಮಾಧ್ಯಮವಿದ್ದು ಅವುಗಳಲ್ಲಿ 19,583 ಮಂದಿ ವಿದ್ಯಾರ್ಥಿಗಳಿದ್ದರು. ಮಲೆಯಾಳಿ ಮಾಧ್ಯಮದ ಬರೇ 20 ಶಾಲೆಗಳಿದ್ದು 2863

ವಿದ್ಯಾರ್ಥಿಗಳಿದ್ದರು. ಕಾರಂತರಿಗೆ ಈ ಅನ್ಯಾಯವನ್ನು ಸಹಿಸಲಾಗಲಿಲ್ಲ. ಕೂಡಲೇ ಕಾಸರಗೋಡು ಪ್ರಾಂತೀಕರಣ ಸಮಿತಿ ಅಸ್ತಿತ್ವಕ್ಕೆ ಬಂತು. ಕಾರಂತರು ಶಿಷ್ಯ ಮಂಡಲಗಳನ್ನು ದೆಹಲಿಗೆ ಕೊಂಡುಹೋದರು. ಆಗ ಕಾಸರಗೋಡು ಪ್ರದೇಶವನ್ನು ಪಾರ್ಲಿಮೆಂಟ್‌ನಲ್ಲಿ ಪ್ರತಿನಿಧಿಕರಿಸುತ್ತಿದ್ದ ಬೆನಗಲ್ ಶಿವರಾಯರು ಅಲ್ಲಿ ನಡೆದ ದಾವಣಗೆರೆ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿ, ಸ್ವಾತಂತ್ರ್ಯದ ನಂತರ ಮೊದಲು ತೀರ್ಮಾನಿಸಬೇಕಾದ ಸಂಗತಿಗಳಲ್ಲಿ ಭಾಷಾವಾರು ಪ್ರಾಂತ್ಯ ನಿರ್ಮಾಣ-ಕರ್ನಾಟಕ ಏಕೀಕರಣ ಇವು ಅಗ್ರಸ್ಥಾನ ಪಡೆಯಬೇಕು ಎಂದಿದ್ದರು. 1950ರಲ್ಲಿ ಗುರುಪುರದಲ್ಲಿ ಏಕೀಕರಣ ಸಮ್ಮೇಳನಕ್ಕೆ ಆಚಾರ್ಯ ಕೃಪಾಲನಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದವರು ಆಗ ಜಿಲ್ಲೆಗೆ ಆಗಮಿಸಿ ಇದರಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಈ ಸಮ್ಮೇಳನ ಕಾರ್ಯಕರ್ತರು ಶ್ರೀ ಕೆ. ಆರ್ ಕಾರಂತರು ಶ್ರೀ ಕೆ.ಬಿ. ಜಿನರಾಜ ಹೆಗಡೆ, ಶ್ರೀ ಸೂರ್ಯನಾರಾಯಣ ಅಡಿಗರು ಇವರ ರಾಜಕೀಯ ಶಿಷ್ಯರು ಎಂದರೆ ತಪ್ಪಾಗಲಾರದು. ಶ್ರೀ ಹೆಗಡೆಯವರು ಏಕೀಕರಣದ ಕಾರ್ಯಗಳಲ್ಲಿ ಇವರ ಬಲಗೈ ಬಂಟರಾದರು. ರಾಜ್ಯ ಪುನರ್‌ವಿಂಗಡನಾ ಕಾಯಿದೆಯನ್ವಯ ಹೊಸ ಮೈಸೂರು ಪ್ರಾಂತ್ಯ ರಚನೆಯಾದ ಬಳಿಕ 1956 ಹೈ ಕೋರ್ಟಿನಲ್ಲಿ ವಕೀಲ ವೃತ್ತಿ ನಡೆಸುವ ಸಲುವಾಗಿ ಅವರು ಬೆಂಗಳೂರಿಗೆ ತೆರಳಿದರು. ಅಲ್ಲಿಯೂ ಓರ್ವ ಉತ್ತಮ ನ್ಯಾಯವಾದಿಯೆಂದು ಹೆಸರು ಗಳಿಸಿದರು. 1974ರ ಜನವರಿ 7ರಂದು ಹೈಕೋರ್ಟಿನಲ್ಲಿ ವಾದ ಮಾಡುತ್ತಿರುವಾಗಲೇ ಅವರು ಮಿದುಳಿನ ರಕ್ತ ಹೆಪ್ಪುಗಟ್ಟುವಿಕೆಗೊಳಗಾದರು. ಹಾಗೂ ಆ ಬಳಿಕ ಅವರು ಮನೆ ಬಿಡಲಿಲ್ಲ. 1980ನೇ ಫೆಬ್ರವರಿ 1ರಂದು ನಿಧನರಾದರು.

ಭಾಷೆಯ ತಳಹದಿಯಲ್ಲಿ ರಾಜ್ಯ ರಚನೆಯಾಗಬೇಕು; ಛಿದ್ರ ವಿಛಿದ್ರವಾಗಿರುವ ಕರ್ನಾಟಕ ಒಂದಾಗಲೇ ಬೇಕು ಎಂದು ಹೋರಾಡಿದ ಅಗ್ರಮಾನ್ಯ ಮುಖಂಡರಲ್ಲಿ ಕೆ. ಆರ್. ಕಾರಂತರು ಪ್ರಮುಖರು. ಸ್ವಾತಂತ್ರ್ಯ ದೊರಕಿದ ಪ್ರಾರಂಭದಲ್ಲಿ ಎಂದರೆ 1948ರಲ್ಲಿ ಕಾಸರಗೋಡಿನಲ್ಲಿ ತಿ.ತಾ. ಶರ್ಮರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ಜರಗಿದಾಗ ಅದರ ಅಂಗವಾಗಿ ಏಕೀಕರಣ ಗೋಷ್ಠಿ ಕೂಡಾ ಸೇರಿತ್ತು. ಅದರಲ್ಲಿ ಶ್ರೀಗಳಾದ ದಿವಾಕರ, ನಿಜಲಿಂಗಪ್ಪ, ಜಿನರಾಜ ಹೆಗಡೆ, ನಾರಾಯಣ ಕಿಲ್ಲೆ ಮೊದಲಾದ ಪ್ರಮುಖರು ಭಾಗವಹಿಸಿ ಕನ್ನಡನಾಡು ಒಂದಾಗಬೇಕೆಂದು ಒಕ್ಕೊರಲಿನಿಂದ ಉದ್ಘೋಷಿಸಿದರು.

ಖಾದ್ರಿ ಶಾಮಣ್ಣರೆನ್ನುವಂತೆ:-

"ಕಾರಂತರಿಗೆ ಎರಡು ಆದರ್ಶ, ಸ್ವತಂತ್ರ ಭಾರತ ಹಾಗೂ ಏಕೀಕೃತ ಕರ್ನಾಟಕ, ಹರಿದು ಹಂಚಿಹೋಗಿದ್ದ ಕನ್ನಡನಾಡನ್ನು ಒಂದುಗೂಡಿಸಲು ಅವರು ಪಟ್ಟಶ್ರಮ ಅನುಪಮ. ಜಿನರಾಜ ಹೆಗಡೆ ಅವರೊಡನೆ ಇಡೀ ಕರ್ನಾಟಕದಲ್ಲಿ ಸಂಚರಿಸಿ ಕರ್ನಾಟಕ ಏಕೀಕರಣಕ್ಕೆ ತಕ್ಕ ವಾತಾವರಣ ನಿರ್ಮಿಸಿದರು. ಹಲವು ಅಡ್ಡಿ ಆತಂಕಗಳಿದ್ದರೂ ಎದೆಗುಂದಲಿಲ್ಲ. ಏಕಚಿತ್ತದಿಂದ ಪ್ರಯತ್ನ ಸಾಗಿಸಿದರು." ನಿಸ್ಸಂದೇಹವಾಗಿ ಕರ್ನಾಟಕ ಏಕೀಕರಣದ ಆದ್ಯ ಪ್ರವರ್ತಕರೊಬ್ಬರಾಗಿದ್ದರು ಶ್ರೀ ಕಾರಂತರು.

ಏಕೀಕರಣ ಚಳವಳಿ ಮೈಲುಗಲ್ಲುಗಳು

ಕನ್ನಡ ಭಾಷೆಯನ್ನಾಡುವ ಬ್ರಿಟಿಷ್ ಇಂಡಿಯಾದ ಪ್ರದೇಶದವರಿಗೆ ಪ್ರತ್ಯೇಕ ಪ್ರಾಂತ್ಯವೊಂದರ ನಿರ್ಮಾಣವಾಗಬೇಕೆಂಬ ಚಳವಳವು 1906 ಅಥವಾ 1907ರಲ್ಲಿ ಆರಂಭವಾಯಿತೆಂದು ನನ್ನ ಮಿತ್ರರಾದ ಕೆಲವು ಕನ್ನಡ ಸಾಹಿತಿಗಳು ಹೇಳುತ್ತಾರೆ. ಅದು ನನಗೆ ಸ್ವತಃ ತಿಳಿದಿಲ್ಲ. ಆದರೆ 1917ರಲ್ಲಿ ಭಾರತಕ್ಕೆ ಬಂದಿದ್ದ ಆಗಿನ ಸೆಕ್ರಟರಿ ಆಫ್ ಸ್ಟೇಟ್ ಆಗಿದ್ದ ಮೊಂಟೆಗೊರಿಗೆ, ಕನ್ನಡಿಗರಿಗೆ ಪ್ರತ್ಯೇಕ ಪ್ರಾಂತ್ಯವನ್ನು ನಿರ್ಮಿಸಬೇಕೆಂದು ಬ್ರಿಟಿಷ್ ಸರ್ಕಾರವನ್ನು ಪ್ರಾರ್ಥಿಸುವ ಮನವಿಯನ್ನರ್ಪಿಸಿದುದರ ಒಂದು ಮುದ್ರಿತ ನನ್ನೊಡನೆ ಇದೆ. ಇದರಿಂದೇನೂ ಪರಿಣಾಮವಾಗಲಿಲ್ಲ.

ಈ ದಿಶೆಯಲ್ಲಿ ನಿಜವಾದ ಕಾರ್ಯಾರಂಭವು 1920ರಲ್ಲಿ ಆಯಿತೆನ್ನಬಹುದು. ಗಾಂಧೀಜಿಯವರ ಮುಖಂಡತ್ವದಲ್ಲಿ ಕಾಂಗ್ರೆಸ್ ಘಟನೆಯು ಬದಲಾಯಿಸಲ್ಪಟ್ಟು ಭಾಷಾವಾರು ಪ್ರಾಂತ್ಯಗಳನ್ನು ಅದರಲ್ಲಿ ಸೇರಿಸಲಾಯಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಧ್ವಜದಡಿಯಲ್ಲಿ ಸ್ವಾತಂತ್ರ್ಯ ಚಳವಳಿಗಳು ಆಗಾಗ ನಡೆಯುತ್ತಿದ್ದು, ಆಗ ಸ್ವರಾಜ್ಯವನ್ನು ಗಳಿಸುವುದರ ನಂತರ ಕರ್ನಾಟಕ ಪ್ರಾಂತ್ಯ ನಿರ್ಮಾಣದ ಧ್ಯೇಯವೇ ಪ್ರಮುಖವಾಗಿತ್ತು.

ಆ ಬಳಿಕ 1928ರಲ್ಲಿ ಸರ್ವಪಕ್ಷೀಯ ಸಮ್ಮೇಳನ (All - Parties Conference)ವು ಭಾರತದ ಪುನರ್ಘಟನೆಯ ಕುರಿತೂ, ಕರ್ನಾಟಕ ಪ್ರಾಂತ್ಯ ನಿರ್ಮಾಣದ ಕುರಿತೂ ವರದಿ ಮಾಡಿದುದು ಉಲ್ಲೇಖನೀಯ ಘಟನೆ. ಆ ವರದಿಯಲ್ಲಿ ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕೆ ಅಗ್ರಸ್ಥಾನ ಕೊಡಲಾಗಿತ್ತು. ಆದರೆ ಆಗ ಕೂಡಾ ಈ ತತ್ವವು ಬ್ರಿಟಿಷ್ ಇಂಡಿಯಾದ ಪ್ರದೇಶಗಳನ್ನು ಸಂಬಂಧಿಸಿತ್ತಲ್ಲದೆ, ದೇಶಿಯ ರಾಜ್ಯಗಳನ್ನಲ್ಲ.

1936-37ರಲ್ಲಿ ಭಾಷಾವಾರು ರಾಜ್ಯ ನಿರ್ಮಾಣದ ಧ್ಯೇಯವು ಕಾಂಗ್ರೆಸಿನ ಚುನಾವಣಾ ಕಾರ್ಯಕ್ರಮದಲ್ಲಿ ವಿಶಿಷ್ಟವಾಗಿ ಆಳವಡಿಸಲ್ಪಟ್ಟು, ಮದ್ರಾಸು ಮತ್ತು ಮುಂಬಯಿಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ರಚನೆಯಾದೊಡನೆ ಕಾಂಗ್ರೆಸ್ ಕಾರ್ಯಕಾರಿ ಮಂಡಲದ ಒಪ್ಪಿಗೆ ಪಡೆದು ಆ ಸರಕಾರಗಳು ಆಂಧ್ರ, ಕೇರಳ ಮತ್ತು ಕರ್ನಾಟಕ ಭಾಷಾವಾರು ಪ್ರಾಂತ್ಯಗಳ ರಚನೆಯಾಗಬೇಕೆಂದು ಬ್ರಿಟಿಷ್ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ನಿರ್ಣಯಗಳನ್ನು 1937-38ರಲ್ಲಿ ತಮ್ಮ ಶಾಸನ ಸಭೆಗಳಲ್ಲಿ ಮಂಜೂರು ಮಾಡಿದುವು.

<u>ಸ್ಪಷ್ಟ ನಿರ್ಣಯ :</u>

ಈ ಚಳವಳದೊಡನೆ ನನಗೆ 1938ನೇ ಮೇ ತಿಂಗಳಲ್ಲಿ ಸಂಪರ್ಕವಾಯಿತು. ನಾನು ಆಗ ಧಾರವಾಡದಲ್ಲಿ ನಡೆದ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ ವಹಿಸಿದೆ. ಆ ಪರಿಷತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಕಾಣಲು ಒಂದು ಶಿಷ್ಟ ಮಂಡಳಿಯನ್ನು ರಚಿಸಿ, ಆ ಮಂಡಳಿಯು ವಾರ್ಧಾದಲ್ಲಿ ಅದೇ ವರ್ಷ ಸಪ್ಟಂಬರದಲ್ಲಿ ಸಮಿತಿಯನ್ನು ಭೇಟಿಯಾಯಿತು. ಕಾಂಗ್ರೆಸ್ ಸಮಿತಿಯ ಸಭೆಯ ಸುಭಾಸ್ ಚಂದ್ರ ಭೋಸರ ಅಧ್ಯಕ್ಷತೆಯಲ್ಲಿ ನಡೆದು, ಭಾಷಾವಾರು ಪ್ರಾಂತ್ಯ ರಚನೆಯ ಪರವಾದ ಸ್ಪಷ್ಟ ನಿರ್ಣಯವೊಂದನ್ನು ಅಂಗೀಕರಿಸಿತು. ಅದು ಕರ್ನಾಟಕದ ರಚನೆಯ ಕುರಿತೂ ಸ್ಪಷ್ಟವಾಗಿ ಹೇಳಿತ್ತು. "ಕಾಂಗ್ರೆಸ್ ತಕ್ಕ ಅಧಿಕಾರವನ್ನು ಪಡೆದೊಡನೆ ಭಾರತ ಸರ್ಕಾರದ ಮುಂದಿನ ಕಾರ್ಯಕ್ರಮದ ಅಂಗವಾಗಿ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು" ಎಂದು "ಆಂದ್ರ, ಕರ್ನಾಟಕ ಮತ್ತು ಕೇರಳಗಳ ಜನತೆಗೆ" ಅದು ಆಶ್ವಾಸನೆಯನ್ನಿತ್ತಿತ್ತು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಕಾಂಗ್ರೆಸ್ ಸರ್ಕಾರಗಳು ಅಧಿಕಾರ ತ್ಯಾಗ ಮಾಡಿ ೧೯೪೨ನೇ ಅಗೋಸ್ತಿನಲ್ಲಿ "ಭಾರತದಿಂದ ತೊಲಗಿರಿ" ಚಳವಳ ಆರಂಭವಾಯಿತು.

1949ನೇ ಜನವರಿಯಲ್ಲಿ ಮುಂಬಯಿಯಲ್ಲಿ ಜರಗಿದ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತನ್ನು ಉದ್ಘಾಟಿಸುತ್ತ ಸರ್ದಾರ್ ವಲ್ಲಭಭಾಯಿ ಪಟೇಲರು ಕಾಂಗ್ರೆಸ್ಸಿನ ಹಿಂದಿನ ಆಶ್ವಾಸನೆಗಳನ್ನು, ಪುನರುಚ್ಚರಿಸಿ ಕನ್ನಡ ಜನತೆಯು "ಹರಿಹಂಚಾದ ಕನ್ನಡ ಪ್ರದೇಶಗಳು ಒಂದಾಗಿ, ಒಂದು ಪ್ರಾಂತ್ಯ ಸರ್ಕಾರದೊಡನೆ, ವಿಶ್ವವಿದ್ಯಾಲಯದೊಡನೆ ಮತ್ತು ತನ್ನದೇ ಆದ ಅಭಿಮಾನಿ ಪ್ರಾಂತ್ಯ ಜೀವನದೊಡನೆ ಸಂಯುಕ್ತ ಕರ್ನಾಟಕವು ಉದಯವಾಗುವುದಕ್ಕೆ ಹೆಚ್ಚು ಸಮಯ ಕಾಯಬೇಕಾಗಿಲ್ಲವೆಂದರು". ಇದರ ಬೆನ್ನಿನಲ್ಲೇ 1945-46ರ ಕಾಂಗ್ರೆಸ್ ಚುನಾವಣಾ ಘೋಷಣೆಯೂ ಸಿದ್ಧವಾಯಿತು.

ಬ್ರಿಟಿಷರು ತೊಲಗಲು ನಿಶ್ಚೈಸಿದೊಡನೆ ರಾಜ್ಯಾಂಗ ಸಭೆಯು ೧೯೪೬ನೇ ನವಂಬರ ತಿಂಗಳಿನಲ್ಲಿ ಸೇರಿ ಕಾರ್ಯೋನ್ಮುಖವಾಯಿತು. ನಿಜವಾದ ಅಧಿಕಾರವು ಕಾಂಗ್ರೆಸಿಗೆ ಸಿಗತೊಡಗಿದ ಬಳಿಕ ತಾನೇ, ತಾನು ಕೆಲವು ದಶಕಗಳಿಂದ ಕೊಟ್ಟಿದ್ದ ಆಶ್ವಾಸನೆಯನ್ನು ಕಾರ್ಯಗತಗೊಳಿಸಲು ಅದು ಸಂಕೋಚಪಡತೊಡಗಿತು. ದೆಹಲಿಯಲ್ಲಿ ರಾಜ್ಯಾಂಗ ಸಭೆಯ ಚುನಾಯಿತ ಪ್ರತಿನಿಧಿಗಳ ಸಭೆಯೊಂದು 1946ನೇ ದಶಂಬರದಲ್ಲಿ ಜರಗಿ, ಅದರಲ್ಲಿ ರಾಜ್ಯಾಂಗ ಸಭೆಯು ತನ್ನ ಪ್ರಥಮಾಧಿವೇಶನದಲ್ಲೇ ಭಾಷಾವಾರು ರಾಜ್ಯ ನಿರ್ಮಾಣದ ತತ್ವವನ್ನು ಸ್ವೀಕರಿಸಿ ಅದಕ್ಕೆ ಅಗತ್ಯವುಳ್ಳ ವ್ಯವಸ್ಥೆ ಮಾಡಬೇಕೆಂಬ ನಿರ್ಣಯವು ಶ್ರೀ. ಆರ್.ಆರ್. ದಿವಾಕರರಿಂದ ಮಂಡಿಸಲ್ಪಟ್ಟಿತು. ಅದನ್ನು ಡಾ.ಎಂ.ಆರ್ ಜಯಕರ್, ಡಾ.ಶ್ಯಾಮ ಪ್ರಸಾದ ಮುಖರ್ಜಿ ಮುಂತಾದವರು ಪುಷ್ಟೀಕರಿಸಿದರು. ನಿರ್ಣಯವು ಸರ್ವಾನಿಮತದಿಂದ ಸ್ವೀಕೃತವಾಯಿತು. 1947ರಲ್ಲಿ ಮುಂಬಯಿ ಮತ್ತು ಮದ್ರಾಸು ಶಾಸನ ಸಭೆಗಳು ಪುನಃ ಭಾಷಾವಾರು ಪ್ರಾಂತ್ಯ ನಿರ್ಮಾಣದ ನಿರ್ಣಯಗಳನ್ನು ಮಾಡಿದುವು. 1947ನೇ ಅಗೋಸ್ತು 15ರಂದು ಅಧಿಕಾರವು ವರ್ಗಾಯಿಸಲ್ಪಟ್ಟಿತು. ಅಂದಿನಿಂದ ಕಾಂಗ್ರೆಸ್ ಎರಡು ವಿಧದಲ್ಲಿ ಪರಸ್ಪರ ವಿರುದ್ಧವಾಗಿ ಮಾತಾಡತೊಡಗಿತು. ಕೆಲವರು ಹಿಂದಿನ ಆಶ್ವಾಸನೆಗಳನ್ನು ಮುರಿಯಲು ಯತ್ನಿಸುತ್ತಿದ್ದರು. ಇನ್ನು ಕೆಲವು ಮಂತ್ರಿಗಳೂ ಕಾಂಗ್ರೆಸ್ ನಾಯಕರೂ ಪ್ರಾಂತೀಯ ಶಾಸನ ಸಭೆಗಳಲ್ಲೂ ಹೊರಗೂ ಈ ಕೇಳಿಕೆಯನ್ನು ಬಲವಂತಪಡಿಸುತ್ತಿದ್ದರು. ರಾಜ್ಯಾಂಗ ಘಟನೆಯನ್ನು ಸಿದ್ಧಪಡಿಸಲು ನಿಯೋಜಿತವಾಗಿದ್ದ ರಾಜ್ಯಾಂಗ ಸಭೆಯಲ್ಲಿ ಬಹುಮತವಿದ್ದರೂ ಈ ಆಶ್ವಾಸನೆಗಳನ್ನು ನೆರವೇರಿಸಲು ಅದರಿಂದ ಸಾಧ್ಯವಾಗಲಿಲ್ಲ.

ಕಾಸರಗೋಡು ದುರಂತ

1947ನೇ ದಶಂಬರದಲ್ಲಿ ಇನ್ನೊಂದು ಅಖಿಲ ಕರ್ನಾಟಕ ಪರಿಷತ್ತು ಕಾಸರಗೊಡಿನಲ್ಲಿ ಶ್ರೀ.ದಿವಾಕರ ಅಧ್ಯಕ್ಷತೆಯಲ್ಲಿ ಜರಗಿರುದುದನ್ನು ನೆನೆಯುವಾಗ ಮಿಶ್ರ ಭಾವನೆಗಳು ಬರುತ್ತಿವೆ. ಪರಿಷತ್ತು ಹರಿಹಂಚಾಗಿ ಹಲವು ಆಡಳಿತಗೊಳಗಾಗಿರುವ ಕರ್ನಾಟಕದ ಜನರು ಪಡುವ ಕಷ್ಟಗಳನ್ನು ಸರ್ಕಾರಕ್ಕೆ ನಿವೇದಿಸಿ, ಕ್ಷಿಪ್ರದಲ್ಲೇ ಏಕೀಕರಣವಾಗಬೇಕೆಂದು ಒತ್ತಾಯ ಪಡಿಸಿತು. ನಾನು ಮಿಶ್ರಭಾವನೆ ಎಂದುದು ಏಕೆಂದರೆ 1953ರಲ್ಲೂ ಕಾಸರಗೋಡಿನಲ್ಲಿ ಇನ್ನೊಂದು ಕರ್ನಾಟಕ ಪರಿಷತ್ತು ಜರಗಿದರೂ, ಈಗ ಈ ಭಾಗವನ್ನು ಜನರ ಆಶೆ-ಆಕಾಂಕ್ಷೆಗಳ ವಿರುದ್ಧ ವಿಚ್ಛೇದಿಸಿ ಕೇರಳಕ್ಕೆ ಉಡುಗೊರೆಯಾಗಿ ಕೊಡಲಾಗಿದೆ. ಇದು ವೇದನಾಮಯ ವಿಷಯ.

ಇದಕ್ಕಿಂತ ತುಸು ಮೊದಲು ಅಂದರೆ 1947ನೇ ಸಪ್ಟಂಬರ ಅಥವಾ ಅಕ್ಟೋಬರದಲ್ಲಿ ದಾವಣಗೆರೆಯಲ್ಲಿ ಮುಂಬಯಿಯ ಮಂತ್ರಿ ಶ್ರೀ. ಎಂ. ಪಿ. ಪಾಟೀಲರ ಅಧ್ಯಕ್ಷತೆಯಲ್ಲಿ ಒಂದು ಪರಿಷತ್ತು ಜರಗಿತ್ತು. ಅದನ್ನು ನಾನು ಉದ್ಘಾಟಿಸಿದ್ದೆ. ಆ ಪರಿಷತ್ತಿನಲ್ಲಿ ನಮ್ಮ ಕೆಲವು ಮೈಸೂರಿನ ಗೆಳೆಯರು ಕರ್ನಾಟಕ ಪ್ರಾಂತ್ಯವು ಬ್ರಿಟಿಷ್ ಇಂಡಿಯಾದ ಕನ್ನಡ ಪ್ರದೇಶಗಳನ್ನಲ್ಲದೆ ಮೈಸೂರು ಸಂಸ್ಥಾನವನ್ನು ಒಳಗೊಂಡಿರಬೇಕೆಂದು ಎಷ್ಟು ಒತ್ತಾಯ ಪಡಿಸಿದ್ದರೆಂಬುದು ನನಗೆ ನೆನಪಿದೆ. ಆದರೆ ಅಂಥವರೇ ಮತ್ತೆ ಕರ್ನಾಟಕದ ನಿರ್ಮಾಣವು ಸಾದ್ಯವೆನಿಸಿಕೊಳ್ಳುವ ಸಂದರ್ಭದಲ್ಲಿ ಅದನ್ನು ವಿರೋಧಿಸಿದುದು ವಿಪರ್ಯಾಸವೆನ್ನಬೇಕು.

ನನಗೆ ಇನ್ನೊಂದು ಶಿಷ್ಟ ಮಂಡಲದ ನೆನಪಿದೆ. ಆಗಿನ ಕರ್ನಾಟಕದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಅದರ ಮುಖಂಡರಾಗಿದ್ದು, ಅದು ದೆಹಲಿಗೆ 1948ನೇ ಜನವರಿಯಲ್ಲಿ ಮಹಾತ್ಮಾಜಿಯವರ ಮರಣದ ಐದಾರು ದಿನಗಳ ಹಿಂದೆ ಹೋಗಿತ್ತು. ನಾವು ಆರೇಳು ಜನ 1948ನೇ ಜನವರಿ 28ರಂದು ಬಿರ್ಲಾ ಮಂದಿರದಲ್ಲಿ ಮಹಾತ್ಮ ಗಾಂಧಿಯವರನ್ನು ಅವರ ಕೋಣೆಯಲ್ಲಿ ಕಂಡು ಕರ್ನಾಟಕ ನಿರ್ಮಾಣದ ಅತ್ಯಾವಶ್ಯಕತೆಯನ್ನು ವಿವರಿಸಿದೆವು. ಎರಡನೆಯ ದಿನ ಅವರ ಸಮಕ್ಷಮದಲ್ಲಿ ಅಲ್ಲೇ ಜರಗಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ಭೇಟಿಯಾದೆವು, ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದರು ಅಂಥ ಪ್ರಾಂತ್ಯ ನಿರ್ಮಾಣದ ವಿರುದ್ಧ

ಕಾರವಾರದಿಂದ ತಂತಿಗಳು ಬಂದಿವೆಯೆಂದಾಗ, ಭಾರತಕ್ಕೆ ಸ್ವರಾಜ್ಯವನ್ನೀಯುವುದರ ವಿರುದ್ಧ ಲಂಡನಿಗೆ 1947 ಅಗೋಸ್ತು 15ರಂದು ತಂತಿಗಳು ಹೋಗಬಹುದೆಂದು ನಾನು ಸಮಿತಿಗೆ ಹೇಳಿದುದಕ್ಕೆ ಎಲ್ಲರೂ ಗಹಗಹಿಸಿ ನಕ್ಕಿದ್ದು ನನಗೆ ನೆನಪಿದೆ. ಶಿಷ್ಟ ಮಂಡಳಿಯ ಭೇಟಿಯ ಬಳಿಕ ತಾ 09.02.1948ರಲ್ಲು ಕಾಂಗ್ರೆಸ್ ಅಧ್ಯಕ್ಷರು, ಕರ್ನಾಟಕ ಮತ್ತು ಆಂಧ್ರಗಳೊಳಗೆ ಭೇದ ಮಾಡುವುದಿಲ್ಲವೆಂದು ಕರ್ನಾಟಕದ ಜನರಿಗೆ ಆಶ್ವಾಸನೆಯನ್ನೀಯುವ ಪತ್ರವನ್ನು ಶ್ರೀ.ಎಸ್.ನಿಜಲಿಂಗಪ್ಪನವರಿಗಿತ್ತರು.

ಅನಂತರ ನಡೆದುದನ್ನು ಹೆಚ್ಚು ವಿವರಿಸುವ ಅವಶ್ಯವಿಲ್ಲ 1948ರಲ್ಲಿ ರಾಜ್ಯಾಂಗ ಸಭೆಯ ನಿರ್ದೇಶನದಲ್ಲಿ ಧರ್ ನಿಯೋಗವು ದೇಶವನ್ನಿಡೀ ಸುತ್ತಾಡಿ, ಕರ್ನಾಟಕಕ್ಕೆ ಕೂಡಾ ಬಂತು. 1000ಕ್ಕಿಂತಲೂ ಹೆಚ್ಚು ಮನವಿಗಳನ್ನು 700 ಸಾಕ್ಷ್ಯಗಳನ್ನು ಪರಿಶೀಲಿಸಿ ಅದೇ ವರ್ಷ ದಶಂಬರದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗೆ ಅವಸರ ಮಾಡುವುದು ಅಗತ್ಯವಿಲ್ಲವೆಂದು ಶಿಫಾರಸ್ಸು ಮಾಡಿತು. ಈ ವರದಿ ದೇಶದಲ್ಲೆಲ್ಲಾ ಅತ್ಯಂತ ನಿರಾಶೆಯನ್ನುಂಟುಮಾಡಿತು.

ಜನತೆಯ ಭಾವನೆಯನ್ನು ಶಾಂತಗೊಳಿಸಿ ಉದ್ರೇಕವನ್ನು ಇಳಿಸಲು ಕಾಂಗ್ರೆಸ್ ಮತ್ತೆ ತುಸು ಸಮಯದ ಬಳಿಕ ಜಯಪುರದಲ್ಲಿ ಸೇರಿ, ಪ್ರಧಾನಿ ಸರ್ದಾರ್ ವಲ್ಲಭಬಾಯಿ ಪಟೇಲ್ ಮತ್ತು ಡಾ. ಪಟ್ಟಾಭಿ ಸೀತಾರಾಮಯ್ಯರನ್ನೊಳಗೊಂಡ ಇನ್ನೊಂದು ಸಮಿತಿಯನ್ನು ನೇಮಿಸಿತು. ಅದರ ವರದಿಗೆ ಜೆ.ವಿ.ಪಿ. ವರದಿಯೆಂದು ಹೆಸರಾಗಿದೆ. ಅದು "ಜನತೆಯ ಭಾವನೆ ಅಷ್ಟು ಪ್ರಭಲವಾಗಿದ್ದರೆ, ಪ್ರಜಾಸತ್ತಾವಾದಿಗಳಾದ ತಾವು ಅದಕ್ಕೆ ಬಗ್ಗಬೇಕು ಎಂದಿತು. ಮತ್ತೆ ಸ್ವಲ್ಪ ಸಮಯ ಹೀಗೆ ಇದ್ದು 1951 ರ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಪುನಃ ಕರ್ನಾಟಕದ ಜನತೆಗೆ ಆಶ್ವಾಸನೆಗಳತಿತು. ಆದರೆ ಆಂಧ್ರರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಪೊಟ್ಟಿ ಶ್ರೀ.ರಾಮುಲು ಉಪವಾಸವನ್ನು ಆರಂಭಿಸಿದರು. ಅದು ಆರಂಭವಾದಾಗ ಪ್ರಧಾನಿ ನೆಹರೂರವರು ಅದನ್ನು ಖಂಡಿಸುತ್ತಾ ಅಂಥ ಒತ್ತಾಯಕ್ಕೆ ತಾನಾಗಲೀ ತನ್ನ ಸರ್ಕಾರವಾಗಲೀ ಮಣಿಯದೆಂದರು. ಆದರೆ ಕೆಲವು ದಿನಗಳಲ್ಲೇ ಆಂಧ್ರದಲ್ಲಿ ರೈಲುಗಳು ನಿಲ್ಲಿಸಲ್ಪಟ್ಟುವು. ಜನರು ಆಕ್ರೋಶದಿಂದ ಲಕ್ಷಗಟ್ಟಲೆ ಬೆಲೆಯ ರೈಲು ಸಾಮಗ್ರಿಗಳನ್ನು ಸರಕುಗಳನ್ನೂ ನಾಶಮಾಡಿದರು. ನೆಹರೂರವರೂ ಅವರ ಸರ್ಕಾರವೂ

ಉಸಿರೆತ್ತದೆ ಮಣಿದರು. ಆಂಧ್ರ ರಾಜ್ಯದ ಬಗ್ಗೆ ಆಶ್ವಾಸನೆ ಕೊಟ್ಟದಲ್ಲದೆ, ಅದು ಕಾರ್ಯಗತವೂ ಆಯಿತು. ನಾವು ನಡುದಾರಿಯಲ್ಲೇ ಉಳಿದೆವು.

ಬಿರುಸು ಚಳವಳ

1953ನೇ ಮೇ ಮತ್ತು ದಶಂಬರ ತಿಂಗಳುಗಳಲ್ಲಿ ದಾವಣಗೆರೆ ಮತ್ತು ಹಂಪಿಗಳಲ್ಲಿ ಸರ್ವ ಪಕ್ಷೀಯ ಪರಿಷತ್ತುಗಳು ಜರಗಿ ಆ ತಿಂಗಳುಗಳಲ್ಲಿ ಸುಮಾರು 500 ಜನರು ಉತ್ತರ ಕರ್ನಾಟಕದಲ್ಲಿ ಬಂಧಿಸಲ್ಪಟ್ಟರು. ನನಗೆ ತಿಳಿದ ಮಟ್ಟಿಗೆ ಬಿಹಾರ್ - ಬಂಗಾಳ ಅಥವಾ ಒರಿಸ್ಸಾ - ಬಿಹಾರ್ ನಂಥ ಗಡಿವಿವಾದಗಳ ಚಳವಳಿಗಳಿದ್ದುವಲ್ಲದೆ, ಹೆಚ್ಚು ಪ್ರಮಾಣದ ಘುನರ್ಘಟನೆಗಳಿಗೆ ಆಗ ಒತ್ತಾಯವಿದ್ದಿಲ್ಲವೆಂದು ತೋರುತ್ತದೆ. ಉದಾಹರಣೆಗೆ ಮಹಾರಾಷ್ಟ್ರೀಯರು ತಮಗೊಂದು ಪ್ರಾಂತ್ಯಬೇಕಂದು ಕೇಳುತ್ತಿರಲಿಲ್ಲ. ಬ್ರಿಟಿಷರ ಕಾಲದಲ್ಲಿ ಹೆಚ್ಚಾಗಿ ರಾಜಕೀಯ ಮತ್ತು ಇತರ ಅಕಲ್ಪಿತ ಕಾರಣಗಳಿಗಾಗಿ ಪ್ರಾಂತ್ಯಗಳ ರಚನೆಯಾಗಿದ್ದುದರಿಂದ ಭಾಷಾವಾರು ಪ್ರಾಂತ್ಯಗಳ ರಚನೆ ಅವಶ್ಯವಿತ್ತೆಂಬುದು ನಿಸ್ಸಂದೇಹ. ಆಂಧ್ರ ರಾಜ್ಯ ನಿರ್ಮಾಣವಾದ ಬಳಿಕ ಕರ್ನಾಟಕದ ಜನರ ಒತ್ತಾಯವನ್ನು ತಡೆಯಲಾರದೆ ಕೊನೆಗೆ ಸರ್ಕಾರವು ರಾಜ್ಯ ಪುನರ್ಘಟನಾ ಸಮಿತಿಯನ್ನು ನೇಮಿಸಿತು. ಅದರ ಕಾರ್ಯಕಲಾಪದ ಮಟ್ಟಿಗೆ ಸದ್ಯ ವಿವರಿಸುವ ಅಗತ್ಯವಿಲ್ಲ. ಈ ಸಮಿತಿಯು ಭಾಷಾವಾರು ರಾಜ್ಯ ರಚನೆಯು ಒಪ್ಪದಿದ್ದರೂ ಅದು ಭಾಷಾವಾರು ರಾಜ್ಯ ರಚನೆಯನ್ನೇ ಶಿಫಾರಸು ಮಾಡಿತು. ಪಂಜಾಬು ಮತ್ತು ಮುಂಬಯಿಗಳಲ್ಲಿ ಮಾತ್ರ ಬಹುಶಃ ಸಮತೂಕವನ್ನುಂಟುಮಾಡಲಿಕ್ಕೋ ಏನೋ, ದ್ವಿಭಾಷೆ ರಾಜ್ಯ ರಚನೆಯನ್ನು ಶಿಫಾರಸು ಮಾಡಿತು. ಕಳೆದ ದಶಂಬರ ಮತ್ತು ಜನವರಿಯಲ್ಲಿ ನಡೆದ ಗಲಭೆ ಬಹಳ ದುಃಖಪೂರಿತವಾದುದು. ನಾನು ಕಳೆದ ಫೆಬ್ರುವರಿಯಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಲು ಮುಂಬಯಿ ನಗರದಲ್ಲಿ ಕೆಲವು ದಿನ ತಂಗಿದ್ದೆ. ಭಾಷೆಯ ಜನರು ಕೆಲವು ವೇಳೆ ತಮ್ಮ ನೆರೆಕರೆಯ ಇನ್ನೊಂದು ಭಾಷೆಯ ಜನರ ವಿರುದ್ಧ ಕೂಡಾ ದುಷ್ಕೃತ್ಯಗಳನ್ನು ಮಾಡುವುದನ್ನು ನೋಡಿ ಒಂದು ಹೊಸ ಪಾಠವನ್ನು ಕಲಿತಂತಾಯಿತು.

ಕರ್ನಾಟಕದ ವಿಷಯದಲ್ಲಿ ನಾವು ಪಡೆದುದಕ್ಕೆ ಅಭಾರಿಗಳಾಗಿರಬೇಕು. ಆದರೆ ಗಡಿ ಪ್ರದೇಶಗಳಲ್ಲಿ ಹಲವೆಡೆ ವಿಶೇಷ ಅನ್ಯಾಯವಾಗಿದೆ. ಕಾಸರಗೊಡು, ಮದ್ರಾಸು ಶಾಸನ

ಸಭೆಗಳಲ್ಲಿ ನನ್ನಿಂದ ಬಹುಕಾಲ ಪ್ರತಿನಿಧಿಸಲ್ಪಟ್ಟ ಪ್ರದೇಶ. ಇದರ ವಿಷಯ ನನಗೆ ಚೆನ್ನಾಗಿ ಗೊತ್ತಿದೆ. ಇದರ ಬಗ್ಗೆ ನಾನು ಮೂರು ಬಾರಿ ದೆಹಲಿಗೆ ಹೋಗಿದ್ದೆ. ಶತಮಾನಗಳಿಂದ ಕರ್ನಾಟಕ ಪ್ರದೇಶಕ್ಕೆ ಸೇರಿದ್ದ ಈ ಪ್ರದೇಶದ ಎರಡು ಲಕ್ಷ ಕನ್ನಡಿಗರ ಭವಿತವ್ಯದ ಅವಿಭಾಜ್ಯ ಅಂಗವೆಂದು ಯಾರಿಗೂ ನಾವು ಮನಗಾಣಿಸಲು ಶಕ್ತರಿದ್ದೆವಲ್ಲದೆ ಅದು ಜನರ ಸರ್ವಾನುಮತ್ತದ ಅಪೇಕ್ಷೆಯೂ ಆಗಿತ್ತು. ಮದ್ರಾಸು ಮತ್ತು ದೆಹಲಿಯಲ್ಲಿ ಅದರ ಶಾಸನ ಸಭಾಪ್ರತಿನಿಧಿಗಳು ಆ ಬಗ್ಗೆ ಒಕ್ಕೊರಲಿನಿಂದ ಪ್ರತಿಪಾದಿಸಿದ್ದರು. ನಿಷ್ಪಕ್ಷಪಾತವಾದ ಮದ್ರಾಸು ಸರ್ಕಾರ ಕೂಡಾ ಈ ವಿಷಯವನ್ನು ಪರಿಶೀಲಿಸಿ, ಈ ವಿನಂತಿಯನ್ನು ಸ್ವೀಕರಿಸುವಂತೆ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಮದ್ರಾಸು ಶಾಸನ ಸಭೆಯೂ ಈ ಅಪೇಕ್ಷೆಗೆ ಬೆಂಬಲವಿತ್ತಿತ್ತು. ಅಲ್ಲದೆ ಈ ಪ್ರದೇಶದ ಸುಮಾರು ೪೦೦ ಮಂದಿ ಸ್ತ್ರೀ ಪುರುಷರು ಅಹಿಂಸಾತ್ಮಕ ಸತ್ಯಾಗ್ರಹವನ್ನು ಹೂಡಿದರು. ಆದರೆ ನಾನು ಮೂರು ಬಾರಿ ಹೋದಾಗಲೂ ಭೇಟಿಯಾದ ಸೆಲೆಕ್ಟ್ ಕಮಿಟಿಯ ಅನೇಕ ಸದಸ್ಯರೂ ನಮ್ಮ ವಾದದ ಸಮರ್ಥನೆಯನ್ನು ಮನಗಂಡರೂ, ಅದನ್ನು ಸರಿಪಡಿಸಲು ಯಾರೂ ಮುಂದಾಗದಿದ್ದುದು ಅತ್ಯಂತ ವ್ಯಸನವನ್ನುಂಟುಮಾಡಿತು. ಈ ವಿಷಯದಲ್ಲಿ ಒಕ್ಕೂಟ ಸರ್ಕಾರದ ಗೃಹ ಮಂತ್ರಿಯವರ ಭೂಮಿಕೆಯ ವಿಷಯವನ್ನು ನಾನು ಪ್ರಸ್ತಾವಿಸ ಬಯಸುತ್ತೇನೆ. ಸರ್ದಾರ್ ವಲ್ಲಭ ಬಾಯಿ ಪಟೇಲರು ಜೀವಂತರಾಗಿದ್ದು, ಈ ಕೆಲಸವನ್ನು ನಡೆಸುತ್ತಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತೆಂದು ನನಗೆ ಸದಾ ಆಗ ತೋರುತ್ತಿತ್ತು. ನಾವು ಒಮ್ಮೆ ಸರ್ದಾರರಿಗೆ ಮನಗಾಣಿಸಿದರೆ ಸಾಕು; ಅವರಿಗೆ ನ್ಯಾಯಾವಾದುದನ್ನು ಮಾಡುವ ಧೀರತೆಯಿತ್ತು. ಆದರೆ ಪಂತರು ಹಾಗಲ್ಲ ನಮ್ಮ ವಾದಗಳೆಲ್ಲ ಅವರಿಗೆ ಗೊತ್ತಿದ್ದುವು. ಅವರು ತಾವಾಗಿಯೇ ಅವನ್ನು ಒಂದೊಂದಾಗಿ ಹೇಳುತ್ತಿದ್ದರಲ್ಲದೆ, ಅಲ್ಲಿ ಅನ್ಯಾಯವಾಗಿದೆಯೆಂದೂ ಅವನ್ನು ಸರಿಪಡಿಸಬೇಕೆಂದು ಕೂಡಾ ನುಡಿಯುತ್ತಿದ್ದರು. ಆದರೆ ತಾವು ಕೊಟ್ಟ ವಚನವನ್ನು ಪಾಲಿಸುವ ಮನೋಧಾರ್ಢ್ಯ ಅವರಿಗಿರಲಿಲ್ಲ. ಕಾಂಗ್ರೆಸ್ ನೇಮಿಸಿದ ಕಾಂಗ್ರೆಸ್ ಅಧ್ಯಕ್ಷ, ಪ್ರಧಾನಿ, ಪಂಡಿತ ಪಂತ್ ಮತ್ತು ಮೌಲಾನಾ ಅಜಾದ್ ರನ್ನೊಳಗೊಂಡ ಚತುರ್ನಾಯಕ ಸಮಿತಿಯೂ ಈ ಪ್ರದೇಶ ಕರ್ನಾಟಕಕ್ಕೆ ಸೇರಬೇಕೆಂದು ಶಿಫಾರಸು ಮಾಡಿತ್ತೆಂಬುದು ಗೊತ್ತಿದೆ; ಆದರೆ ನೀಲಗಿರಿಯ ಗುಡಲೂರನ್ನು ಕೇರಳಕ್ಕೆ ಕೊಟ್ಟರೆ ತಾನು ರಾಜಿಕೊಡುವೆಂದು ಮದ್ರಾಸಿನ ನೆಂದು ಮುಖ್ಯಮಂತ್ರಿಯು ಬೆದರಿಸಲು, ಪೂರ್ವಾಲೋಚನೆಯಿಲ್ಲದೆ ಕ್ಷುಲ್ಲಕ ಕಾರಣಕ್ಕಾಗಿ

ಕೇರಳಕ್ಕೆ ಪರಿಹಾರ ಉಡುಗೊರೆಯಾಗಿ ಕಾಸರಗೋಡು ಕೊಡಲ್ಪಟ್ಟಿತು. ಇದು ಅತ್ಯಂತ ವೇದನಾಮಯ ಸಂಗತಿ.

ಹೊಸ ರಾಜ್ಯಕ್ಕೆ ಮೈಸೂರು ಎಂದು ನಾಮಕರಣ ಮಾಡಿದ ಅನ್ಯಾಯವು ಪಂಡಿತ ಪಂತರ ಮನೋಪ್ರವೃತ್ತಿಯ ಇನ್ನೊಂದು ನಿದರ್ಶನವಾಗಿದೆ. ಚಳವಳದ ಧೀರ್ಘ ಇತಿಹಾಸ ಮತ್ತು ಹೊರಗಿನ ಬಹುಮತದ ಅಪೇಕ್ಷೆಯು ಹೊಸ ರಾಜ್ಯದ ಹೆಸರು ಕರ್ನಾಟಕವೆಂದೇ ಇರಬೇಕಲ್ಲದೆ ಮೈಸೂರೆಂದು ಇರಬಾರದೆಂದಾಗಿತು. ಸೆಲೆಕ್ಟ್ ಕಮಿಟಿಗೆ ೫೦ ಮಂದಿ ಪಾರ್ಲಿಮೆಂಟ್ ಸದಸ್ಯರು ಈ ಬಗ್ಗೆ ಬರಹ ಮೂಲಕ ವಿನಂತಿಸಿಕೊಂಡಿದ್ದರು. ಆದರೂ ಪಂತಜೀ ಮೈಸೂರಿನ ಯಾರಿಗೋ ಖಾಸಗಿಯಾಗಿ ಆ ಬಗ್ಗೆ ವಚನವಿತ್ತಿದ್ದರಿಂದ, ಅದನ್ನು ಬದಲಾಯಿಸಲಾರದಾದರು. ಇಂಥವರೊಡನೆ ಗಡಿನಾಡುಗಳಲ್ಲಿರುವ ಮಿಲಿಯಗಟ್ಟಲೆ ಜನರ ಭವಿತವ್ಯವನ್ನು ರೂಪಿಸುವ ಅಧಿಕಾರವನ್ನು ಕೊಡಲಾಗಿದೆ.

ಅಧೈರ್ಯದ ಮನೋವೃತ್ತಿ

ನಾವು ಮುಂಬಯಿ ಮತ್ತು ಅಹಮಹಾಬಾದುಗಳಲ್ಲಿ ಕಂಡ ದುಂರತಕ್ಕೂ ಪ್ರಧಾನಿ ಮತ್ತು ಸಹೋದ್ಯೋಗಿಗಳ ಅನಿರ್ಧಾರ ಮತ್ತು ಸರಿಯಾದುದನ್ನು ಮಾಡಲು ಧೈರ್ಯವಿಲ್ಲದ ಮನೋವೃತ್ತಿಗಳೇ ಕಾರಣ. ಕರ್ನಾಟಕದ ಇತರ ಗಡಿ ಪ್ರದೇಶಗಳಾದ ಸೇಲಮಿನ ಹೊಸೂರು, ಕೊಯಂಬತ್ತೂರಿನ ತಳಕವಾಡಿ ಫಿರ್ಕಾ, ಅನಂತಪುರ ಜಿಲ್ಲೆಯ ಮಡಕುಶಿರ ತಾಲೂಕು, ಶೋಲಾಪುರ ಜಿಲ್ಲೆಯ ಕೆಲಭಾಗಗಳು ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ನೀಲಗಿರಿಯ ಜನರು ಬಹುಮತದಿಂದ ಭಾಷೆಯ ಅನುಕೂಲಕ್ಕಾಗಿಯೇ ಕರ್ನಾಟಕವನ್ನು ಸೇರಲು ಅಪೇಕ್ಷಿಸಿದ್ದರು. ಅದು ಅತ್ಯಂತ ನ್ಯಾಯವಾದ ಅಪೇಕ್ಷೆ. ಈ ಎಲ್ಲಾ ಅಪೇಕ್ಷೆಗಳು ಕಡೆಗಣಿಸಲ್ಪಟ್ಟು, ರಾಜ್ಯ ಪುನರ್ರಚನಾ ಶಾಸನದಲ್ಲಿ ಗಡಿವಿವಾದಗಳ ಬಗ್ಗೆ ಪ್ರಾದೇಶಿಕ ಸಮಿತಿಗಳಿಗೆ ಕೆಲವು ಅಪೇಕ್ಷೆಗಳು ಕಡೆಗಣಿಸಲ್ಪಟ್ಟು, ರಾಜ್ಯ ಪುನರ್ರಚನಾ ಶಾಸನದಲ್ಲಿ ಗಡಿವಿವಾದಗಳ ಬಗ್ಗೆ ಪ್ರಾದೇಶಿಕ ಸಮಿತಿಗಳಿಗೆ ಕೆಲವು ಅಸ್ಪಷ್ಟವಾದ ಶಿಫಾರಸಿನಂತಹ ಅಧಿಕಾರಗಳನ್ನು ಕೊಟ್ಟಿರುವುದು ಅತೀ ದುರ್ದೈವದ ಸಂಗತಿ. ಈ ಪ್ರದೇಶಗಳ ಜನರ ಆಸೆ-ಆಕಾಂಕ್ಷೆಗಳೂ, ಅವರ ಸಂಕಷ್ಟಗಳೂ ಕಡೆಗಣಿಸಲ್ಪಡದಿರಲಿ ಎಂದು ನಾನು ಆಶಿಸುತ್ತೇನೆ. ಅವು ಅಷ್ಟು ಸತ್ಯವಾಗಿವೆ. ಈ ಪ್ರದೇಶಗಳ ಜನರ ಭಾಷೆ ಮತ್ತು ಸಂಸ್ಕೃತಿಗಳು ಹಾನಿ ಹೊಂದಿ, ಈ ವಿಷಯ ಎಷ್ಟು ಧೀರ್ಘ ಕಾಲ

ವಿಳಂಬವಾಗುವುದೋ ಅಷ್ಟೇ ಶಾಶ್ವತವಾಗಿ ಈ ಅನ್ಯಾಯದ ದುಷ್ಪರಿಣಾಮ ತಟ್ಟುವುದು. ಆದ್ದರಿಂದ ಹೊಸ ಪ್ರಾದೇಶಿಕ ಸಮಿತಿಗಳೂ ಕೇಂದ್ರ ಸರಕಾರವೂ ಕೂಡಲೇ ಒಂದು ಸ್ವತಂತ್ರ ನ್ಯಾಯಮಂಡಲವನ್ನು ರಚಿಸಿ, ಈ ಪ್ರದೇಶಗಳ ಜನರ ಅಪೇಕ್ಷೆಯನ್ನು ಪರಾಂಬರಿಸಿ ನ್ಯಾಯವನ್ನು ರಕ್ಷಿಸಲಿ ಎಂದು ನಾನು ಆಶಿಸುತ್ತೇನೆ ಅದರ ತೀರ್ಮಾನ ಏನಿದ್ದರೂ, ಜನರು ಅದನ್ನು ಪರಿಗ್ರಹಿಸುವರು.

ತನ್ಮಧ್ಯೆ 1956ನೇ ನವಂಬರ 1ರಂದು ಉದ್ಘಾಟಿಸಲ್ಪಡುವ ಉಳಿದ ಕರ್ನಾಟಕಕ್ಕೆ ಉಜ್ವಲವಾದ ಭವಿತ್ಯವಿದೆ. ಅದಕ್ಕಾಗಿಯೇ ನಾವೆಲ್ಲರೂ ದುಡಿದಿದ್ದೆವು. ಮಲೆನಾಡು ಪ್ರದೇಶದಲ್ಲಿ ಅರಣ್ಯ ಸಂಪತ್ತು ಮತ್ತು ಜಲಾಶ್ರಯವಿರುವ ಭೂಸಂಪತ್ತು ಸಮೃದ್ಧವಾಗಿದ್ದು ಕೃಷಿ ಮತ್ತು ವಿದ್ಯುಚ್ಛಕ್ತಿಯ ಅಭಿವದ್ಧಿಗೆ ಅನುಕೂಲವಾಗಿದೆ. ಈ ರಾಜ್ಯದಲ್ಲಿ ತುಂಬಾ ಖನಿಜ ಸಂಪತ್ತೂ ಇದೆ. ಔದ್ಯಮಿಕ ಬೆಳವಣಿಗೆಗೆ ತುಂಬಾ ಅವಕಾಶವಿದೆ. ಕನಿಷ್ಟ ಪಕ್ಷ ಐದು ವರ್ಷಗಳ ತನಕ ಅನೇಕ ಸಂಕಷ್ಟಗಳನ್ನು, ಮುಖ್ಯವಾಗಿ ಆಡಳಿತದ ತೊಡಕುಗಳನ್ನು ಬಗೆಹರಿಸಬೇಕಾಗಿದೆ. ಐದು ಪ್ರತ್ಯೇಕ ಪ್ರದೇಶಗಳ ಸರ್ಕಾರಿ ನೌಕರರನ್ನು ಒಂದುಗೂಡಿಸಬೇಕು. ಮೈಸೂರಿನಲ್ಲಿ ಅವರಿಗೆ ಬಹಳ ಕಡಿಮೆ ಸಂಬಳ ಸಿಗುತ್ತದೆ. ಅದನ್ನು ಹೆಚ್ಚಿಸಿ ಸಮಾನವನ್ನಾಗಿ ಮಾಡಲು ಹಣ ಸಂಗ್ರಹವಾಗಬೇಕು. ಕಡಿಮೆ ಸಂಬಳದಿಂದಾಗಿ ನೌಕರರಲ್ಲಿ ಲಂಚಗುಳಿತನವು ಮಿತಿಮೀರಿ ಬೆಳೆದಿದೆ. ಇದು ಇಲ್ಲಿ ಮಾತ್ರವಲ್ಲ. ಸರ್ವತ್ರವೂ ಹೆಚ್ಚಿನ ಕೆಳತರಗತಿಯ ಸರ್ಕಾರೀ ನೌಕರರಿಗೆ ತಮಗೆ ಸಿಗುವ ಸಂಬಳದಿಂದ ಜೀವನ ನಿರ್ವಹಣವೂ ಕಷ್ಟವಾಗಿದೆ. ಇವು ಮತ್ತು ಇತರ ಸಮಸ್ಯೆಗಳನ್ನು ಎದುರಿಸಿ ಪರಿಹರಿಸಬೇಕು.

ಈಗ ಅಧಿಕಾರರೂಢವಾಗಿರುವ ಮತ್ತು ಮುಂದಿನ ಚುನಾವಣೆಯ ಬಳಿಕವೂ ಅಧಿಕಾರಕ್ಕೆ ಬರಬಹುದಾದ ಕಾಂಗ್ರೆಸ್ಸಿನ ಮುಂದಿರುವ ಕಾರ್ಯಭಾರ ಬಹಳ ಹೆಚ್ಚಿನದು. ಅವರು ಈಗಾಗಲೇ ಮಾಡುತ್ತಿರುವಂತೆ ಒಳಪಂಗಡಗಳಾಗಿ ಕೆಲಸ ಮಾಡತೊಡಗಿದರೆ ಭವಿತವ್ಯವು ಶೂನ್ಯವಾಗಬಹುದು. ನೂತನ ರಾಜ್ಯದಿಂದ ಯಾವ ಪ್ರಯೋಜನ ಸಿಗಬೇಕೆಂದು ಜನರು ಆಶಿಸಿ ದುಡಿದಿದ್ದರೋ ಅದೆಲ್ಲ ನಾಶವಾದೀತು. ವಿರೋಧ ಪಕ್ಷದ ಕೆಲಸವೂ ನಿರ್ಲಕ್ಷ್ಯವಾದುದಲ್ಲ. ಆಳುವ ಪಕ್ಷವನ್ನು ಟೀಕಿಸಿ, ಹತೋಟಿಯಲ್ಲಿಟ್ಟುಕೊಳ್ಳುವಂತೆ ಬಲವಾದ ವಿರೋಧ ಪಕ್ಷವನ್ನು ಅದು ಕಟ್ಟಬೇಕು. ಅವಶ್ಯವಿದ್ದಲ್ಲಿ ಸರ್ಕಾರದೊಡನೆ ಸಹಕರಿಸಬೇಕು. ಸಾರ್ವಜನಿಕ ಜೀವನದ ಮಟ್ಟವನ್ನು ಈಗಿರುವ ವೈಯಕ್ತಿಕ ರಾಜಕೀಯದ

ಕೊಂಪೆಯಿಂದ ಮೇಲೆತ್ತಬೇಕಾಗಿದೆ. ಎಲ್ಲವೂ ಚೆನ್ನಾಗಿ ನಡೆದೀತೆಂದು ನಾವು ಆಶಿಸೋಣ. ಹೊಸ ಕರ್ನಾಟಕ ರಾಜ್ಯವು ಅದರಲ್ಲಿ ಅಡಕವಾಗಿರುವ ಲಕ್ಷಾಂತರ ಪ್ರಜೆಗಳಿಗೆ ಶಾಂತಿ, ಸಂತೃಪ್ತಿ ಮತ್ತು ಸಮೃದ್ಧಿಯನ್ನುಂಟು ಮಾಡಲಿ.

(ಕರ್ನಾಟಕ ಏಕೀಕರಣದ ಚಳವಳದ ಆದ್ಯ ಪ್ರವರ್ತಕರಲ್ಲೊಬ್ಬರಾದ ಶ್ರೀ ಕೋಟ ರಾಮಕೃಷ್ಣ ಕಾರಂತರು ಈ ಲೇಖನದಲ್ಲಿ ಏಕೀಕರಣದ ಚಳವಳದ ಹೆಗ್ಗುರುತುಗಳನ್ನು ನಿರೂಪಿಸಿದ್ದಾರೆ. ಶ್ರೀ ಕಾರಂತರು ಸುಮಾರು ೩೦ ವರ್ಷ ಕಾಂಗ್ರೆಸ್ಸಿನಲ್ಲಿದ್ದು ಸ್ವರಾಜ್ಯ ಹೋರಾಟದಲ್ಲಿ ಐದಾರು ವರ್ಷ ಕಾರಾಗ್ರಹವನ್ನು ಅನುಭವಿಸಿದರೂ ಕರ್ನಾಟಕ ಏಕೀಕರಣ ಪ್ರಶ್ನೆಯನ್ನು ಕಾಂಗ್ರೆಸ್ಸು ಅಲಕ್ಷಿಸುತ್ತಿದೆಯೆಂಬ ಕಾರಣದಿಂದ ಅದನ್ನು ೧೯೫೧ರಲ್ಲಿ ಬಿಟ್ಟು ಹೊರಬಂದರೆಂಬುದನ್ನು ನಾವು ಇಲ್ಲಿ ನೆನೆಯಬಹುದು.

ಈ ಲೇಖನ 1956 ನವೆಂಬರ 1 ರಂದು ಪ್ರಕಟವಾದ "ವಿಚಾರವಾಣಿ" ವಾರ ಪತ್ರಿಕೆಯ ಕರ್ನಾಟಕ ರಾಜ್ಯೋತ್ಸವ ವಿಶೇಷಾಂಕದಲ್ಲಿ ಪ್ರಕಟವಾಗಿದೆ).

ಏಕೀಕರಣ ಕಾಯಕದಲ್ಲಿ ಕೈ ಜೋಡಿಸಿದವರೊಂದಿಗಿನ ಸಂದರ್ಶನಗಳು

ಕರ್ನಾಟಕದಲ್ಲಿ ಕನ್ನಡಿಗರೆಲ್ಲರೂ ಒಂದಾಗಿ ಬಾಳುವ ಕನಸು ಎಲ್ಲರದಾಗಿತ್ತು. ರಾಜಕೀಯ ಪಕ್ಷಭೇದ ಮರೆತು ಏಕೀಕರಣಕ್ಕೆ ಹೋರಾಟ ನಡೆಯಿತು. ಇದಕ್ಕಾಗಿ ಸಾಹಿತಿಗಳು, ಸ್ವಾತಂತ್ರ್ಯ ಹೋರಾಟಗಾರರು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು ಹೀಗೆ ಅನೇಕರು ತಮ್ಮನ್ನು ತಾವೇ ಸಕ್ರಿಯವಾಗಿ ತೊಡಗಿಸಿಕೊಂಡರು. ಇವರುಗಳಲ್ಲಿ ಪ್ರಮುಖವಾಗಿ ಭಾಗವಹಿಸಿದವರನ್ನು, ಅವರು ಬೇರೆ ಬೇರೆ ಕಡೆಗಳಲ್ಲಿ ನೀಡಿದ ಸಂದರ್ಶನದ ತುಣುಕುಗಳನ್ನು ಇಲ್ಲಿ ಪ್ರಸ್ತುತ ಪಡಿಸುವುದು ಔಚಿತ್ಯಪೂರ್ಣವೆಂದೆನಿಸಿ ಇಲ್ಲಿ ಯಥಾವತ್ತಾಗಿ ನೀಡಲಾಗಿದೆ.

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಕಾಸರಗೋಡು

ಏಕೀಕೃತ ಕರ್ನಾಟಕದ ಕನಸನ್ನು ಕಂಡು, ಅದಕ್ಕಾಗಿ ಹೋರಾಟ ನಡೆಸಿ, ಇಂದಿಗೂ ಕಾಸರಗೋಡು ಕರ್ನಾಟಕದ ಅವಿಭಾಜ್ಯ ಅಂಗಾವಾಗಬೇಕು ಎಂದು ಪ್ರತಿಪಾದಿಸುತ್ತಿರುವ

ತುಳುನಾಡಿನ ಹೆಮ್ಮೆಯ ಸಾಹಿತಿ ಕಿಂಞಣ್ಣ ರೈಯವರು ಕಾಸರಗೋಡು ಕರ್ನಾಟಕಕ್ಕೆ ಸೇರದೆ ಕೇರಳಕ್ಕೆ ಸೇರಿದಾಗ ಕಯ್ಯಾರರು ರಚಿಸಿದ ಕವನದ ಸಾಲುಗಳು ಎಂಥವರನ್ನು ಬಡಿದೆಬ್ಬಿಸಬೇಕು........

ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ !
ಎಲ್ಲರೂ ಎದ್ದೆದ್ದು ಓಡಿ ಬನ್ನಿ !
ಕನ್ನಡದ ಗಡಿ ಕಾಯೆ,
ಗುಡಿ ಕಾಯೆ, ನುಡಿ ಕಾಯೆ,
ಕಾಯಲಾರೆನೆ ಸಾಯೆ !
ಓ ಬನ್ನಿ ಬನ್ನಿ.
ಅವರೊಂದಿಗಿನ ಸಂದರ್ಶನದ ತುಣುಕುಗಳು.......

ಇತ್ತೀಚೆಗೆ 80 ವರ್ಷಗಳನ್ನು ದಾಟಿದ ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಕಾಸರಗೋಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಒಂದು ಶಕ್ತಿಯಾಗಿದ್ದಾರೆ. ಕವಿಯಾಗಿ ಪ್ರಖ್ಯಾತರಾಗಿರುವ ಕಯ್ಯಾರರು ಕರ್ನಾಟಕ ಏಕೀಕರಣಕ್ಕಾಗಿ ವಿಶೇಷವಾಗಿ ಶ್ರಮಿಸಿದರು. ಉಪಾಧ್ಯಾಯರಾಗಿಯೂ ಹೆಸರು ಪಡೆದಿರುವ ಶ್ರೀಯುತರು ಕನ್ನಡದಲ್ಲಿ ಯಾರೂ ಮರೆಯದ ವ್ಯಕ್ತಿತ್ವ ಉಳ್ಳವರು. ಕಾಸರಗೋಡು ಕರ್ನಾಟಕದ ಅವಿಚ್ಛಿನ್ನ ಭಾಗವೆಂದು ಮೊದಲಿನಿಂದಲೂ ಹೇಳುತ್ತಾ ಇಂದಿಗೂ ಅದೇ ನಂಬಿಕೆಯನ್ನುಳಿಸಿಕೊಂಡು, ಈವರೆಗೆ ಕಾಸರಗೋಡು ಕರ್ನಾಟಕಕ್ಕೆ ಸೇರಿಲ್ಲವೆಂಬ ನೋವುಳ್ಳವರು. ರಾಜಕೀಯದಲ್ಲೂ ಗಣ್ಯಸ್ಥಾನ ಪಡೆದಿರುವ ಕಯ್ಯಾರ ಕಿಞ್ಞಣ್ಣ ರೈ, ಅವರನ್ನು ಪೆರಡಾಲ ಅವರ ಮನೆಯಲ್ಲಿ 1.4.1994 ರಂದು ಸಂದರ್ಶಿಸಲಾಯಿತು. ಸಂದರ್ಶನದ ಸಮಯದಲ್ಲಿ ನನ್ನೊಡನೆ ಶ್ರೀ.ಸಿ.ಆರ್. ಕೃಷ್ಣರಾವ್ ಮತ್ತು ಶ್ರೀ. ಬಿ. ವಿ. ಕಕ್ಕಿಲ್ಲಾಯ ಸಹ ಇದ್ದರು.

ಎಚ್.ಎಸ್.ಜಿ : ಈ ಭಾಗದಲ್ಲಿ ಕರ್ನಾಟಕ ಏಕೀಕರಣಕ್ಕೆ ಹೋರಾಟ ಆರಂಭ ಆದದ್ದು ಯಾವಾಗ?

ಕಯ್ಯಾರರು: ಇಲ್ಲಿ ಮೊದಲು ನಡೆದದ್ದು ತುಳುವಿನ ಸಲುವಾಗಿ ಹೋರಾಟ, ತುಳು ನಮಗೆ ಕನ್ನಡಕ್ಕಿಂತ ಆತ್ಮೀಯವಾದದ್ದು. ತುಳು ಸಂಸ್ಕೃತಿ ಮನುಷ್ಯನ ಮೂಲ ಸಂಸ್ಕೃತಿಗೆ

ಹತ್ತಿರವಾದದ್ದು. ಇಲ್ಲಿರುವುದು ಮಾತೃಪ್ರಧಾನ ಕುಟುಂಬ ಪದ್ಧತಿ ಇಲ್ಲಿನ ಜನರಿಗೆ ಸುಲಭವಾಗಿ ತಿಳಿಯುವುದು ತುಳು ಭಾಷೆ. ಕನ್ನಡ ಏನಿದ್ದರೂ ಕಲಿತ ಭಾಷೆ. ಇಲ್ಲಿನ ಜನರ ಸಂಪರ್ಕ ಪಡೆಯಲು ತುಳು ಭಾಷೆಯೇ ಉತ್ತಮ ಸಾಧನ. ಮೋತಿಲಾಲ್ ನೆಹರೂ ವರದಿಯ ಸಂಬಂಧ ಒಂದು ಸಭೆ ನಡೆದ ಸಂದರ್ಭದಲ್ಲಿ ಅದಕ್ಕೆ ಕೆ.ಬಿ. ಜಿನರಾಜ ಹೆಗ್ಗಡೆ ಹೋಗಿದ್ದರು ಎಂದು ನೆನಪು. ಸ್ವಾತಂತ್ರ್ಯ ಬಂದ ತಕ್ಷಣ ಆಯಾ ಭಾಗಗಳ ಜನರ ಮಾತೃಭಾಷೆಯಲ್ಲಿ ಆಡಳಿತ ನಡೆಯಬೇಕು ಎನ್ನುವುದು ನೆಹರೂ ಕಮಿಟಿ, ವರದಿ ತಿರುಳಾಗಿತ್ತು. ಆ ಸಂದರ್ಭದಲ್ಲಿ ಕೆ.ಬಿ. ಜಿನರಾಜ ಹೆಗಡೆ ಅವರು ಕರ್ನಾಟಕಕ್ಕಿಂತ ಪಣಿಯಾಡಿಯವರ ತುಳು ಚಳುವಳಕ್ಕೆ ಬೆಂಬಲ ನೀಡಿದರು. ಆ ಕಾಲಕ್ಕೆ ಉಡುಪಿಯಲ್ಲಿ ಎಸ್.ವಿ. ಪಣಿಯಾಡಿ ಒಬ್ಬರು ದೊಡ್ಡ ವೇದಾಂತ ವಿದ್ವಾಂಸರು. ಇಡೀ ಮಣಿಪಾಲ ಅವರದಾಗಿತ್ತು. ಒಂದು ಟೈಲ್ಸ್ ಫ್ಯಾಕ್ಟರಿ. ಒಂದು ಪ್ರೆಸ್ ಅವರದಾಗಿತ್ತು. ತುಳುನಾಡು ಬ್ಯಾಂಕ್, ತುಳುವ ಸಾಹಿತ್ಯಮಾಲೆ ಅಂತ ಅವರು ಮಾಡಿದರು. (ಇವರು ಚಲನಚಿತ್ರ ನಟ / ನಿರ್ಮಾಪಕ ವಾದಿರಾಜ್ ಮತ್ತು ಚಲನಚಿತ್ರ ನಟಿ ಹರಿಣಿ ಅವರ ತಂದೆ) ಗೋವಿಂದ ಪೈ ಅಂತಹವರೂ ಕೂಡಾ ತುಳು ಇತಿಹಾಸದ ಬಗ್ಗೆಯೇ ಹೆಚ್ಚು ಬರೆದರು. ಪಂಜೆ ಮಂಗೇಶರಾವ್, ಎಂ.ಎನ್. ಕಾಮತರಿಗೂ ತುಳು ಬಗ್ಗೆ ವಿಶೇಷ ಅಭಿಮಾನ ಇತ್ತು. ಆಗ ತುಳು ಚಳುವಳಿ ಶುರುವಾಯಿತು. ಎಸ್.ವಿ. ಪಣಿಯಾಡಿಯವರು ತಮ್ಮ ಬಿಸಿನೆಸ್‌ನಲ್ಲಿ ಸೋಲಾಗಿ ಉಡುಪಿಯನ್ನೇ ಬಿಟ್ಟು ಹೋದರು. ಹಾಗೆ ಅವರ ಚಳವಳ ಸೋತಿತು. ತುಳು ಸಂಸ್ಕೃತಿ ಕನ್ನಡ ಸಂಸ್ಕೃತಿಗಿಂತ ಕಡಿಮೆಯಲ್ಲ. ತುಳು ಬರುವಷ್ಟು ಆತ್ಮೀಯವಾಗಿ ಕನ್ನಡ ಬರುವುದಿಲ್ಲ.

ಕಕ್ಕಿಲಾಯ: ಇಲ್ಲಿ ಪಬ್ಲಿಕ್ ಮೀಟಿಂಗ್‌ನಲ್ಲಿ ತುಳುವನ್ನು ಆರಂಭ ಮಾಡಿದ್ದೇ ನಾವು.

ಕಯ್ಯಾರರು: ಚಳವಳಿ ಫೇಲ್ ಆದನಂತರ ಕೆ.ಆರ್ ಕಾರಂತ ಮುಂತಾದವರು ಕರ್ನಾಟಕ ಏಕೀಕರಣ ಚಳುವಳಕ್ಕೆ ಮುಂದಾಳಾಗಿ ನಿಂತರು. ಕೆ.ಬಿ. ಜಿನರಾಜ ಹೆಗ್ಗಡೆಯವರೂ ಅವರನ್ನು ಕೂಡಿಕೊಂಡರು. ಅನಂತರ ಜಿನರಾಜ ಹೆಗ್ಗೆಡಯವರು ಈ ಬಗ್ಗೆ ತುಂಬಾ ಹೋರಾಡಿದರು. ಈ ಪ್ರದೇಶಕ್ಕೆ ಕೆ. ಆರ್. ಕಾರಂತರು ಪ್ರಶ್ನಾತೀತ ನಾಯಕರು. ನಂತರ ಬಿ.ಎಸ್. ಕಕ್ಕಿಲಾಯ, ನಾನು ಮತ್ತಿನ್ನೂ ಅನೇಕರು ಹೋರಾಟಕ್ಕೆ ಸೇರಿದೆವು. ನಮ್ಮ ದೃಷ್ಟಿಯಲ್ಲಿ ತುಳು ಕನ್ನಡದ ಒಳಗೆ ಇರುವಂತಹುದು. ನಾವು ಕನ್ನಡದಲ್ಲೇ ಬೆಳೆದವರು. ಆದರೆ ತುಳು ನಮ್ಮ ಮಾತೃಭಾಷೆ.

ನಮ್ಮ ತಾಯಿ. ಈ ಸುತ್ತಿನಲ್ಲಿ ಆಗ ಇನ್ನಿಬ್ಬರು ನಾಯಕರಿದ್ದರು. ಅವರೆಂದರೆ ಎ.ಬಿ.ಶೆಟ್ಟಿ ಮತ್ತು ಶ್ರೀನಿವಾಸ ಮಲ್ಯರು. ಮಲ್ಯರಿಗೆ ಕರ್ನಾಟಕ ಏಕೀಕರಣದ ಬಗೆಗೆ ವಿಶೇಷವಾದ ಆಸಕ್ತಿ ಇದ್ದಂತಿರಲಿಲ್ಲ. ಈ ಸುತ್ತಿನಲ್ಲಿ ತುಂಬ ಪ್ರೀತಿ ಗಳಿಸಿದ್ದವರು ಕೆ.ಆರ್.ಕಾರಂತರು ನಿಷ್ಠುರವಾದಿಗಳು. ಅವರ ಬಗ್ಗೆ ಎಲ್ಲರಿಗೂ ಅಭಿಮಾನ ಇತ್ತು. ಅವರು ಏಕೀಕರಣವನ್ನೇ ತಮ್ಮ ಗುರಿಯಾಗಿ ಇರಿಸಿಕೊಂಡರು. ಕಾಸರಗೋಡಿನಲ್ಲಿ ಸಾಹಿತ್ಯಾ ಸಮ್ಮೇಳನ ಆದಾಗ (ತಿ. ತಾ. ಶರ್ಮ ಸಮ್ಮೇಳನಾಧ್ಯಕ್ಷರು) ಏಕೀಕರಣದ ವಿಷಯವಾಗಿಯೂ ಒಂದು ದಿನ ಇಡಿಯಾಗಿ ಚರ್ಚೆ ನಡೆಯಿತು. ಅದು ಅತ್ಯಂತ ಅದ್ಭುತವಾಗಿತ್ತು. ಆಗ ನಿಜಲಿಂಗಪ್ಪ, ದಿವಾಕರ್ ಅವರೆಲ್ಲ ಬಂದಿದ್ದರು. ದಿವಾಕರ್ ಆಗ ಹೇಳಿದ್ದು -'ಅಡಿಗೆ ಆಯಿತು., ಎಲೆ ಹಾಕಿ ಆಯಿತು. ಎಲ್ಲವನ್ನೂ ಬಡಿಸಿ ಆಯಿತು, ತುಪ್ಪವನ್ನೂ ಹಾಕಿದ್ದಾಯಿತು. ಇನ್ನು ಊಟ ಮಾಡಬೇಡ ಅಂದರೆ ಹೇಗೆ? ಇದು ಅವರು ಭಾಷಾವಾರು ಪ್ರಾಂತ ರಚನೆಯನ್ನು ಕುರಿತು ಹೇಳಿದ್ದು. ಆ ಮಾತು ಕರ್ನಾಟಕ ಏಕೀಕರಣಕ್ಕೆ ಸ್ಫೂರ್ತಿ ಕೊಟ್ಟಿತು. ಕಾಸರಗೋಡು ತಾಲ್ಲೂಕಿನ ೪೦೦ ಚ.ಮೈಲಿ ವಿಸ್ತೀರ್ಣದಲ್ಲಿ ನಾವು ಕೇಳಿದ್ದು ಸುಮಾರು 300 ಚ.ಮೈಲಿಯನ್ನು ಮಾತ್ರ ತ್ರಿಮೂರ್ತಿ ಆಯೋಗದಲ್ಲಿ ಕೇರಳದ ಪಣಿಕ್ಕರ್ ಇದ್ದುದೇ ತಪ್ಪು... ಅವರೇ ನಮ್ಮ ವಾದವನ್ನು ಕೇಳಿದರು. ಆಗ ಫಜ್ಲುಲ್ ಆಲಿ, ಕುಂಜ್ರೂ ಬರಲಿಲ್ಲ. ಪಣಿಕ್ಕರ್ ನಮ್ಮ ವಾದವನ್ನು ಒಪ್ಪಿದರು. ಆದರೆ ಆಯೋಗದ ವರದಿ ಸಿದ್ದವಾದಾಗ ಆಡಳಿತದ ಅನುಕೂಲಕ್ಕೆ ಎಂದು ಕಾಸರಗೋಡು ತಾಲ್ಲೂಕನ್ನು ಇಡಿಯಾಗಿ ಕೇರಳಕ್ಕೆ ಸೇರಿಸಿದರು. ಕನ್ನಡಿಗ ರಾಜಕಾರಣಿಗಳು ಒಳ್ಳೆಯ ಧೀರರಲ್ಲ. ಫಣಿಕ್ಕರ್ ಪ್ರತಿಭಾವಂತ, ಬುದ್ಧಿವಂತ ಎಲ್ಲಾ ಎವಿಡೆನ್ಸನ್ನೂ ನೋಡಿಕೊಂಡು ತಮ್ಮ ವರದಿಯನ್ನು ಕೊಟ್ಟರು. ಆದರೆ ಇವತ್ತೂ ಕೂಡಾ ಮಹಾಜನ್ ಆಯೋಗದ ವರದಿ ಜಾರಿಗೆ ಬರಬೇಕೂ ಅಂತ ಬೆಳಗಾಂನ್ ಮರಾಠಿಗರು ಪ್ರಶ್ನೆ ಎತ್ತುವವರೆಗೆ ಕರ್ನಾಟಕದವರು ಹೇಳುವುದೇ ಇಲ್ಲ. ಕರ್ನಾಟಕದವರು ರಣಹೇಡಿಗಳು. ಆಗಲೇ ಅದು ಇಂಪ್ಲಿಮೆಂಟ್ ಆಗಬಹುದಿತ್ತು. ಈಗಲೂ ಆಗಬಹುದು. ಆದರೆ ಯಾರೂ ಪ್ರಯತ್ನ ಮಾಡುತ್ತಲೇ ಇಲ್ಲ. ಕಾಸರಗೋಡು ಜನ ಏನೂ ಪ್ರಯತ್ನ ಮಾಡಲಿಲ್ಲ. ಇತ್ತೀಚೆಗೆ ನಾವು ಮೊಯ್ಲಿ ಅವರನ್ನು ಅಭಿನಂದಿಸಲು ಕರೆದೆವು. ಆದರೆ ಅವರು ಬರಲೇ ಇಲ್ಲ. .. ಕರ್ನಾಟಕ ಏಕೀಕರಣದ ಒಂದು ದೊಡ್ಡ ಟ್ರಾಜಿಡಿ ಇದು. ಮಹಾಜನ ಆಯೋಗದ ವರದಿ ಜಾರಿಗೆ ಬರುವುದಿಲ್ಲ. ಮಹಾರಾಷ್ಟ್ರದ ಶರದ್ ಪವಾರ್, ಚವಾಣ್ ಅಂತಹವರು ಬೆಳಗಾಂ

ಅನ್ನು ಕರ್ನಾಟಕಕ್ಕೆ ಬಿಡುವುದಿಲ್ಲ. - ನಾನು ಒಮ್ಮೆ ಗುಂಡೂರಾಯರಿಗೆ ಹೇಳಿದೆ 'ಪಯಸ್ವಿನಿಯಲ್ಲಿ ಹರಿಯುತ್ತಿರುವುದು ನಮ್ಮ ಕಣ್ಣೀರು' ಅಂತ ಅವರು ಅದನ್ನು ಪನ್ನೀರು ಮಾಡುತ್ತೇನೆ. ಅಂತಹ ದೆಹಲಿಗೆ ಹೋದರು. ಅಲ್ಲಿ ಕರುಣಾಕರಣ್ ಇದ್ದರು. ಪಕ್ಷದ ತತ್ವ ಅಂತ ಗುಂಡೂರಾಯರು ವಾಪಸ್ ಬಂದರು. ಮಹಾಜನ್ ಆಯೋಗದ ವರದಿ ಜಾರಿಗೆ ಬರಲು ರಾಮಕೃಷ್ಣ ಹೆಗಡೆ ಪ್ರಯತ್ನ ಪಟ್ಟಿದ್ದಾರೆ. ಅನೇಕ ಪತ್ರಗಳು ಬರೆದಿದ್ದಾರೆ. ಪಾಂಪ್ಲೆಟ್ಸ್ ಹೊರಡಿಸಿದ್ದಾರೆ. ಈಗ ಏನೂ ಇಲ್ಲ. ಕರುಣಾಕರನ್‌ಗೆ ಹೆದರಿ ಮೊಯ್ಲಿ ಅಭಿನಂದನೆ ಪಡೆಯಲೂ ಬರಲಿಲ್ಲ. ಈಗ ಇಲ್ಲಿನ ಯುವಕರು ರಾಜಕೀಯ ಪಕ್ಷಗಳಿಗೆ ಸೇರಿ, ಏಕೀಕರಣವನ್ನು ಮರೆತಿದ್ದಾರೆ.

ಪಣಿಕ್ಕರ್ ಹೇಳಿದ್ದು 'ಆಡಳಿತ ಸೌಕರ್ಯಕ್ಕೆ ಕಾಸರಗೋಡನ್ನು ಕೇರಳಕ್ಕೆ ಸೇರಿಸಿದ್ದು' ಅಂತ. ಅದರೆ ಅದು ಬೋಗಸ್. ನಾವು ಈ ಹೊತ್ತು ಉಪ್ಪು ತಿನ್ನುವುದು ಮಂಗಳೂರಿನದು. ಮೆಣಸು ಹಾಕುವುದು ಮಂಗಳೂರಿನದು. ಅಕ್ಕಿ ಮಂಗಳೂರಿನಿಂದಲೇ ಬರಬೇಕು, ಈ ಹೊತ್ತು ನಮ್ಮ ವ್ಯಾಪಾರಕ್ಕೆ ಮಂಗಳೂರು ಪೋರ್ಟೇ ಗತಿ. ಇಂಥಾದ್ದರಲಿ ಆಡಳಿತ ಸೌಕರ್ಯ ಎಂಥಾದ್ದು. ನಮ್ಮ ಟ್ಯಾಕ್ಸನ್ನು ಕೇರಳಕ್ಕೆ ಕೊಡುತ್ತೇವೆ. ನಾನು ಬಿ.ಡಿ.ಸಿ. ಬ್ಲಾಕ್ ಛೇರ್ಮನ್ ಆಗಿದ್ದಾಗ ಸೂಳೆಪದರಿಗೆ ಇಲ್ಲಿಂದ ಮಾರ್ಗ ಮಾಡಿಸಿದೆ. ಅದು ಕರ್ನಾಟಕದಿಂದ ಕೇರಳದ ಪೋರ್ಟಿಗೆ ನೇರ ಮಾರ್ಗ. ಇದು ನಾನು ಮಾಡಿದ ತಪ್ಪು. ಕರ್ನಾಟಕದಿಂದ ಕೇರಳದ Portಗೆ ಹೋಗಲು ಇದು Shortest route ಅಂತ ನಾನು ಮಾಡಿಸಿದ್ದು. . . ಈಗ ಎಲ್ಲರಿಗೂ ರಾಜಕೀಯ ಮುಖ್ಯ. ಬೇರೇನೂ ಅಲ್ಲ. ಸ್ವಾರ್ಥ ಸಾಧನೆಗೆ ಅದೊಂದು ದಾರಿ.

ಸಿ.ಆರ್.ಕೆ: ರಾಜಕೀಯಕ್ಕೆ ಸೇರೋದು ಈ ವೈಫಲ್ಯಗಳಿಗೆ ಕಾರಣ ಅಂತೀರಾ?

ಕಯ್ಯಾರರು : ಹಿಂದೆ ಏಕೀಕರಣಕ್ಕೆ ಪಕ್ಷ ಮರೆತು ಕೆಲಸ ಮಾಡಿದ ರಾಜಕಾರಣಿಗಳಿದ್ದರು. ಈಗ ಅಂತಹ ಪರಿಸ್ಥಿತಿ ಇಲ್ಲ.

ಕಕ್ಕಿಲ್ಲಾಯ : ನಾವು ಈ ಪ್ರದೇಶದ ಕನ್ನಡಿಗರಾಗಿ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ಕಾಸರಗೋಡು ತಾಲ್ಲೂಕಿನ ಎಷ್ಟೋ ಊರುಗಳಿಗೆ ರಸ್ತೆಯಿಲ್ಲ. ಶಾಲೆಗಳಲ್ಲಿ. ನಾವೆಲ್ಲಾ ಅಂತಹ ಊರುಗಳಿಗೆ ಹೋಗಿ ಏಕೆ mobilize ಮಾಡಬಾರದು?

ಕಯ್ಯಾರರು : ಆದರೆ ಯಾರನ್ನೂ ಒಗ್ಗಟ್ಟು ಮಾಡಲಿಕ್ಕೆ ಆಗೋದಿಲ್ಲ.

ಕಕ್ಕಿಲ್ಲಾಯ : ಪಾರ್ಲಿಮೆಂಟಿನಲ್ಲಿ ಬೆಳಗಾಂನ ಪ್ರಶ್ನೆ ಎತ್ತುವವರು ಯಾರು?

ಕಯ್ಯಾರರು : ಅದನ್ನು ಕರ್ನಾಟಕದವರೇ ಮಾಡಬೇಕು.

ಕಕ್ಕಿಲ್ಲಾಯ : ಅವರು ಮಾಡುವುದಿಲ್ಲ. ಅವರು ಕಾಸರಗೋಡನ್ನು ಮುಟ್ಟಿದರೆ ಬೆಳಗಾಂನ ಕಳೆದುಕೊಳ್ಳೋಕೆ ಅವರು ಸಿದ್ಧರಿಲ್ಲ.

ಕಯ್ಯಾರರು : ಸರ್ಕಾರ ಮಹಾಜನ ಆಯೋಗದ ವರದಿಯನ್ನು ಇಂಪ್ಲಿಮೆಂಟ್ ಮಾಡಬೇಕು ಅಷ್ಟೇ.

ಕಕ್ಕಿಲ್ಲಾಯ : ಬೆಳಗಾಂನಲ್ಲಿ ಮಹಾರಾಷ್ಟ್ರೀಯರ ಶಕ್ತಿ ಎಲ್ಲ ಇದ್ದೂ ಕೂಡಾ ಅದನ್ನು ಉಳಿಸಿಕೊಳ್ಳಲು ಕರ್ನಾಟಕದಲ್ಲಿ ಇರುವಷ್ಟು feeling ಕಾಸರಗೋಡನ್ನು ಸೇರಿಸಿಕೊಳ್ಳಲು ಅನ್ನುವುದರಲ್ಲಿ ಇಲ್ಲ.

ಕಯ್ಯಾರರು ಹೌದು. . . ಕರ್ನಾಟಕದ ರಾಜಕೀಯವೆಲ್ಲ ಮೈಸೂರು ಮತ್ತು ಬೆಂಗಳೂರಿನವರ ಕೈಗಳಲ್ಲಿದೆ. ಕಲೆ, ಸಂಸ್ಕೃತಿ ಎಲ್ಲದರಲ್ಲೂ ಅವರದೇ ಕಾರುಬಾರು – ಬೇರೆಡೆ ಕಲೆಗಾರರಿಲ್ಲವೇ?

(ಮಾತು ಮುಂದುವರಿಕೆ ತುಳುನಾಡನ್ನು ಪ್ರತ್ಯೇಕ ಜಿಲ್ಲೆ ಮಾಡುವ, ಅನಂತರ ಅಲ್ಲಿನ ಜನರ ಅಪೇಕ್ಷೆಯಂತೆ ಕೇರಳ ಅಥವಾ ಕರ್ನಾಟಕಕ್ಕೆ ಸೇರಿಸುವ ಬಗ್ಗೆ ಚರ್ಚೆ ನಡೆಯಿತು.)

ಎಚ್.ಎಸ್.ಜಿ.ಕನ್ನಡ ಸಾಹಿತ್ಯ ಶ್ರೀಮಂತವಾಗಿರುವುದರಲ್ಲಿ ಈ ನಾಡಿನ ಸಾಹಿತಿಗಳ ಕೊಡುಗೆ ಅಪಾರ.

ಕಯ್ಯಾರರು : ಅದು ನಿಜ ಪ್ರತ್ಯೇಕ ರಾಜ್ಯ ಮಾಡಿದರೂ ಅಂದಿನಿಂದ ಕರ್ನಾಟಕಕ್ಕೆ ಅನುಕೂಲವೇ ಹೊರತು, ಹಾನಿಯೇನಲ್ಲ.

ಎಚ್.ಎಸ್.ಜಿ. : ಸ್ವಾತಂತ್ರ್ಯ ಸಂಗ್ರಾಮದ ಜೊತೆ ಜೊತೆಗೇ ಕರ್ನಾಟಕ ಏಕೀಕರಣಕ್ಕೆ ಇಲ್ಲಿ ಹೋರಾಟ ನಡೆಯಿತು.

ಕಯ್ಯಾರರು : ಹೌದು. ನಾನು ಮಾತ್ರ ಕೊನೇವರೆಗೂ ಕರ್ನಾಟಕ ಏಕೀಕರಣದ demandನ್ನು ಬಿಡುವವನಲ್ಲ. ದಕ್ಷಿಣದ ಕನ್ನಡದ ಜನ ನಮ್ಮ ಜೊತೆಗೆ ಇದ್ದಾರೆ.

ಡಾ. ಎಸ್. ಎನ್. ಭಟ್, ಡಾ.ಲಲಿತಾ ಎಸ್. ಎನ್. ಭಟ್, ಕಾಸರಗೋಡು.

ಕಾಸರಗೋಡಿನ ಕನ್ನಡ ಮತ್ತು ಸಂಸ್ಕೃತಿಯ ಬದುಕಿನಲ್ಲಿ ಅವಿಭಾಜ್ಯ ಅಂಗವಾಗಿರುವ ಡಾ. ಭಟ್ ದಂಪತಿಗಳಿಗೆ ಕಾಸರಗೋಡು ಕರ್ನಾಟಕಕ್ಕೆ ಇನ್ನೂ ಸೇರದಿರುವ ಬಗೆಗೆ ನೋವಿದೆ. ದಿನೇ ದಿನೇ ಇಲ್ಲಿನ ಕನ್ನಡ ವಾತಾವರಣ ಕ್ಷೀಣಿಸುತ್ತಿರುವುದರ ಬಗೆಗೆ ವ್ಯಥೆಯಿದೆ. ತಮ್ಮ ದುರ್ದೆಶೆಗೆ ಸ್ಪಂದಿಸದ ಹಾಗೂ ಕಾಸರಗೋಡು ಕರ್ನಾಟಕಕ್ಕೆ ಸೇರುವುದರ ಬಗೆಗೆ ನಿರಾಸಕ್ತರಲ್ಲೊಬ್ಬರಾದ, ಕಾಸರಗೋಡಿನಲ್ಲಿ ಕನ್ನಡದ ಹಿತ ಕಾಪಾಡಲು ಶ್ರಮಿಸಿದ, ಮಹಾಜನ ಆಯೋಗಕ್ಕೆ ಕಾಸರಗೋಡಿನ ಬಗೆಗೆ ಸವಿವರ ವರದಿ ವಕೀಲ ಶ್ರೀ ಬಿ.ಎಸ್. ಕಕ್ಕಿಲ್ಲಾಯರ ಮಗಳು, ಅವರ ಪತಿ ಡಾ. ಎಸ್.ಎನ್. ಭಟ್ ಅವರಿಗೆ ಈಗಲೂ ಕನ್ನಡದ ಬಗೆಗೆ ಕಳಕಳಿ ಇದೆ. ಕಾಸರಗೋಡಿನಲ್ಲಿ ಸ್ವಂತ ವೈದ್ಯಕೀಯ ಶುಶ್ರೂಷಾಲಯವನ್ನು ಹೊಂದಿರುವ ಡಾ. ಭಟ್ ದಂಪತಿಗಳು ಆ ಭಾಗದ ಜನರ ನಾಡಿ ಮಿಡಿತವನ್ನು ಚೆನ್ನಾಗಿ ಬಲ್ಲವರು. 1.4.1994ರಂದು ಡಾ. ಭಟ್ ದಂಪತಿಗಳನ್ನು ಕಾಸರಗೋಡಿನ ಅವರ ಮನೆಯಲ್ಲಿ ಸಂದರ್ಶಿಸಲಾಯಿತು. ಸಂದರ್ಶನದ ಸಮಯದಲ್ಲಿ ಜೊತೆಗಿದ್ದರು. ಶ್ರೀ.ಬಿ. ವಿ. ಕಕ್ಕಿಲಾಯ ಮತ್ತು ಶ್ರೀ ಸಿ. ಆರ್. ಕೃಷ್ಣರಾವ್.

ಎಚ್. ಎಸ್. ಜಿ.: ಮಹಾಜನ್ ಆಯೋಗದ ವರದಿಯ ಪ್ರಕಾರ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು. ಈ ಬಗ್ಗೆ ಡಾ. ಭಟ್ ಕಾಸರಗೋಡಿನ ಕನ್ನಡಿಗರ ವಿನಹ ಇನ್ನಾರಿಗೂ ಈ ಬಗ್ಗೆ ಆಸಕ್ತಿಯಿಲ್ಲ. ಇಲ್ಲಿನ ಕನ್ನಡಿಗರು ದಿನನಿತ್ಯ ಈ ಬಗ್ಗೆ ಆಸಕ್ತಿ ವಹಿಸಿ, ಈಗ ಒಂದು ರೀತಿಯ ನಿರಾಸೆಗೆ ತುತ್ತಾಗಿದ್ದಾರೆ. ಮಂಗಳೂರಿನವರು ಕೂಡಾ, 'ಕಾಸರಗೋಡು ಎಲ್ಲಿದ್ದರೇನು? ನಾವೆಲ್ಲಾ ಭಾರತೀಯರು ಎನ್ನುವ ಮನೋಭಾವ ಬೆಳೆಸಿಕೊಳ್ಳಿ' ಎಂದು ಬುದ್ಧಿ ಹೇಳುತ್ತಾರೆ. ಇಲ್ಲಿನ ಕನ್ನಡಿಗರು ಅನುಭವಿಸುತ್ತಿರುವ ನೋವು ನಮಗಷ್ಟೇ ಗೊತ್ತು. ಬೇರೆ ಯಾರಿಗೂ ಅದು ಅರ್ಥ ಆಗುತ್ತಿಲ್ಲ. 'ನಾವು ನಮ್ಮ ಭಾಷೆಯನ್ನು ಪ್ರೀತಿಸಬೇಕು. ಇತರ ಭಾಷೆಗಳನ್ನು ದ್ವೇಷಿಸಬೇಕಾಗಿಲ್ಲ' ಎನ್ನುವ ಮನೋಭಾವ ನಮ್ಮದು. ಇಲ್ಲಿ ಮೂವ್ವತ್ತು ವರ್ಷದ ಹಿಂದೆ ಒಬ್ಬ ಎಸ್.ಪಿ. ಇದ್ದ. ಆತ ಒಂದು ದಿನ ಇಲ್ಲಿಯ ಕಲೆಕ್ಟರ್ ಬಳಿ ಬಂದು ಹೇಳಿದ. ಇಲ್ಲಿ ಒಂದು ವರ್ಗದ ಜನ ಮತ್ತೊಂದು ವರ್ಗದ ಜನರ ಮೇಲೆ ಅಧಿಕಾರ ಪಡಯುತ್ತಿದ್ದಾರೆ. ಇದು ಹೀಗೇ ಮುಂದುವರಿದರೆ ಶೋಷಣೆಗೆ ಗುರಿಯಾಗುವ ಒಂದು ವರ್ಗದ ಜನ ಬಹಳ ಬೇಗ ನಶಿಸಿಹೋಗುತ್ತಾರೆ.

ಎಚ್. ಎಸ್. ಜಿ. : ಯಾವ ಹಿನ್ನೆಲೆಯಲ್ಲಿ ಈ ಮಾತು ಹೇಳುತ್ತಿದ್ದೀರಿ?

ಡಾ.ಭಟ್ : ಇಲ್ಲಿ ಸಾಮಾಜಿಕ ಸಾಮರಸ್ಯ ಇಲ್ಲ. ಸಾರ್ವಜನಿಕ ಜೀವನದಲ್ಲಿರುವ ನಮ್ಮಂತಹವರಿಗೆ ಈ ಆತಂಕದ ಅರಿವಿದೆ. ಮಂಗಳೂರಿನಲ್ಲಿ ಕೂಡಾ ಒಂದು ವರ್ಗದ ಜನರ ಭಾಷೆ ಮತ್ತು ಸಂಸ್ಕೃತಿ ಇನ್ನೊಂದು ವರ್ಗದವರ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಅಧಿಕಾರ ಚಲಾಯಿಸುತ್ತಿದೆ.

ಎಚ್. ಎಸ್. ಜಿ : ಇದಕ್ಕೆ ಕಾರಣ ಏನು?

ಡಾ.ಭಟ್ : ನ್ಯಾಯವನ್ನು ನಿರಾಕರಿಸಲಾಗುತ್ತಿರುವುದೇ ಇದಕ್ಕೆ ಕಾರಣ. ಅದೇ ದೊಡ್ಡ ದುರಂತ.

ಎಚ್.ಎಸ್.ಜಿ. : ಕಾಸರಗೋಡು ಕರ್ನಾಟಕಕ್ಕೆ ಸೇರಿದರೆ ಅನ್ಯಾಯದ ನಿವಾರಣೆ ಆಗಬಹುದೇ?

ಡಾ.ಭಟ್ : ನಿವಾರಣೆ ಆಗಬಹುದು ಅಂತ ನಮ್ಮ ನಿರೀಕ್ಷೆ. ಖಂಡಿತವಾಗಿಯೂ ಆ ನಿಟ್ಟಿನಲ್ಲಿ ಅದು ಮೊದಲ ಮೆಟ್ಟಿಲಾಗಬೇಕು. ನಮ್ಮನ್ನು ಉಪೇಕ್ಷಿಸಲಾಗಿದೆ. ತುಳಿಯಲಾಗಿದೆ. ಮೊದಲು ಅದು ತಪ್ಪಬೇಕು. ಸಾಮಾನ್ಯವಾಗಿ ಕನ್ನಡಿಗರು ವಿಶಾಲ ಮನೋಭಾವದವರು. ಆದರೆ ನಾವು ತುಳಿತಕ್ಕೆ ಒಳಗಾಗಿದ್ದೇವೆ.

ಎಚ್.ಎಸ್‌ಜಿ. : ಈಗಲೂ ಈ ಭಾಗದಲ್ಲಿ (ಕಾಸರಗೋಡು) ಕನ್ನಡಿಗರ ಜನಸಂಖ್ಯೆ ಹೆಚ್ಚಿದೆಯೆ?

ಡಾ.ಭಟ್ : ಅದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ತುಳು ಮಾತೃ ಭಾಷೆಯ ಆದಿವಾಸಿ ಕೊರಗರನ್ನು ಬಲವಂತವಾಗಿ ಪರಿವರ್ತಿಸುವ ಕೆಲಸ ನಡೆದಿದೆ. ಅವರಿಗೆ ಬಲವಂತವಾಗಿ ಮಲೆಯಾಳ ಕಲಿಸಿ, ಅವರನ್ನು ಮಲೆಯಾಳಿಗಳೆಂದೇ ಪರಿಗಣಿಸಲಾಗುತ್ತಿದೆ. ಅವರೆಲ್ಲಾ ಬಡವರ್ಗಕ್ಕೆ ಸೇರಿದವರು.

ಎಚ್. ಎಸ್.ಜಿ : ಅಂದರೆ ಇಲ್ಲಿಯ ಜನರ ಮೇಲೆ ಬೇರೊಂದು ಭಾಷೆ ಮತ್ತು ಸಂಸ್ಕೃತಿಯನ್ನು ಬಲವಂತವಾಗಿ ಹೇರಲಾಗುತ್ತಿದೆ. ಎಂಬ ಅರ್ಥವೆ? ಇಲ್ಲಿ ಕನ್ನಡ ಶಾಲೆಗಳು ಇಲ್ಲವೆ?

ಡಾ.ಭಟ್ : ಇವೆ. ಆದರೆ ಅವು ಸಮರ್ಪಕವಾಗಿಲ್ಲ. ಇದಕ್ಕೆ ನಮ್ಮವರಲ್ಲಿ ಒಗ್ಗಟ್ಟಿಲ್ಲದಿರುವುದೇ ಕಾರಣ.

ಎಚ್.ಎಸ್.ಜಿ. : ಅನೈಕಮತಕ್ಕೆ ಕಾರಣಗಳೇನು?

ಡಾ.ಭಟ್ : ಸಾರ್ವಜನಿಕ ಜೀವನದಲ್ಲಿ ನಿಸ್ವಾರ್ಥತೆ ಮತ್ತು ಸಾರ್ವಜನಿಕ ಹಿತಗಳೆರಡೂ ಮುಖ್ಯ. ಅದು ಇಲ್ಲದಿದ್ದರೆ ಒಗ್ಗಟ್ಟಿರಲು ಸಾಧ್ಯ ಇಲ್ಲ. ದುರಭಿಮಾನ ಬೆರೆತರೆ ಮತ್ತಷ್ಟು ಹಾನಿ. ಯಾವ ಕಾಲದಲ್ಲಿ ನಮ್ಮ ಉದ್ದಿಶ್ಯ ಈಡೇರಬೇಕಾಗುತ್ತೋ ಆಗ ಆಗಲಿಲ್ಲ. ಈಗ ಅದನ್ನು ನಾವೇ ತುಳಿದು ಹಾಕಿದ್ದೇವೆ. ನಮಗೆ ಬೆಂಗಳೂರು ಮತ್ತು ಮಂಗಳೂರಿನಿಂದಲೂ ಸಹಕಾರವಿಲ್ಲ.

ಎಚ್.ಎಸ್.ಜಿ. : ಮಂಗಳೂರಿನಿಂದಲೂ ನಿಮಗೆ ಸಹಕಾರ ಇಲ್ಲವೆ?

ಡಾ.ಭಟ್ : ಸಾಕಾಗೋದಿಲ್ಲ. ನಾವು ಇನ್ನೂ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸುತ್ತೇವೆ.

ಎಚ್.ಎಸ್.ಜಿ : ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗಲೇ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕಾಗಿತ್ತು ಅಥವಾ ಮಹಾಜನ್ ಆಯೋಗದ ವರದಿಯ ಪ್ರಕಾರವಾದರೂ...

ಡಾ.ಭಟ್ : ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ಪಣಿಕ್ಕರ್ ತಮ್ಮ ಮಲೆಯಾಳೀ ಚಾಣಾಕ್ಷತನವನ್ನು ಪ್ರಯೋಗಿಸಿದರು. ಹಾಗಾಗಿ ಕಾಸರಗೋಡು ಕರ್ನಾಟಕದ ಕೈ ತಪ್ಪಿತು.

ಎಚ್.ಎಸ್.ಜಿ : ಕರ್ನಾಟಕಕ್ಕೆ ಕಾಸರಗೋಡು ಸೇರುತ್ತದೆ ಎನ್ನುವ ಆಸೆ ನಿಮಗೆ ಇನ್ನೂ ಇದೆಯೇ?

ಡಾ.ಭಟ್ : ಖಂಡಿತವಾಗಿ ಇದೆ. ಹಾಗೆ ನಾವು ಕರ್ನಾಟಕಕ್ಕೆ ಸೇರಿದಾಗಲೂ ನಾವು ಇಲ್ಲಿಯ ಮಲೆಯಾಳಿಗಳನ್ನು ದ್ವೇಷಿಸುವುದಿಲ್ಲ.

ಎಚ್.ಎಸ್.ಜಿ : ಕಾಸರಗೋಡು ಕರ್ನಾಟಕಕ್ಕೆ ಸೇರಲು ಇಲ್ಲಿನ ವಾತಾವರಣವನ್ನು ಸಿದ್ಧಪಡಿಸಲಾಗಿದೆಯೇ?

ಡಾ.ಭಟ್ : ಸಿದ್ಧಪಡಿಸಬೇಕು. ನ್ಯಾಯವಾಗಿ ಮಹಾಜನ್ ಆಯೋಗದ ವರದಿಯನ್ನು ಜಾರಿಗೆ ತರುವುದೊಂದೇ ಅದಕ್ಕಿರುವ ಉಪಾಯ.

ಎಚ್.ಎಸ್.ಜಿ : ಜನರ ಕೂಗಿಲ್ಲದೇ ಆ ಕೆಲಸವನ್ನು ಸರ್ಕಾರ ಮಾಡೋದಿಲ್ಲ.

ಡಾ.ಭಟ್ : ನಿಜ ಸರ್ಕಾರಕ್ಕೆ ಇಂತಹ ವಿಷಯಗಳಲ್ಲಿ ಆಸಕ್ತಿ ಇಲ್ಲ. ಇಂತಹ ವಿಷಯಗಳ ಬಗ್ಗೆ ರಾಜಕೀಯ ಪಕ್ಷಗಳ ಜೊತೆಗೆ ಗುರುತಿಸುವ ಪ್ರಯತ್ನ ನಡೆಯುತ್ತದೆ. ಇದು ಹಾನಿಕಾರಕ. ಇಲ್ಲಿ ಕರ್ನಾಟಕ ಮತ್ತು ಕನ್ನಡಕ್ಕೆ ಸಂಬಂಧಿಸಿದ ಸಂಘ, ಸಂಸ್ಥೆಗಳಿವೆ, ಪರಿಷತ್ತು ಇದೆ. ಇವೆಲ್ಲವೂ ತಮ್ಮ ಪ್ರಯತ್ನವನ್ನು ಬಲಗೊಳಿಸಬೇಕು. ಈಗ ಕರ್ನಾಟಕದಲ್ಲಿ

ಕಾಸರಗೋಡು ವಿಲೀನ ಮುಖ್ಯವಾಗಬೇಕು. ಇಲ್ಲವಾದರೆ ದಿನದಿಂದ ದಿನಕ್ಕೆ ಸಮಸ್ಯೆಗಳು ಬೆಳೆಯುತ್ತಲೇ ಹೋಗುತ್ತವೆ.

ಡಾ. ಲಲಿತಾ ಭಟ್ : ಈಗಾಗಲೇ ಇಲ್ಲಿಗೆ ಉದ್ಯೋಗದ ಕಾರಣ ವಲಸೆ ಬಂದಿರುವ ಮಲೆಯಾಳಿಗಳ ಸಂಖ್ಯೆ ಹೆಚ್ಚಿದೆ. ಆದರೆ ಮೂಲನಿವಾಸಿಗಳೆಲ್ಲರೂ ಬಹುತೇಕ ತುಳುವರೇ ಆಗಿದ್ದಾರೆ. ಅವರ ಮಾತೃಭಾಷೆ ತುಳು, ಕೊಂಕಣಿ ಆದರೂ ಅವರೆಲ್ಲರ ವ್ಯವಹಾರದ ಭಾಷೆ ಕನ್ನಡವೇ ಆಗಿದೆ.

ಎಚ್.ಎಸ್.ಜಿ : ಕಾಸರಗೋಡು ಕರ್ನಾಟಕಕ್ಕೇ ಸೇರಬೇಕು ಎನ್ನುವುದು ಕೇವಲ ವಿದ್ಯಾವಂತರ ಅಭಿಪ್ರಾಯವೆ? ಅಥವಾ ಇಲ್ಲಿನ ಎಲ್ಲಾ ಕನ್ನಡಿಗರ ಅಭಿಪ್ರಾಯವೆ?

ಡಾ. ಲಲಿತಾ ಭಟ್ : ವಿಲೀನವಾಗಬೇಕು ಎನ್ನುವುದು ಇಲ್ಲಿನ ಎಲ್ಲ ಕನ್ನಡಿಗರ ಅಭಿಪ್ರಾಯ. ಆದರೆ ಪ್ರಯತ್ನಕ್ಕೆ ಯಾರೂ ಮುಂದಾಗುವುದಿಲ್ಲ. ಒಬ್ಬೊಬ್ಬರ ಪ್ರಯತ್ನದಿಂದ ಏನಾಗುತ್ತದೆ? ಆದ್ದರಿಂದ ಸುಮ್ಮನಿರುವುದೇ ಲೇಸು ಎಂಬ ಅಭಿಪ್ರಾಯ ಬಹುತೇಕ ಜನರದು. ಈಗ ಮಂಗಳೂರಿನವರಿಗೂ ಕೂಡಾ ಕಾಸರಗೋಡು ನಮ್ಮದು ಎಂಬ ಭಾವನೆ ಇಲ್ಲ. ಇಲ್ಲಿನ ಸರ್ಕಾರ ಇದನ್ನು ತುಳುನಾಡು ಎಂದು ಒಪ್ಪಿದೆ. ತುಳುವಿಗೆ ಲಿಪಿ ಇಲ್ಲ. ಆದ್ದರಿಂದ ತುಳು ಮಾತೃಭಾಷೆಯ ಜನ ಕನ್ನಡದ ಬದಲು ಮಲೆಯಾಳಂ ಕಲಿಯಬಹುದಲ್ಲ ಅನ್ನುವ ಮಾತೂ ಕೇಳಿಬರುತ್ತಿದೆ.

ಎಚ್.ಎಸ್. ಜಿ : ಕಾಸರಗೋಡನ್ನು ತಮ್ಮದಾಗಿಸಿಕೊಳ್ಳುವ ಬಗ್ಗೆ ಕರ್ನಾಟಕ ಮತ್ತು ಕೇರಳ ಸರ್ಕಾರಗಳು ತಮ್ಮದೇ ಆದ ವಿಶೇಷ ಕಾರ್ಯಕ್ರಮಗಳನ್ನೇನಾದರೂ ಹಮ್ಮಿಕೊಂಡಿವೆಯೇ?

ಬಿ.ವಿ. ಕಕ್ಕಿಲಾಯ : ಕೇರಳ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕರ್ನಾಟಕ ಸರ್ಕಾರ ನಾಟಕ, ಸಾಂಸ್ಕೃತಿಕ ಇತ್ಯಾದಿಗಳಿಗೆ ಸ್ವಲ್ಪ ನೆರವನ್ನು ಮಾತ್ರ ಕೊಡುತ್ತದೆ.

ಡಾ. ಲಲಿತಾ ಭಟ್ : ಕರ್ನಾಟಕ ಸರ್ಕಾರ ಸಾಹಿತ್ಯ ಅಕಾಡೆಮಿಯಲ್ಲಿ ಸ್ಥಾನ ಕೊಟ್ಟಿದೆ. ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ಮಹಿಳೆಯರ ಕಲ್ಯಾಣಕ್ಕೆ ಆರ್ಥಿಕ ನೆರವು ನೀಡುತ್ತದೆ. ಹೊರನಾಡು ಮತ್ತು ಗಡಿನಾಡಿನ ಕನ್ನಡಿಗರಿಗೆ ಕರ್ನಾಟಕ ಸರ್ಕಾರದಿಂದ ದೊರಕುವ ಸೌಲಭ್ಯಗಳು ನಮಗೂ ದೊರೆಯುತ್ತಿವೆ. ಕೇರಳ ಸರ್ಕಾರವೂ ಇಲ್ಲಿ ವಿಶೇಷ ಯೋಜನೆಗಳನ್ನು ಹಮ್ಮಿಕೊಂಡಿಲ್ಲ. ಎಂದಾದರೊಂದು ದಿನ ಇದು ಕರ್ನಾಟಕಕ್ಕೆ ಹೋಗಿ ಬಿಡುತ್ತದೆ. ಎಂಬ ಭಯ ಅದಕ್ಕೆ ಕಾರಣ ಇರಬೇಕು.

ಸಿ.ಆರ್‌ಕೆ. : ಇಲ್ಲಿನ ಕನ್ನಡ ಶಾಲೆಗಳಿಗೆ ಕರ್ನಾಟಕ ಸರ್ಕಾರ ಆರ್ಥಿಕ ಸಹಾಯ ಮಾಡುತ್ತಿಲ್ಲವೇ?

ಡಾ. ಲಲಿತಾ ಭಟ್ : ಇಲ್ಲ.

ಬಿ.ವಿ.ಕಕ್ಕಿಲ್ಲಾಯ : ಕರ್ನಾಟಕ ಸರ್ಕಾರ ಇಲ್ಲಿ ಎಂಜಿನಿಯಿರಿಂಗ್ ಕಾಲೇಜ್ ಸ್ಥಾಪಿಸಲು ಅನುಮತಿ ಕೋರಿತ್ತು. ಆದರೆ ಅನುಮತಿ ದೊರೆಯಲಿಲ್ಲ.

ಡಾ.ಲಲಿತಾ ಭಟ್ : ಕೇರಳ ಸರ್ಕಾರ ಚಂದ್ರಗಿರಿ ನದಿಯ ಆಚೆ ಪೆರಿಯ ಎಂಬಲ್ಲಿ ಎಂಜಿನಿಯರಿಂಗ್ ಕಾಲೇಜ್ ಸ್ಥಾಪಿಸಿದೆ.

ಬಿ.ವಿ. ಕಕ್ಕಿಲಾಯ : ಈ ನಿಟ್ಟಿನಲ್ಲಿ ಕಾಸರೋಡು ಸಮಿತಿ ಕೆಲಸ ಮಾಡಬಹುದಿತ್ತು. ಕನ್ನಡ ಶಾಲಾ - ಕಾಲೇಜುಗಳನ್ನು ಸ್ಥಾಪಿಸಬಹುದಾಗಿತ್ತು. ಭಾಷಾವಾರು ಅಲ್ಪಸಂಖ್ಯಾತರ ಪರವಾಗಿ ಈ ಕೆಲಸ ಮಾಡದಿದ್ದರೆ ಅನುಕೂಲವಾಗುತ್ತಿತ್ತು. ಆದರೆ ಸಿಗಲಿಲ್ಲ. ಹಿಂದೆ ಎಡನೀರು ಮಠದ ಸ್ವಾಮಿಗಳು ಕನ್ನಡ ಶಾಲೆಯನ್ನು ಸ್ಥಾಪಿಸಿದರು. ಕನ್ನಡ ಮಾಧ್ಯಮದ ಶಾಲೆ ಎಂಬ ಕಾರಣ ಅದಕ್ಕೆ ಕೇರಳ ಸರ್ಕಾರ ಅನುದಾನ ನೀಡಲಿಲ್ಲ. ಸಮಾನಾಂತರ ಮಲೆಯಾಳಿ ಮಾಧ್ಯಮ ತರಗತಿಗಳಿದ್ದರೆ ಮಾತ್ರ ಅನುದಾನ ನೀಡುವುದಾಗಿ ತಿಳಿಸಿತು. ಕರ್ನಾಟಕ ಸರ್ಕಾರವೂ ನೆರವು ನೀಡಲಿಲ್ಲ.

ಎಚ್.ಎಸ್.ಜಿ : ಇಲ್ಲಿ ಯಾವ ರೀತಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಮತ್ತು ಇಲ್ಲಿನ ಪ್ರಮುಖ ಕನ್ನಡ ಸಂಘ ಸಂಸ್ಥೆಗಳು ಯಾವುವು?

ಡಾ.ಲಲಿತ ಭಟ್ : ಇಡೀ ವರ್ಷ ಒಂದಲ್ಲ ಒಂದು ಕಾರ್ಯಕ್ರಮಗಳು ಇದ್ದೇ ಇರುತ್ತವೆ. ಲಲಿತ ಕಲಾಸದನ, ಕರ್ನಾಟಕ ಸಮಿತಿ, ಕರಾವಳಿ ಪ್ರತಿಷ್ಠಾನ, ಕನ್ನಡ ಮಹಿಳಾ ಸಂಘ, ಕರಾವಳಿ ಲೇಖಕಿಯವರ ಸಂಘ ಇತ್ಯಾದಿ ಅನೇಕ ಕನ್ನಡ - ಸಂಸ್ಥೆಗಳಿವೆ.

ಎಚ್. ಎಸ್. ಜಿ : ಇಷ್ಟೆಲ್ಲಾ ನೋವುಗಳ ನಡುವೆ ಕೂಡಾ ನಿಮ್ಮತನವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ನೀವು ಮಾಡಿಕೊಂಡೇ ಬಂದಿದ್ದೀರಿ. ನೀವು ಈಗಲೂ ನಾಡಹಬ್ಬವನ್ನು ಆಚರಿಸುತ್ತೀರಾ?

ಡಾ. ಲಲಿತಾ ಭಟ್ : ಅಲ್ಲಲ್ಲಿ ಹಳ್ಳಿಗಳಲ್ಲಿ ನಾಡಹಬ್ಬವನ್ನು ಆಚರಿಸಿ, ಒಂಬತ್ತನೆಯ ದಿನ ಎಲ್ಲರೂ ಒಟ್ಟಾಗಿ ಕಾಸರಗೋಡಿನಲ್ಲಿ ಸಮಾರೋಪವನ್ನು ಆಚರಿಸುತ್ತೇವೆ.

ಶ್ರೀ ಪೆರ್ಲ ಕೃಷ್ಣ ಭಟ್, ಪೆರ್ಲ

ಕಾಸರಗೋಡು ಜಿಲ್ಲೆಯ ಪೆರ್ಲದಲ್ಲಿ ವಾಸವಾಗಿರುವ ಪೆರ್ಲ ಕೃಷ್ಣಭಟ್ಟರು ಎಪ್ಪತ್ತು ವರ್ಷಗಳ ಸಾರ್ಥಕ ಜೀವನವನ್ನು ಇತ್ತೀಚೆಗಷ್ಟೇ ಪೂರೈಸಿದ್ದಾರೆ. ಸಂಸ್ಕೃತ, ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದಿರುವ ಶ್ರೀಯುತರು ನಿವೃತ್ತ ಹಿಂದೀ ಅಧ್ಯಾಪಕರು, ಪೆರ್ಲದ ಶಾಲೆಯಲ್ಲಿ ತಮ್ಮ ಹೆಚ್ಚಿನ ವೃತ್ತಿ ಜೀವನವನ್ನು ಕಳೆದ ಶ್ರೀಯುತರು ಯಕ್ಷಗಾನದ ಬಗೆಗೆ ವಿಶೇಷ ಆಸಕ್ತಿ ಹೊಂದಿರುವವರು. ಯಕ್ಷಗಾನದ ಅರ್ಥಧಾರಿಯಾಗಿ ಹೆಚ್ಚು ಹೆಸರು ಮಾಡಿರುವ ಶ್ರೀಯುತರು ಕನ್ನಡದ ಬಗೆಗೆ ಈಗಲೂ ಕಳಕಳಿ ಇರಿಸಿಕೊಂಡಿದ್ದಾರೆ. ಕಾಸರಗೋಡು ಕರ್ನಾಟಕಕ್ಕೆ ಸೇರಲೇಬೇಕೆಂಬ ಅಭಿಲಾಷೆಯನ್ನು ಹೊಂದಿರುವ ಶ್ರೀಯುತರನ್ನು 1.4.94 ರಂದು ಪೆರ್ಲದಲ್ಲಿ ಸಂದರ್ಶಿಸಲಾಯಿತು. ಕಾಕತಾಳೀಯವೆಂಬಂತೆ 2.4.94 ರಂದು ಅವರನ್ನು ಅವರಿಗೆ 70 ವರ್ಷ ತುಂಬಿದ ಸಮಯದಲ್ಲಿ ಪೆರ್ಲದಲ್ಲಿ ಸತ್ಕರಿಸಲಾಯಿತು. 1.4.94 ರಂದು ಅವರನ್ನು ಸಂದರ್ಶಿಸಿದಾಗ ಜೊತೆಯಲ್ಲಿ ಶ್ರೀ ಬಿ.ವಿ.ಕಕ್ಕಿಲಾಯ ಮತ್ತು ಶ್ರೀ ಸಿ.ಆರ್. ಕೃಷ್ಣರಾವ್ ಅವರೂ ಇದ್ದರು.

ಎಚ್.ಎಸ್.ಜಿ : ಏಕೀಕರಣ ಹೋರಾಟದಲ್ಲಿ ನೀವು ಯಾವ ರೀತಿ ತೊಡಗಿಕೊಂಡಿದ್ದೀರಿ?

ಕೃಷ್ಣ ಭಟ್ : ಸ್ವಾತಂತ್ರ್ಯ ಬರುವುದಕ್ಕೆ ಮೊದಲೇ ಕರ್ನಾಟಕ ಏಕೀಕರಣವಾಗಬೇಕೆಂಬ ಬೇಡಿಕೆ ಇತ್ತು. ಸ್ವಾತಂತ್ರ್ಯ ಬಂದ ಮೇಲೆ ಏಕೀಕರಣ ಆಗಲೇಬೇಕು ಎಂಬ ಉತ್ಸಾಹ ಹೆಚ್ಚಿತು.

ಎಚ್.ಎಸ್‌ಜಿ. : ಆಗ ಈ ಭಾಗದಿಂದ ಏಕೀಕರಣ ಚಳುವಳಿಯಲ್ಲಿ ತೊಡಗಿಕೊಂಡಿದ್ದ ಪ್ರಮುಖರು ಯಾರು?

ಕೃಷ್ಣಭಟ್ : ಕೆ.ಆರ್.ಕಾರಂತ, ಬಿ.ಎಸ್. ಕಕ್ಕಿಲಾಯ, ಕಯ್ಯಾರ ಕಿಞ್ಞಣ್ಣ ರೈ, ಯು.ಪಿ ಕುಣಿಕುಳ್ಳಾಯ ಜೊತೆಗೆ ಈ ಭಾಗದ ಅನೇಕ ಸಾಹಿತಿಗಳು ಮತ್ತು ಬುದ್ಧಿಜೀವಿಗಳು ಚಳವಳಿಯಲ್ಲಿ ಇದ್ದರು.

ಎಚ್.ಎಸ್.ಜಿ : ಇದರ ಜೊತೆಗೆ ರಾಜಕಾರಣಿಗಳ ಪಾತ್ರ ಹೇಗಿತ್ತು.

ಕೃಷ್ಣಭಟ್ : ರಾಜಕಾರಣಿಗಳು ಏಕೀಕರಣಕ್ಕೆ ವಿರೋಧಿಗಳಾಗಿರಲಿಲ್ಲ. ಆದರೆ ಅವರಿಗೆ ಅದೇ ಮುಖ್ಯವಾಗಿರಲಿಲ್ಲ ಏಕೀಕರಣದ ಬಗೆಗೆ ರಾಜಕಾರಣಿಗಳಿಗಿಂತ ಸಾಹಿತಿಗಳಿಗೆ ಹೆಚ್ಚು ಅಭಿಲಾಷೆಯಿತ್ತು.

ಎಚ್.ಎಸ್.ಜಿ : ನಿಮ್ಮ ವಿದ್ಯಾಭ್ಯಾಸಕ್ಕೆ ಮದ್ರಾಸ್ ಸರ್ಕಾರ ಮಾಡಿದ್ದ ಏರ್ಪಾಡುಗಳಲ್ಲಿ ಕನ್ನಡದ ಬಗೆಗೆ ಉಪೇಕ್ಷೆ ಏನಾದರೂ ಇತ್ತೆ?

ಕೃಷ್ಣ ಭಟ್ : ಖಂಡಿತಾ ಇಲ್ಲ.

ಎಚ್. ಎಸ್. ಜಿ : ಈ ಸುತ್ತಿನಲ್ಲಿ ಏಕೀಕರಣಕ್ಕಾಗಿ ನಡೆದ ಹೋರಾಟದ ಕೆಲವು ಪ್ರಮುಖ ಘಟ್ಟಗಳ ಬಗ್ಗೆ ತಿಳಿಸುತ್ತೀರಾ?

ಕೃಷ್ಣ ಭಟ್ : ಆ ಕಾಲದ ಹೋರಾಟ, ಚಳುವಳಿ ಎಂದರೆ ಈ ಕಾಲದ ಹೋರಾಟ, ಚಳುವಳಿ, ಸತ್ಯಾಗ್ರಹ, ಧರಣಿಗಳಂತಿರಲಿಲ್ಲ. ಸಭೆ ಸಮಾರಂಭಗಳಲ್ಲಿ ಭಾಷಣಗಳ ಮೂಲಕ ಕನ್ನಡದ ಬಗೆಗೆ, ಏಕೀಕರಣದ ಮಹತ್ವ ಮತ್ತು ಅವಶ್ಯಕತೆಗಳ ಬಗೆಗೆ ತಿಳಿಸುವುದಷ್ಟೆ ನಮ್ಮ ಹೋರಾಟ ಅಥವಾ ಚಳುವಳಿಯ ಸ್ವರೂಪವಾಗಿತ್ತು. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನರಿಗೆ ಕನ್ನಡದ ಬಗೆಗೆ ಕಳಕಳಿ ಮೂಡಿಸಲು ಪ್ರಯತ್ನಿಸುತ್ತಿದ್ದೆವು.

ಎಚ್.ಎಸ್.ಜಿ : ವಿಶಾಲ ಮೈಸೂರು ರಾಜ್ಯ ನಿರ್ಮಾಣವಾದಾಗ ನೀವು ಅದರ ಜೊತೆಗೆ ಸೇರಿಕೊಳ್ಳಲಿಲ್ಲ. ಆಗ ನಿಮ್ಮ ಭಾವನೆಗಳು ಹೇಗಿದ್ದವು?

ಕೃಷ್ಣಭಟ್ : ಒಂದು ಉದಾಹರಣೆ ಹೇಳ್ತೀನಿ. ಸಂಸ್ಕೃತದಲ್ಲಿ ಒಂದು ಒಳ್ಳೆಯ ಶ್ಲೋಕ ಉಂಟು.

> ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಮ್
> ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ
> ಇತ್ಥಂವಿಚಿಂತಯತಿ ಕೋಶಗತೇ ದ್ವಿರೇಫೇ
> ಹಾ ಹಂತಹಂತ ನಳಿನೀಂ ಗಜ ಉಜ್ಜಹಾರಃ

(ಇರುಳು ಕಳೆಯುತ್ತದೆ. ಅರುಣೋದಯವಾಗುತ್ತದೆ. ಸೂರ್ಯನು ಉದಯಿಸುತ್ತಾನೆ. ಕಮಲವು ಅರಳಿ ನಗೆ ಬೀರುತ್ತದೆ. ಎಂದು ಕಮಲದೊಳಗೆ ರಾತ್ರಿ ಸಿಕ್ಕಿಬಿದ್ದ ದುಂಬಿಯು ಆಶಾಭಾವನೆಯಿಂದ ಹಾರಿಹೋಗಲು ಯೋಚಿಸುತ್ತಿತ್ತು. ಬೆಳಕು ಹರಿಯುವ ಮುನ್ನವೇ ಆನೆಯೊಂದು ಕಮಲವಿದ್ದ ಕೊಳಕ್ಕೆ ಬಂದು, ಅದನ್ನು ಬುಡಸಹಿತ ಕಿತ್ತೊಗೆಯಿತು.) ಕಾಸರಗೋಡಿನ ಕನ್ನಡಿಗರ ಕತೆ ದುಂಬಿಯ ಕತೆಯಂತೆಯೇ ಆಯಿತು. ಭಾಷಾವಾರು ಪ್ರಾಂತ್ಯ ರಚನೆಯಾದಾಗ ನಮ್ಮನ್ನು ಯಾರೂ ಕೇಳಲಿಲ್ಲ. ಮಹಾಜನ್ ಆಯೋಗ ಬಂದಾಗ ನಮಗೆ ಮತ್ತೆ ಆಶೆ ಮೂಡಿತು. ಆಗ.ಕೆ.ಆರ್. ಕಾರಂತರು ಪೆಟ್ಟು

ಶ್ರಮ ವಹಿಸಿದರು. ಹೆಚ್ಚು ಒತ್ತಾಯಿಸಿದರೆ ಬೆಳಗಾವಿ ಕೈಬಿಟ್ಟುಹೋಗುತ್ತದೆ ಎಂಬ ಭಯದಿಂದ ಎಲ್ಲರೂ ಹೆದರಿದಂತೆ ಕಾಣುತ್ತದೆ. ಮಹಾಜನ್ ಆಯೋಗ ವರದಿ ಪ್ರಕಟವಾದಾಗ ಕಾಸರಗೋಡಿನ ಉತ್ತರ ಭಾಗ ಕರ್ನಾಟಕಕ್ಕೆ ಸೇರುತ್ತದೆ ಎಂದು ತಿಳಿದು ಎಲ್ಲರಿಗೂ ಸಂತೋಷವಾಯಿತು. ಆದರೆ ಈ ವರದಿ ಜಾರಿಗೆ ಬರುವುದಿಲ್ಲ. ಅಂತ ನನಗೇನೋ ಅನ್ನಿಸಿತ್ತು.

ಎಚ್.ಎಸ್.ಜಿ. : ಮಹಾಜನ ಆಯೋಗದ ವರದಿ ಜಾರಿಯಾಗುತ್ತದೆ. ಎನ್ನುವ ಆಶಾಭಾವನೆ ನಿಮಗೆ ಈಗಲೂ ಇಲ್ಲವೆ?

ಕೃಷ್ಣಭಟ್ : ಖಂಡಿತ ಇಲ್ಲ. ಈಗಿನ ರಾಜಕಾರಣಿಗಳಿಗೆ ಇದು ಮುಖ್ಯವಲ್ಲ. ಅವರಿಗೆ ಅವರದೇ ಬೇರೆ ಧ್ಯೇಯ - ಧೋರಣೆ, ಆಶೆ - ಆಕಾಂಕ್ಷೆಗಳಿವೆ. ಜವಾಹರ್‌ಲಾಲ್ ನೆಹರೂ ಅವರು ಒಮ್ಮೆ ಕಾಸರಗೋಡನ್ನು ಕುರಿತಾಗಿಯೇ ಒಂದು ಮಾತು ಹೇಳಿದ್ದರು. "ನಾಲ್ಕು ಗ್ರಾಮಗಳು ಅತ್ತ ಕಡೆ ಹೋಗಬಹುದು. ಇತ್ತ ಕಡೆ ಹೋಗಬಹುದು. ಇದಕ್ಕೆ ಏಕೆ ಕಿತ್ತಾಟ ಬೇಕು. ನಾವು ಯಾವ ಗ್ರಾಮವನ್ನೂ ಅರಬ್ಬೀ ಸಮುದ್ರಕ್ಕೆ ಹಾಕುವುದಿಲ್ಲ". ಅವರಿಗೆ ಉತ್ತರಿಸಬಹುದಾದ ಸಂದರ್ಭ ಒದಗಿದ್ದರೆ ನಾವು ಹೇಳುತ್ತಿದ್ದೆವು. 'ಎತ್ತ ಕಡೆಯಾದರೂ ಸರಿ ಅನ್ನುವುದಾದರೆ ನಾವು ಇತ್ತ ಕಡೆಯೇ ಅಂದರೆ ಕರ್ನಾಟಕದಲ್ಲೇ ಉಳಿಯುತ್ತೇವೆ.' - ಎಂದು. ಆದರೆ ಆ ಬಗ್ಗೆ ಈಗ ಹೆಚ್ಚಾಗಿ ಯಾರಿಗೂ ಆಸಕ್ತಿ ಉಳಿದಿಲ್ಲ. ಕರ್ನಾಟಕದವರು ಮಹಾಜನ್ ಆಯೋಗದ ವರದಿ ಆಗಲಿ ಅಂತ ಹೇಳ್ತಾರೆ. ಜಾರಿ ಆಗದೆ, ಈಗಿರುವಂತೆಯೇ ಉಳಿದರೂ ಅವರ ಆಕ್ಷೇಪಣೆ ಇಲ್ಲ.

ಎಚ್.ಎಸ್.ಜಿ : ಈಗ ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಈಗ ಕಾಸರಗೋಡು ತಾಲ್ಲೂಕಿನಲ್ಲಿ ಕರ್ನಾಟಕ ಆಗಲೇಬೇಕು ಎಂದು ಒತ್ತಾಯಿಸಿ ಹೇಳುವ ಜನ ಎಷ್ಟಿದ್ದಾರೆ ಎಂದು ಲೆಕ್ಕ ಮಾಡಬೇಕಾಗುತ್ತದೆ. ಕಳೆದ ಮೂವತ್ತು ವರ್ಷಗಳಲ್ಲಿ ಇಲ್ಲಿ ಮಲೆಯಾಳಿ ಆಕ್ರಮಣ ಜಾಸ್ತಿಯಾಗಿದೆ. ಇಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ದಿನೇ ದಿನೇ ಕ್ಷೀಣಿಸುತ್ತಿದೆ. ಇಲ್ಲಿ ಸಭೆ-ಸಮಾರಂಭಗಳು ಮಲೆಯಾಳಿ ಮತ್ತು ತಮಿಳುವಿನಲ್ಲೇ ನಡೆಯುತ್ತದೆ ಕನ್ನಡವನ್ನು ಕೇಳುವ ಜನ ಇಲ್ಲ. ಇಲ್ಲಿ ಮಲೆಯಾಳಕ್ಕಿರುವ ಪ್ರಾಶಸ್ತ್ಯ ಕನ್ನಡಕ್ಕಿಲ್ಲ. ಇಲ್ಲಿ ಕೇರಳದ ಆಡಳಿತ ಇರುವುದರಿಂದ ಜನ ಕೂಡಾ ತಮ್ಮ ಮಕ್ಕಳಿಗೆ ಮಲೆಯಾಳವನ್ನೇ ಕಲಿಸಲು ಇಷ್ಟಪಡುತ್ತಾರೆ.

ಎಚ್.ಎಸ್.ಜಿ : ಕರ್ನಾಟಕದ ಜೊತೆಗೆ ಸೇರಿಕೊಳ್ಳುವ ಆಶಾಭಾವನೆ ನಿಮಗೆ ಈಗ ಇಲ್ಲ..........

ಕೃಷ್ಣ ಭಟ್ : ಆಶಾಭಾವನೆ ಉಂಟು: ಆದೀತೆಂಬ ವಿಶ್ವಾಸ ಇದೆ.

ಸಿ.ಆರ್.ಕೆ. : ಆಶಾಭಾವನೆಗೂ, ವಿಶ್ವಾಸಕ್ಕೂ ತುಂಬ ವ್ಯತ್ಯಾಸ ಇದೆ.

ಎಚ್.ಎಸ್.ಜಿ : ಕರ್ನಾಟಕದ ಗಡಿಯ ಈ ಭಾಗಗಳ ಬಗ್ಗೆ ಕರ್ನಾಟಕ ಸರ್ಕಾರ ವಿಶೇಷವಾದ ಒಲವನ್ನೇನಾದರೂ ತೋರಿಸಿ, ಪ್ರೋತ್ಸಾಹಿಸುತ್ತಿದೆಯೇ?

ಕೃಷ್ಣ ಭಟ್ : ನಮ್ಮನ್ನು ಪೂರ್ತಿ ಉಪೇಕ್ಷಿಸಿಲ್ಲ. ಕೊಡ್ತಾರೆ. ಕಾಸರಗೋಡಿನವರು ರಾಜಕೀಯವಾಗಿ ಬೇರೆಯಾದರೂ ಸಾಂಸ್ಕೃತಿಕವಾಗಿ ನಮ್ಮವರೇ ಎಂದು ಕರ್ನಾಟಕ ಸರಕಾರದವರು ಸಹಾಯ ಮಾಡುತ್ತಿದ್ದಾರೆ. ಇಲ್ಲಿನ ಕಲಾವಿದರಿಗೆ ಮಾಸಾಶನ ಕೊಡುತ್ತಿದ್ದಾರೆ. ರಾಜ್ಯ ಪ್ರಶಸ್ತಿಗಳನ್ನು ಕೊಡುತ್ತಿದ್ದಾರೆ. ಸಾಂಸ್ಕೃತಿಕವಾಗಿ ಕಾಸರಗೋಡನ್ನು ದಕ್ಷಿಣ ಕನ್ನಡ ಜಿಲ್ಲೆಯ ಭಾಗದಂತೆಯೇ ಕರ್ನಾಟಕ ಸರಕಾರ ಪರಿಗಣಿಸಿದಂತಿದೆ.

ಎಚ್.ಎಸ್.ಜಿ : ಈ ನಿಟ್ಟಿನಲ್ಲಿ ಕೇರಳ ಸರ್ಕಾರದ ಪ್ರೋತ್ಸಾಹ ಹೇಗಿದೆ?

ಕೃಷ್ಣಭಟ್ : ಆಡಳಿತವೊಂದನ್ನು ಬಿಟ್ಟರೆ ಭಾಷೆ, ಸಂಸ್ಕೃತಿ, ಕಲೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕೇರಳ ಸರ್ಕಾರವು ಇಲ್ಲಿ ಕಾಸರಗೋಡು ಎನ್ನುವ ಒಂದು ಪ್ರದೇಶ ಉಂಟು ಎಂಬುದೇ ತಿಳಿದಿಲ್ಲದಂತೆ ವರ್ತಿಸುತ್ತಿದೆ. ಬಹು ವರ್ಷಗಳ ನಂತರ ಈ ಭಾಗದ ಶೇಣಿ ಗೋಪಾಲ ಕೃಷ್ಣಭಟ್ಟರಿಗೆ ಕೇರಳ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಿಕ್ಕಿದೆ.

ಎಚ್.ಎಸ್.ಜಿ : ನೀವು ಆಡಳಿತಾತ್ಮಕವಾಗಿ ಮಾತ್ರ ಕೇರಳದ ಜೊತೆಗಿದ್ದರೂ ಕೂಡಾ ಸಾಂಸ್ಕೃತಿಕವಾಗಿ ಕರ್ನಾಟಕದ ಜೊತೆಗೆ ಇದ್ದೀರಿ.

ಕೃಷ್ಣಭಟ್ : ಹೌದು. ಕರ್ನಾಟಕದ ಜೊತೆಗೆ ಇದ್ದೇವೆ. ನಮ್ಮ ಆರ್ಥಿಕ ಸಂಬಂಧ ಹೆಚ್ಚಿಗೆ ಇರುವುದು ಕರ್ನಾಟಕದ ಮಂಗಳೂರಿನ ಜೊತೆಗೆ ಅಂತೆಯೇ ಬದುಕೂ ಕೂಡಾ. ಕೌಟುಂಬಿಕ ಸಂಬಂಧಗಳೂ ಕೂಡ.

ಎಚ್.ಎಸ್.ಜಿ. : ಕಾಸರಗೋಡನ್ನು ಆಡಳಿತಾತ್ಮಕವಾಗಿ ಕರ್ನಾಟಕಕ್ಕೇ ಸೇರಿಸಬೇಕು ಅನ್ನುವ ತೀವ್ರ ಪ್ರಯತ್ನಗಳೇನಾದರೂ ನಡೆಯುತ್ತವೆಯೆ?

ಕೃಷ್ಣಭಟ್ : ನಡೆಯುತ್ತಿವೆ. ಈಗ ಮೊದಲಿನಂತೆ ಕನ್ನಡಿಗರನ್ನು ಎಚ್ಚರಿಸುವ ಪ್ರಯತ್ನ ಮಾಡಬೇಕಾಗಿದೆ. ಹಿಂದೆ ಕರ್ನಾಟಕ ಸಮಿತಿಯ ಕನ್ನಡ ಅಭ್ಯರ್ಥಿ ಚುನಾವಣೆಯಲ್ಲಿ

ಗೆಲ್ಲುತ್ತಿದ್ದರು. ಈಗ ಕನ್ನಡಕ್ಕಿಂತ ಇನ್ನಿತರ ರಾಜಕೀಯ ಹಿತಾಸಕ್ತಿಗಳೇ ಮುಖ್ಯವಾಗಿದೆ. ಕನ್ನಡದ ಹೆಸರಿನಲ್ಲಿ ಚುನಾವಣೆಯ ಕಾಲ ಈಗಿಲ್ಲ. ಚುನಾವಣೆಗೋಸ್ಕರ ರಾಜಕೀಯ ಪಕ್ಷಗಳೊಡನೆ ಸಂಪರ್ಕ ಈಗ ಪ್ರಮುಖವಾಗಿದೆ.

ಎಚ್.ಎಸ್.ಜಿ : ನಿರಾಶಾವಾದದ ಈ ಅಭಿಪ್ರಾಯ ನಿಮ್ಮದು. ಆದರೆ ಇಲ್ಲಿ ಜನತೆಯ ಅಭಿಪ್ರಾಯ ಹೇಗಿದೆ?

ಕೃಷ್ಣಭಟ್ : ದಕ್ಷಿಣ ಮತ್ತು ಕಾಸರಗೋಡಿನಲ್ಲಿ ಬಹುತೇಕ ಕುಟುಂಬಗಳ ಮನೆ ಮಾತು ಬೇರೆ ಬೇರೆ. ಅದು ತುಳು, ಕೊಂಕಣಿ, ಮಾರಾಠೀ, ಕನ್ನಡ ಇತ್ಯಾದಿಗಳಾಗಿರುತ್ತವೆ. ಆದರೆ ಎಲ್ಲರ ವ್ಯವಹಾರಿಕ ಭಾಷೆ ಕನ್ನಡವೇ ಆಗಿತ್ತು.

ಕಾಸರಗೋಡಿನಲ್ಲಿ ಈಗ ವ್ಯವಹಾರಿಕ ಭಾಷೆ ಪೂರ್ಣವಾಗಿ ಕನ್ನಡವೇ ಆಗಿ ಉಳಿದಿಲ್ಲ. ವ್ಯಾವಹಾರಿಕ ಭಾಷೆ ಕನ್ನಡವೇ ಆಗಿದ್ದ ಕಾಲದಲ್ಲಿ ಏಕೀಕರಣದ ಬಗೆಗೆ ಕಳಕಳಿ ಇತ್ತು.

ಎಚ್.ಎಸ್.ಜಿ : ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವ ನಿಮ್ಮ ಪ್ರಯತ್ನ ಮುಂದುವರಿಯಲಿ. ಆದರಲ್ಲಿ ಫಲ ದೊರಯಲಿ ಅಂತ ನಾವೆಲ್ಲರೂ ಹಾರೈಸುವುದು ಮಾತ್ರವಲ್ಲ. ನಿಮ್ಮ ಜೊತೆಗೆ ನಾವೆಲ್ಲರೂ ಇದ್ದೀವಿ ಅಂತ ತಿಳಿಸಲು ಸಂತೋಷವಾಗುತ್ತದೆ.

ಕೃಷ್ಣಭಟ್ : ನಮಗೆ ಹೊರಗಿನವರ ಬೆಂಬಲವೂ ಬಹಳ ಮುಖ್ಯ.

ಎಚ್.ಎಸ್.ಜಿ : ಕಾಸರಗೋಡಿನ ಕನ್ನಡಿಗರು ನಮ್ಮ ಜೊತೆಗೆ ಬಹುಬೇಗ ಸೇರಲಿ. ನಾವೆಲ್ಲರೂ ಒಂದಾಗುವ ದಿನ ಹತ್ತಿರ ಬರಲಿ ಎಂದು ಹಾರೈಸುತ್ತಾ, ಎಪ್ಪತ್ತು ತುಂಬಿರುವ ನಿಮ್ಮ ಬದುಕು ಸಾರ್ಥಕವಾಗಲಿ ಎಂದು ಎಲ್ಲ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇನೆ.

ಕೃಷ್ಣಭಟ್ : ತುಂಬಾ ಕೃತಜ್ಞತೆಗಳು. ನಮ್ಮ ವೇದನೆಯನ್ನು ಹಂಚಿಕೊಳ್ಳಲು ಅವಕಾಶ ನೀಡಿದ್ದಕ್ಕೆ ಕೃತಜ್ಞತೆಗಳು.

ಎಚ್.ಎಸ್.ಜಿ : ಏನೇ ಆದರೂ ನೀವು ಯಾವಾಗಲೂ ನಮ್ಮವರೇ.

(ಡಾ| ಎಚ್.ಎಸ್. ಗೋಪಾಲ್‌ರಾವ್‌ರ, ಕರ್ನಾಟಕ ಏಕೀಕರಣ ಇತಿಹಾಸ ಕೃತಿಯಿಂದ ಮೇಲಿನ ಸಂದರ್ಶನ ಲೇಖನಗಳನ್ನು ಆಯ್ದುಕೊಳ್ಳಲಾಗಿದೆ)

ಶ್ರೀ ಏರ್ಯ ಲಕ್ಷ್ಮಿ ನಾರಾಯಣ ಆಳ್ವರೊಂದಿಗಿನ ಸಂದರ್ಶನ

ಜಿಲ್ಲೆಯ ಕರ್ನಾಟಕ ಸಾಹಿತಿ ಹಾಗೂ ಸಾಮಾಜಿಕ ಕಾರ್ಯಕರ್ತ ಮಾನ್ಯ ಶ್ರೀ ಏರ್ಯ ಲಕ್ಷ್ಮಿನಾರಾಯಣ ಆಳ್ವರಿಗೆ ಸುವರ್ಣ ಕರ್ನಾಟಕ ವರ್ಷದಲ್ಲಿ ರಾಜ್ಯೋತ್ಸವ ಪ್ರಶಸ್ತಿ ದೊರೆತ ಸಂದರ್ಭದಲ್ಲಿ ಅವರೊಂದಿಗೆ ಏಕೀಕರಣದ ಕುರಿತಂತೆ ನಡೆಸಿದ ಸಂದರ್ಶನ ತುಣುಕು.

○ ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವ ಶುಭ ಅವಸರದಲ್ಲಿ ತಾವು ರಾಜ್ಯ ಪ್ರಶಸ್ತಿಗೆ ಭಾಜನರಾಗಿರುವುದು ತುಳುನಾಡಿಗೆ ಒಂದು ಹೆಮ್ಮೆಯ ವಿಚಾರ. ಈ ಪ್ರಶಸ್ತಿಗೆ ತಮ್ಮ ಪ್ರತಿಕ್ರಿಯೆ ಏನು?

ಮೊದಲಿನಿಂದಲೂ, ಹಲವಾರು ಮಂದಿ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ನನ್ನನ್ನು ಬಹು ಒತ್ತಾಯಿಸುತ್ತಿದ್ದರು. ಈ ರೀತಿಯ ಕ್ರಮ ಮೊದಲಿನಿಂದಲೇ ಜಾರಿಯಲ್ಲಿತ್ತು. ಆದರೆ, ನಾನು ಅವರೆಲ್ಲರ ಮಾತಿಗೆ ಮಣೆ ಹಾಕಲಿಲ್ಲ ಸರಕಾರವೇ ನನ್ನನ್ನು ಗುರುತಿಸಿ, ಪ್ರಶಸ್ತಿ ನೀಡಿತು. ಅದೂ ಕೂಡ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಲಭಿಸಿದುದು ಬಹಳ ಸಂತೋಷದಾಯಕವಾದ ವಿಚಾರ. ಯಾರಿಗೆ ತಾನೇ ಪ್ರಶಸ್ತಿ ಸಂತೋಷ ತರದಿರಬಹುದು ಹೇಳಿ? ಆದರೆ, ಯಾವತ್ತೂ ನಾವು ಪ್ರಶಸ್ತಿಯ ಹಿಂದೆ ಅಲೆಯಬಾರದು, ಪ್ರಶಸ್ತಿಯೇ ನಮ್ಮನ್ನು ಅರಸಿ ಬರಬೇಕು. ಆಗಲೇ ಅದರ ಮೌಲ್ಯ ಹೆಚ್ಚುವುದು.

○ ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ತುಳುವರ ಪಾತ್ರವನ್ನು ಪರಿಚಯಿಸಬಹುದೇ?

ನಮ್ಮ ತುಳುನಾಡು ಎಲ್ಲಾ ರೀತಿಯಿಂದಲೂ ಬೆಳವಣಿಗೆಯ ಮುಂಚೂಣಿಯಲ್ಲಿದ್ದ ನಾಡು. ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಬೆಳವಣಿಗೆ ಹೊಂದಿದ ನಾಡು ಈ ತುಳುನಾಡು. ಇಲ್ಲಿನ ಬಹು ಭಾಷಿಗರು ತುಳುವರಾಗಿದ್ದು, ನಾಲ್ಕು ಬ್ಯಾಂಕುಗಳು ರಾಷ್ಟ್ರೀಕರಣಗೊಂಡಿದ್ದವು. ಪ್ರಾಯಶಃ ಕರ್ನಾಟಕ ಏಕೀಕರಣಕ್ಕೆ ಸೇರ್ಪಡೆಗೊಂಡ ಬಹುವಿಸ್ತಾರವಾದ ಪ್ರದೇಶವೆಂದರೆ ತುಳುನಾಡು ಮೂಲಭೂತ ಸೌಕರ್ಯಗಳೆಲ್ಲಾ ನಮ್ಮ ನಾಡಿನಲ್ಲಿ ಸಂಪದ್ಭರಿತವಾಗಿತ್ತು. ಇಲ್ಲಿನ ಎಲ್ಲಾ ಸಾಹಿತಿಗಳು, ಹೋರಾಟಗಾರರು ಏಕೀರಣಕ್ಕಾಗಿ ತಮ್ಮ ಜೀವ ಲೆಕ್ಕಿಸದೆ ಹೋರಾಡಿದರು. ಅದಕ್ಕಾಗಿಯೇ ಅವರು ಹೊಂದಿದ ಮನೋಭಾವನೆ ದೃಢವಾಗಿತ್ತು.

ಕೆ. ಆರ್. ಕಾರಂತ್‌ರವರ ವಿಶಾಲ ಮನೋಭಾವನೆ, ಕರ್ನಾಟಕ ಏಕೀಕರಣ ಚಳವಳಿಯ ತೀವ್ರತೆಗೆ ಕಾವು ನೀಡಿದಂತಾಗಿ ಏಕೀಕರಣ ಚಳವಳಿ ತುಳುನಾಡಿನಲ್ಲಿ ಜೀವ ಪಡೆಯಿತು. ಅದೇ ರೀತಿ ಬೆನಗಲ್‌ರವರು, ಎಸ್.ಯು.ಪಣಿಯಾಡಿ ಮೊದಲಾದವರು ಈ

ಚಳವಳಿಯಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದರು. ಕರ್ನಾಟಕದ ಮೇಲಿನ ಅಭಿಮಾನ ಎಲ್ಲರಲ್ಲೂ ಅಗಾಧವಾಗಿ ಮೈ ತಳೆದಿತ್ತು.

ಏಕೀಕರಣಕ್ಕಾಗಿ ತುಳುವರು ಬೆವರು ಸುರಿಸಿ ಶ್ರಮಿಸಿದ್ದಾರೆ. ಅದಕ್ಕಾಗಿ ಎಲ್ಲವನ್ನು ಒತ್ತೆಯಿಟ್ಟರು. ಆದರೆ, ಈ ನಿಟ್ಟಿನಲ್ಲಿ ವೀಕ್ಷಿಸುವಾಗ, ಕರ್ನಾಟಕ ಏಕೀಕರಣವಾಗುವುದು ಮೈಸೂರು ಸಂಸ್ಥಾನಕ್ಕೆ ಬೇಕಿರಲಿಲ್ಲ. ಮೈಸೂರು ಉತ್ತಮ ಅಭಿವೃದ್ಧಿ ಹೊಂದಿದ ಬೀಡಾಗಿತ್ತು. ಏಕೀಕರಣದಿಂದ ತಮಗೇ ತೊಂದರೆ ಉಂಟಾಗಬಹುದೆಂಬ ಅಂಬೋಣ ಅವರದಾಗಿತ್ತು. (ದೂರದರ್ಶಿತ್ವ) ಏಕೀಕರಣಕ್ಕೆ ಮತ್ತೊಂದು ತೊಡಕಾದುದೆಂದರೆ ಜಾತಿ ತಾರತಮ್ಯವೆನ್ನಲೂಬಹುದು.

ಂ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಆ ಕಾಲದ ತುಳು ಸಾಹಿತಿಗಳೆಲ್ಲರ ಪಾಲ್ಗೊಳ್ಳುವಿಕೆ ಹೇಗಿತ್ತು?

ಖಂಡಿತವಾಗಿಯೂ ಎಲ್ಲಾ ಸಾಹಿತಿಗಳು ಈ ಏಕೀಕರಣ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಇದೊಂದು ಭಾವನಾತ್ಮಕ ಸೆಳೆತವಾದುದರಿಂದ ಎಲ್ಲಾ ಸಾಹಿತಿಗಳನ್ನು ತನ್ನೆಡೆಗೆ ಕೈಬೀಸಿ ಕರೆಯಿತು. ಇದು ಕರ್ನಾಟಕದ, ಕನ್ನಡಿಗರ ಭಾವನೆಗೆ ಒಳಪಟ್ಟಿದುದರಿಂದ ಸಾಹಿತಿಗಳು ಸಕ್ರಿಯವಾಗಿ ಏಕೀಕರಣಕ್ಕಾಗಿ ಶ್ರಮಿಸಿದರು. ತುಳು ಸಾಹಿತಿಗಳ ಕೊರತೆ ಅಂದು ಕಾಡುತ್ತಿತ್ತು. ಬಹುಸಂಖ್ಯಾತರು ಕನ್ನಡದ ಮೂಲಕವೇ ಸಾಹಿತಿಗಳೆಂಬ ಪಟ್ಟದಾರಿಗಳಾದವರು. ಏಕೀಕರಣದ ಚಳವಳಿಗೆ ಧರ್ಮಸ್ಥಳದ ಹೆಗ್ಗಡೆಯವರ ಸಹಕಾರವೂ ಇತ್ತು. ಜಿನರಾಜ ಹೆಗ್ಡೆಯವರಂತಹ ಪ್ರಭಾವಶಾಲಿಗೆ ಮುಖ್ಯಮಂತ್ರಿಯಾಗುವ ಅವಕಾಶವಿದ್ದರೂ ಅದಕ್ಕವರು ಮುಂದಾಗಲಿಲ್ಲ.

ಸಾಧಾರಣ ಪ್ರತಿಶತ 99%ರಷ್ಟು ಸಾಹಿತಿಗಳು ಕನ್ನಡದ ಮುಖಾಂತರವೇ ಸಾಹಿತ್ಯ ಲೋಕಕ್ಕೆ ಕಾಲಿಟ್ಟರು. ತುಳು ಶಕ್ತಿಯನ್ನು ಅರಿಯದವರೆಷ್ಟೋ ಮಂದಿ ಇದ್ದಾರೆ. ಕಡೆಂಗೋಡ್ಲು ಶಂಕರಭಟ್ಟು, ಕಯ್ಯಾರ ಕಿಂಞ್ಞಣ್ಣ ರೈ ಮೊದಲಾದವರು ತಮ್ಮ ಪ್ರತಿಭೆಯನ್ನು ವೈಯಕ್ತಿಕ ಲಾಭಕ್ಕಾಗಿ ಬಳಸದೆ, ಕರ್ನಾಟಕ ಏಕೀಕರಣಕ್ಕಾಗಿ ಅವಿಶ್ರಾಂತ ದುಡಿದರು. ಅವರ

ಬರಹಗಳೆಲ್ಲಾ ಹೋರಾಟಗಾರರಿಗೆ ಜೀವವಾಹಿನಿಯಾಯಿತು. ಚೈತನ್ಯ ತುಂಬುವ ಸುಧೆಯಾಯಿತು. ಆ ಗತಿಯಲ್ಲಿ ಏಕೀಕರಣ ಚಳವಳಿ ಮುಂದುವರೆಯಿತು. 'ಬೇಡಿಕೆ' ಎಂಬುದು ಯಾವತ್ತಿಗೂ ಶಕ್ತಿಯುತವಾಗಿರಬೇಕು. ಆವಾಗಲೇ, ಯಾವುದೇ ಕಾರ್ಯವು ಬೆಳೆಯಲು ಸಾಧ್ಯ. ಇದೇ ರೀತಿಯ ಕಾರ್ಯಪ್ರವೃತ್ತಿಯು ಏಕೀಕರಣ ಚಳವಳಿ ಮುಂದುವರೆಯಲು ಕಾರಣವಾಯಿತು.

o ತಾವು ಗಮನಿಸಿದಂತೆ ಏಕೀಕರಣದ ಪ್ರಮುಖ ಹಂತಗಳ ಬಗ್ಗೆ ತಿಳಿಸಬಹುದೇ?

ಆ ನಿಟ್ಟಿನಲ್ಲಿ ಗಮನಿಸಿದಾಗ, ಆಲೂರು ವೆಂಕಟರಾಯರು ಸರ್ವಪ್ರಥಮವಾಗಿ ಕಾಣಸಿಗುತ್ತಾರೆ. ಏಕೀಕರಣದ ಬೀಜ ಬಿತ್ತಿದವರೇ ಆಲೂರು ವೆಂಕಟರಾಯರು. ಆ ಬೀಜ ಬೆಳೆದು ಮರವಾಗಲು ಮೂಲ ಕಾರಣಕರ್ತರೂ ಅವರೇ. ಕಾಂಗ್ರೆಸ್ ಚಳವಳಿಯಲ್ಲಿ ಭಾಷಾವಾರು ಪ್ರಾಂತ್ಯದತ್ತ ಬೆಳಕು ಚೆಲ್ಲಿದವರೆಂದರೆ ಗಾಂಧೀಜಿಯವರು. ಇವರ ಪ್ರಕಾರ, ಮಾತೃ ಭಾಷೆಯೇ ಸರಕಾರದ ಭಾಷೆಯಾಗಬೇಕು. ಕರ್ನಾಟಕದ ಎರಡು ಜಿಲ್ಲೆಗಳು ಪಾಂಡಿಚೇರಿ ಪ್ರಾಂತ್ಯದಲ್ಲಿ ಐಕ್ಯವಾಗಿದ್ದವು. ಕರ್ನಾಟಕ ಕಾಂಗ್ರೆಸ್ ಸಮಿತಿ, ತಮಿಳು ಕಾಂಗ್ರೆಸ್ ಸಮಿತಿಯಿದ್ದ ಸಂದರ್ಭದಲ್ಲಿ ಏಕೀಕರಣವಾಗಲಿಲ್ಲ. ಕಾಂಗ್ರೆಸ್ ಕಮಿಟಿ ತಮಿಳುನಾಡಿಗೆ ಮಾತ್ರ ಸೀಮಿತವಾಗಿತ್ತು. ಆದುದರಿಂದ, ಇದು ಕರ್ನಾಟಕಕ್ಕೆ ನಿಲುಕಿರಲಿಲ್ಲ. ಪೊಟ್ಟಿ ಶ್ರೀ ರಾಮುಲುರವರು ಅಮರಣಾಂತ ಉಪವಾಸ ಮಾಡಿ ಸ್ವರ್ಗಸ್ಥರಾದರು. ಅದರಿಂದಾಗಿ, ಅವರ ಶ್ರಮ, ತ್ಯಾಗದ ಫಲವಾಗಿ ಆಂಧ್ರದ ಏಕೀಕರಣವಾಯಿತು. ಇದು ಮಾತೃ ಭಾಷೆಗೆ ಇನ್ನಷ್ಟು ಪ್ರಾಮುಖ್ಯತೆಯನ್ನು ತಂದುಕೊಟ್ಟಿತು. ಇದರಿಂದಾಗಿ ಕರ್ನಾಟಕ ಏಕೀಕರಣಕ್ಕೆ ಪ್ರೋತ್ಸಾಹ ದೊರೆತಂತಾಯಿತು. ತದನಂತರ ಕರ್ನಾಟಕ, ಕೇರಳ, ತಮಿಳುನಾಡು ಏಕೀಕರಣದ ಚಳವಳಿಯೂ ಮುಂದುವರೆಯಿತು.

o ತುಳು ಚಳವಳಿಯು ಕರ್ನಾಟಕ ಏಕೀಕರಣಕ್ಕೆ ವಿರುದ್ಧವಾದ ಚಳವಳಿಯಾಗಿತ್ತೆಂದು ಕೆಲವರ ಅನಿಸಿಕೆ. ಈ ಕುರಿತು ತಮ್ಮ ಅಭಿಪ್ರಾಯವೇನು?

ಖಂಡಿತವಾಗಿಯೂ ಇಲ್ಲ. ತುಳು ಚಳವಳಿ ಕರ್ನಾಟಕ ಏಕೀಕರಣಕ್ಕೆ ಎಂದೂ ವಿರೋಧವಾಗಿರಲಿಲ್ಲ. ಇಲ್ಲಿ ಭಾಷಾ ಸಾಮರಸ್ಯವಿತ್ತು. ಬಹುಭಾಷಾ ಪ್ರದೇಶವಾದ ಕರ್ನಾಟಕಕ್ಕೆ ಬಹು ಹಿಂದಿನಿಂದಲೂ ಹೊರಪ್ರಾಂತ್ಯಗಳ ಜತೆ ಸಂಪರ್ಕವಿತ್ತು.

ಕರ್ನಾಟಕದವರು ಉದಾರ ಮನೋಭಾವಿಗಳೆಂದು ತಿಳಿಯುತ್ತಾರೆ. ಪ್ರಕೃತಿ ಔದಾರ್ಯವೂ ಜತೆಯಾಗಿತ್ತು ಎನ್ನುವುದು ಸುಳ್ಳಲ್ಲ. ಇದಕ್ಕೆ ಜತೆಯಾದದ್ದು ಎಸ್. ಯು. ಪಣಿಯಾಡಿಯವರ ಶ್ರಮ. ಅವರು ತುಳುವಿನ ಏಳ್ಗೆಗಾಗಿ ಹೋರಾಡಿದವರು. ತುಳುನಾಡಲ್ಲಿ ತುಳುನಾಡ ಪ್ರೆಸ್, ಪೈನಾನ್ಸ್ ಮುಂತಾದ ಸಾಹಸಕ್ಕಿಳಿದು ಸೋತು ಹೋದರು. ಆದರೆ ಅವರ ಶ್ರಮ ವ್ಯರ್ಥವಾಗಲಿಲ್ಲ. ಆದುದರಿಂದ ಏಕೀಕರಣಕ್ಕೆ ತುಳುವರ ಸಹಕಾರವಿತ್ತೇ ವಿನಃ ವಿರೋಧವಿಲ್ಲ. ಹಲವಾರು ಸಾಹಿತಿಗಳು ಕನ್ನಡ ಮತ್ತು ತುಳುವೆರಡರಲ್ಲೂ ಸಾಹಿತ್ಯ ರಚಿಸಿದ್ದಾರೆ. ಹಾಗಿರುವಾಗ ತುಳು ಏಕೀಕರಣದ ವಿರೋಧವಾಗಲಿಲ್ಲ.

○ ಪಣಿಯಾಡಿಯವರು ದೃಢನಿಲುವನ್ನು ತಾಳುತ್ತಿದ್ದಲ್ಲಿ ಪ್ರತ್ಯೇಕ ತುಳುರಾಜ್ಯ ಅಸ್ತಿತ್ವಕ್ಕೆ ಬರುತಿತ್ತೇ?

ಪಣಿಯಾಡಿಯವರು ದೃಢನಿಲುವನ್ನು ತಾಳಿತ್ತಿದ್ದಲ್ಲಿ ಏನಾಗುತ್ತಿತ್ತು. ಎಂದು ಊಹಿಸಲೂ ಅಸಾಧ್ಯ. ಇದಕ್ಕೆ ಪ್ರಮುಖವಾಗಿ ಬೇಕಾಗಿರುವುದು ಸಹಕಾರ. ಸ್ವಪ್ರಯತ್ನದೊಂದಿಗೆ ಇತರರ ಸಹಕಾರವೂ. ಯಶಸ್ವಗೆ ಕಾರಣವಾಗುತ್ತದೆ. ಋಗ್ವೇದದಲ್ಲಿ ಒಂದು ಮಾತಿದೆ. "ಪ್ರಪಂಚದ ಎಲ್ಲಾ ಕಡೆಗಳಿಂದಲೂ ಹೊಸ ಉತ್ತಮ ವಿಚಾರಗಳು ನನ್ನೆಡೆಗೆ ಹರಿದು ಬರಲಿ." ಎಂದು. ಇದರರ್ಥ, ನಾವು ಯಾವತ್ತಿಗೂ ಹೊಸ, ಉತ್ತಮ ವಿಚಾರಗಳನ್ನು ತಮ್ಮದಾಗಿಸಿಕೊಳ್ಳಬೇಕು. ಆಗಲೇ ಬದುಕಿಗೆ ಸಾರ್ಥಕತೆ ಬರುತ್ತದೆ. ದ್ವೇಷದಿಂದ ಏನೂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಶಾಂತಿ, ಸಹನೆಯು ಮನುಷ್ಯನಿಗೆ ಮುಖ್ಯವಾಗಿ ಬೇಕು.

○ ತುಳುನಾಡಿನಲ್ಲಿ ಏಕೀಕರಣ ಚಳವಳಿಗೆ ಜನಸಾಮಾನ್ಯರ ಪ್ರತಿಕ್ರಿಯೆ ಹೇಗಿತ್ತು?

ಅವಿಭಜಿತ ದ.ಕ. ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲೇನೂ ಏಕೀಕರಣದ ಚಳವಳಿ ನಡೆಯಲಿಲ್ಲ. ಜನರಿಗೆ ಅದರ ಬಗ್ಗೆ ಅಷ್ಟೊಂದು ಅರಿವೂ ಕೂಡಾ ಇರಲಿಲ್ಲ. ಜನರಿಗೆ ಏಕೀಕರಣದ ಬಗ್ಗೆ ಪರಿಜ್ಞಾನವೂ ಇರಲಿಲ್ಲ. ತಿಳುವಳಿಕೆಯೂ ಇರಲಿಲ್ಲ. ಅವರು ಅವರವರ ಪಾಡಿಗೆ ಇದ್ದರು.

o ಅಂದರೆ ತುಳುನಾಡಿನಲ್ಲಿ ತುಳುವರ ಸಹಕಾರದ ಕೊರತೆ ಇತ್ತೇ?

ಹಾಗೇನಿಲ್ಲ, ಜನರಿಗೆ (ತುಳು ಜನರಿಗೆ) ಏಕೀಕರಣದ ಚಳವಳಿಯ ಅರಿವೆಯೇ ಇರಲಿಲ್ಲ. ಹಾಗಿರುವಾಗ ಜನರ ಸಹಕಾರವನ್ನು ಅಪೇಕ್ಷಸಲು ಸಾಧ್ಯವಾಗಲಿಲ್ಲ. ಉಳಿದಂತೆ ತುಳುನಾಡಲ್ಲಿ ಚಳವಳಿ ಉತ್ತಮವಾಗಿ ಸಾಗಿತ್ತು.

o ಇತ್ತೀಚೆಗೆ ತುಳುನಾಡಲ್ಲಿ ಪ್ರತ್ಯೇಕ ತುಳು ರಾಜ್ಯ ಅಸ್ತಿತ್ವ ಬರುವ ಹೊಸ ಗಾಳಿ ಎದ್ದಿದೆ. ಇದಕ್ಕೆ ತಮ್ಮ ಪ್ರತಿಕ್ರಿಯೆ ಏನು?

ಹಾಗೇನೂ ಇಲ್ಲ. ವ್ಯಕ್ತಿಯೊಬ್ಬನ ವೈಯಕ್ತಿಕ ಹೇಳಿಕೆಯಿಂದಾಗಿ ತುಳುರಾಜ್ಯ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ. ಇದೊಂದು ರೀತಿಯಲ್ಲಿ ವದಂತಿ ಹಬ್ಬಿದಂತೆ ಉದಾರವಾದ ಚಿಂತನೆ ಇಲ್ಲದಿರುವುದೇ ಇದಕ್ಕೆಲ್ಲ ಕಾರಣವಾಗಿದೆ. ಕರ್ನಾಟಕ ಸರ್ವಧರ್ಮ ಸಮನ್ವಯದಿಂದ ಕೂಡಿದೆ. ಒಂದು ಪ್ರಾಂತ್ಯದಲ್ಲಿ ಒಂದು ಭಾಷಿಗರು ಬಹುಸಂಖ್ಯೆಯಲ್ಲಿದ್ದಾರೆಂಬ ಮಾತ್ರಕ್ಕೆ ರಾಜ್ಯ ರಚಿಸಲು ಸಾಧ್ಯವಿಲ್ಲ. ಪ್ರತ್ಯೇಕ ತುಳು ರಾಜ್ಯದ ಅಗತ್ಯತೆಯಾದರೂ ಏನಿದೆ?

o ಏಕೀಕರಣದ ಸಲುವಾಗಿ ಮಂಗಳೂರಿನಲ್ಲಿ ಬೃಹತ್ ಸಭೆಗಳೇನಾದರೂ ನಡೆದಿತ್ತೇ?

ಹೌದು, ಏಕೀಕರಣಕ್ಕೆ ಸಂಬಂಧಪಟ್ಟಂತೆ ಮಂಗಳೂರಿನಲ್ಲಿ ಹಲವಾರು ಸಭೆಗಳು ನಡೆದಿವೆ. 1947ರಲ್ಲಿ ಕಾಸರಗೋಡಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಏಕೀಕರಣಗೋಷ್ಠಿಯೂ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದಿತ್ತು. ಪ್ರತೀ ಸಾಹಿತ್ಯ ಸಮ್ಮೇಳನಗಳಲ್ಲೂ ಏಕೀಕರಣಗೋಷ್ಠಿಗಳು ನಡೆಯುತ್ತಿದ್ದವು. ಇದು ಏಕೀಕರಣ ಚಳವಳಿಗೆ ಪುಷ್ಠಿ ನೀಡಿದ್ದವು.

(ಸುಪ್ರಭಾಕ್ಕೆ ನೀಡಿದ ಸಂದರ್ಶನದ ಆಯ್ದ ಭಾಗ)

ಗ್ರಂಥ ಋಣ :

1. ಪ್ರೊ ಬಿ. ಶೇಕ್ ಅಲಿ ಮತ್ತು ಡಾ. ಸೆಬಾಸ್ಟಿಯನ್ (ಸಂ)- ಕರ್ನಾಟಕ ಚರಿತ್ರೆ, ಸಂಪುಟ 7, 1997
2. ಡಾ. ಎಚ್. ಎಸ್. ಗೋಪಾಲರಾವ್ - ಕರ್ನಾಟಕ ಏಕೀಕರಣ ಇತಿಹಾಸ, 2005
3. ಮುನಿರಾಜ ರೆಂಜಾಳ - ಕೆ.ಬಿ.ಜಿನರಾಜ ಹೆಗ್ಡೆಯವರು, 2001
4. ಮುರಳೀಧರ ಉಪಾಧ್ಯ ಹಿರಿಯಡಕ - ಎಸ್. ಯು. ಪಣೆಯಾಡಿ
5. ನೀರ್ಪಾಜೆ ಭೀಮ ಭಟ್ಟ - ದಕ್ಷಿಣ ಕನ್ನಡ ಸಾಹಿತ್ಯೋಪಾಸಕರು, 1997
6. ಡಾ| ನಾ. ದಾಮೋದರ ಶೆಟ್ಟಿ ಮತ್ತು ಡಾ| ಸತ್ಯನಾರಾಯಣ ಮಲ್ಲಿಪಟ್ಣ - ಹೊಂಬಿದಿರು 2003
7. ಅಡ್ಯನಡ್ಕ ಕೃಷ್ಣಭಟ್ (ಸಂ) ಸುದರ್ಶನ, 1977
8. ಸೇವೆ ನಮಿರಾಜ ಮಲ್ಯ ಮತ್ತು ಕೆ.ಎಸ್. ಉಪಾಧ್ಯಯ (ಸಂ) ಕೋಟ ರಾಮಕೃಷ್ಣ ಕಾರಂತ ಸ್ಮರಣ ಸಂಚಿಕೆ, 1985
9. ಪಾಲಾಕ್ಷ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ
10. ಸುಪ್ರಭಾ ಕಾಲೇಜು ವಾರ್ಷಿಕಾಂಕ ಎಸ್. ವಿ. ಎಸ್. ಬಂಟ್ವಾಳ 2007

❖❖❖❖❖

ಮಕ್ಕಳಿಗಾಗಿ ಕತೆಗಳು

01.	ಕೋಟಿ ಚೆನ್ನಯ	ಡಾ. ವಾಮನ ನಂದಾವರ
02.	ಅಕ್ಕೆರಸು ಸಿರಿ	ಡಾ. ಎ. ವಿ. ನಾವಡ
03.	ಕೋಡ್ದಬ್ಬು	ಡಾ. ಸುಶೀಲಾ ಪಿ. ಉಪಾಧ್ಯಾಯ
04.	ಪರತಿ ಮಂಗನೆ	ಕೆ. ಲೀಲಾವತಿ
05.	ಪುಳ್ಕೂರು ಬಾಚೆ	ವೆಂಕಟರಾಜ ಪುಣಿಂಚತ್ತಾಯ
06.	ಅಬ್ಬಗೆ ದಾರಗೆ	ಕೆ.ಜೆ. ಶೆಟ್ಟಿ ಕಡಂದಲೆ
07.	ಮೂಂಕು ಸಂಬಲೋ	ಡಾ. ಕೆ. ಚಿನ್ನಪ್ಪ ಗೌಡ
08.	ಮಗೆ ಬರವು ಕಲ್ತೆ	ಕನರಾಡಿ ವಾದಿರಾಜ ಭಟ್
09.	ಮಾಯಾಂದಾಲ್	ಯಶವಂತಿ ಸುವರ್ಣ
10.	ಕಲ್ಲುರ್ಟಿ ಕಲ್ಕುಡೆ	ಪ್ರೊ. ಅಮೃತ ಸೋಮೇಶ್ವರ
11.	ಬನ್ನಾಲ್	ಕ್ಯಾಥರಿನ್ ರಾಡ್ರಿಗಸ್
12.	ಮಾಮಿ ಮರ್ಮಲ್	ಡಾ. ಗಣನಾಥ ಶೆಟ್ಟಿ ಎಕ್ಕಾರ್
13.	ಜೋಗಿ ಪುರುಷೆರ್	ಕುದ್ಕಾಡಿ ವಿಶ್ವನಾಥ ರೈ
14.	ಅಗೋಳಿ ಮಂಜಣೆ	ಡಾ. ಗಣೇಶ ಅಮೀನ್ ಸಂಕಮಾರ್
15.	ಕಣ್ಣ್‌ಡ್ ತೂವಂದಿನ ಕೆಬಿಟ್ ಕೇನಂದಿನ	ಕೆ. ಆರ್. ರೈ
16.	ಅಪ್ಪೊದಡ್ಯೆ	ಮುದ್ದು ಮೂಡುಬೆಳ್ಳೆ
17.	ನಾಗಸಿರಿ	ಕೆ. ಅನಂತ ರಾಮ ಬಂಗಾಡಿ
18.	ಮಾಯೊದ ಪೊಣ್ಣು	ಡಿ. ಯದುಪತಿ ಗೌಡ
19.	ಮುಡಿಪ್ಪಿಯೆರಾವಂದಿ ಮಲ್ಲಿಗೆ	ಎನ್. ಕೊಯಿರಾ ಬಾಳೆಪುಣಿ
20.	ಭೂತಾಳ ಪಾಂಡ್ಯ	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್

Pavana Graphics/9343885743